# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಏಪ್ರಿಲ್ 07, 2021

ಸಂಪುಟ : 47 ಸಂಚಿಕೆ : 338 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




**ಯುಗಾದಿಗಾಗಿ ಶಾವಿಗೆ** ಯುಗಾದಿ ಹಬ್ಬಕ್ಕೆ ಕೆಲವೇ ದಿನಗಳು ಬಾಕಿ ಇವೆ. ಹಬ್ಬದ ಮೊದಲನೇ ದಿನ ಶಾವಿಗೆ ಊಟ ಮಾಡುವುದು ವಾಡಿಕೆ. ಈ ಹಿನ್ನೆಲೆಯಲ್ಲಿ ದಾವಣಗೆರೆಯ ಕೆ.ಟಿ.ಜೆ. ನಗರದಲ್ಲಿ ಶಾವಿಗೆ ತಯಾರಿಕೆ ಭರದಿಂದ ನಡೆಯುತ್ತಿದೆ.

# ಲಸಿಕೆ ವಯೋಮಿತಿ ಸಡಿಲಿಕೆಗೆ ನಕಾರ

## ಬಯಸುವವರಿಗೆ ಲಸಿಕೆಯಲ್ಲ, ಅಗತ್ಯವಿರುವವರಿಗೆ ಲಸಿಕೆ : ಕೇಂದ್ರ

ನವದೆಹಲಿ ಏ. 6 – ಕೊರೊನಾ ಲಸಿಕೆ ಪಡೆಯುವ ವಯೋಮಿತಿಯನ್ನು ಕಡಿತಗೊಳಿಸ ಬೇಕು ಎಂಬ ಬೇಡಿಕೆಯನ್ನು ತಳ್ಳಿ ಹಾಕಿರುವ ಕೇಂದ್ರ ಸರ್ಕಾರ, ಯಾರು ಬಯಸುತ್ತಾರೋ ಅವರಿಗೆ ಲಸಿಕೆ ನೀಡುವುದಲ್ಲ, ಯಾರಿಗೆ ಅಗತ್ಯ ಇರುತ್ತದೋ ಅವರಿಗೆ ನೀಡಲಾಗುವುದು ಎಂದು ತಿಳಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಸರ್ಕಾರ ಲಸಿಕೆಯ ವಯೋಮಿತಿ ನಿರ್ಬಂಧ ಸಡಿಲಿಸಿ 18 ವರ್ಷ ಮೀರಿದ ಎಲ್ಲರಿಗೂ ಲಸಿಕೆ ನೀಡಬೇಕೆಂದು ಕೆಲವರು ಒತ್ತಾಯಿಸುತ್ತಿದ್ದಾರೆ. ಆದರೆ, ವಿದೇಶಗಳಲ್ಲೂ ಹಂತ ಹಂತವಾಗಿಯೇ ಲಸಿಕೆ ನೀಡಲಾಗುತ್ತಿದೆ ಎಂದಿದ್ದಾರೆ.



ಲಸಿಕೆಯ ಮೂಲಕ ಸಾವುಗಳನ್ನು ಕಡಿಮೆ ಮಾಡುವುದು ಮೂಲ ಉದ್ದೇಶ. ನಮ್ಮ ಆರೋಗ್ಯ ವ್ಯವಸ್ಥೆಯನ್ನು ರಕ್ಷಿಸಿಕೊಳ್ಳುವುದು ಮತ್ತೊಂದು ಉದ್ದೇಶ. ಆರೋಗ್ಯ ಕಾರ್ಯಕರ್ತರು, ವೈದ್ಯರು, ನರ್ಸ್‌ಗಳು ಮತ್ತಿತರರು ಅನಾರೋಗ್ಯ ಪೀಡಿತರಾದರೆ ಆಸ್ಪತ್ರೆಗಳಲ್ಲಿ ಕೆಲಸ ಮಾಡುವವರು ಯಾರು? ಎಂದು ಭೂಷಣ್ ಪ್ರಶ್ನಿಸಿದ್ದಾರೆ. ಲಸಿಕೆ ನೀಡುವಾಗ (2ನೇ ಪುಟಕ್ಕೆ)

### ಸೋಂಕಿನಿಂದ ದೇಶದ ಪರಿಸ್ಥಿತಿ ಕಠಿಣ

ನವದೆಹಲಿ, ಏ. 6 – ಮಹಾಮಾರಿಯ ತೀವ್ರತೆ ಹೆಚ್ಚಾಗುತ್ತಿದ್ದು ಕೊರೊನಾ ವೈರಸ್ ವೇಗವಾಗಿ ಹರಡುತ್ತಿದೆ ಎಂದು ಹೇಳಿರುವ ಕೇಂದ್ರ ಸರ್ಕಾರ, ಮುಂದಿನ ನಾಲ್ಕು ವಾರ ಕಠಿಣವಾಗಿದೆ ಎಂದು ತಿಳಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ. ವಿ.ಕೆ. ಪೌಲ್, ಸೋಂಕು ಪ್ರಕರಣಗಳು ತೀವ್ರವಾಗಿ ಏರುತ್ತಿರುವುದರಿಂದ ದೇಶದಲ್ಲಿ ಮಹಾಮಾರಿ ಪರಿಸ್ಥಿತಿ ಹದಗೆಟ್ಟಿದೆ. ದೇಶದ ಬಹು ದೊಡ್ಡ ಜನಸಂಖ್ಯೆಯ ಜನರು ಈಗಲೂ ವೈರಸ್ ಅಪಾಯದಲ್ಲಿದ್ದಾರೆ ಎಂದಿದ್ದಾರೆ. ಕೊರೊನಾ ತಡೆಗಾಗಿ ಮಾರ್ಗಸೂಚಿಗಳ ಪಾಲನೆ, ನಿಯಂತ್ರಣ ಕ್ರಮಗಳು, ಪರೀಕ್ಷೆ, ಚಿಕಿತ್ಸಾ ಮೂಲಭೂತ ವ್ಯವಸ್ಥೆಯನ್ನು (2ನೇ ಪುಟಕ್ಕೆ)

## ಮಹಾರಾಷ್ಟ್ರ: ಲಾಕ್‌ಡೌನ್ ವಿರುದ್ಧ ವರ್ತಕರ ಪ್ರತಿಭಟನೆ

### ಮೂರನೇ ದಿನ 90 ಸಾವಿರ ಸೋಂಕಿತರು

ನವದೆಹಲಿ ಏ. 6 – ಮಂಗಳವಾರ ಒಂದೇ ದಿನ ದೇಶದಲ್ಲಿ 96,982 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಸತತ ಮೂರನೇ ದಿನ ದೇಶದಲ್ಲಿ ಸೋಂಕಿತರ ಸಂಖ್ಯೆ 90 ಸಾವಿರಕ್ಕೂ ಹೆಚ್ಚಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಕಳೆದ 24 ಗಂಟೆಗಳಲ್ಲಿ 96 ಸಾವಿರಕ್ಕೂ ಹೆಚ್ಚು ಸೋಂಕಿತರು ಕಂಡು ಬಂದಿದ್ದು, 446 ಜನ ಸಾವನ್ನಪ್ಪಿದ್ದಾರೆ. ಸೋಮವಾರ ದಾಖಲೆಯ 1.03 ಲಕ್ಷ ಸೋಂಕಿತರು ಕಂಡು ಬಂದಿದ್ದರು.

ಕಳೆದ 27 ದಿನಗಳಿಂದ ಸಕ್ರಿಯ ಸೋಂಕಿತರ ಸಂಖ್ಯೆ ಸತತವಾಗಿ ಏರುತ್ತಿದ್ದು, ಈಗ 7.88 ಲಕ್ಷಕ್ಕೆ ತಲುಪಿದೆ.

**ಲಾಕ್‌ಡೌನ್‌ಗೆ ಕೋರ್ಟ್ ಸಲಹೆ :** ಗುಜರಾತ್‌ನಲ್ಲಿ ಕೊರೊನಾ ಪರಿಸ್ಥಿತಿ ಕೈ ಮೀರುತ್ತಿದೆ ಎಂದು ಹೇಳಿರುವ ಗುಜರಾತ್ ಹೈಕೋರ್ಟ್, ಸೋಂಕಿನ ಸರಣಿ ತಪ್ಪಿಸಲು ಮೂರ್ನಾಲ್ಕು ದಿನಗಳ ಕರ್ಫ್ಯೂ ಇಲ್ಲವೇ ಲಾಕ್‌ಡೌನ್ ಹೇರುವಂತೆ ಸಲಹೆ ನೀಡಿದೆ. ರಾಜ್ಯದ (2ನೇ ಪುಟಕ್ಕೆ)

## ನರ್ಸಿಂಗ್ ಕಾಲೇಜಿನ 25 ವಿದ್ಯಾರ್ಥಿನಿಯರು ಸೇರಿ 47ಜನರಲ್ಲಿ ಕೊರೊನಾ ಸೋಂಕು ದೃಢ

ದಾವಣಗೆರೆ, ಏ.6- ನಗರದ ಖಾಸಗಿ ನರ್ಸಿಂಗ್ ಕಾಲೇಜಿನ 25 ವಿದ್ಯಾರ್ಥಿನಿಯರೂ ಸೇರಿದಂತೆ ಜಿಲ್ಲೆಯಲ್ಲಿಂದು 47 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದೆ. ಸಕ್ರಿಯ ಸೋಂಕಿತರ ಸಂಖ್ಯೆ 170ಕ್ಕೆ ಏರಿಕೆಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 39, ಹರಿಹರ 1, ಚನ್ನಗಿರಿ 1, ಹೊನ್ನಾಳಿ 4 ಹಾಗೂ ಹೊರ ಜಿಲ್ಲೆಯ ಇಬ್ಬರಲ್ಲಿ ಸೋಂಕು ಪತ್ತೆಯಾಗಿದೆ. ಮೂವರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾರೆ.

**ನರ್ಸಿಂಗ್ ಕಾಲೇಜಿನ 25 ವಿದ್ಯಾರ್ಥಿಗಳಿಗೆ ಸೋಂಕು:** ನಗರದ ಖಾಸಗಿ ನರ್ಸಿಂಗ್ ಕಾಲೇಜಿನ 25 ವಿದ್ಯಾರ್ಥಿನಿಯರಲ್ಲಿಂದು ಕೊರೊನಾ ಸೋಂಕು ದೃಢಪಟ್ಟಿದೆ. ಎಲ್ಲರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಎಲ್ಲರೂ ಕಾಲೇಜಿನ ವಿದ್ಯಾರ್ಥಿನಿಲಯದಲ್ಲಿ ವಾಸವಿದ್ದು, ಅಲ್ಲಿನ 134 ವಿದ್ಯಾರ್ಥಿನಿಯರು, 15 ಜನ ಅಡುಗೆ ಸಿಬ್ಬಂದಿ ಹಾಗೂ ಪರಿಚಾರಕರ ಗಂಟಲು ಮಾದರಿ ದ್ರವ ಪರೀಕ್ಷೆಗೆ ಪಡೆಯಲಾಗಿದೆ. ವಿದ್ಯಾರ್ಥಿ ನಿಲಯವನ್ನು ಕಂಟೈನ್‌ಮೆಂಟ್ ಝೋನ್ ಎಂದು ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ರಾಘವನ್ ತಿಳಿಸಿದ್ದಾರೆ.

ಎಲ್ಲಾ ವಿದ್ಯಾರ್ಥಿನಿಯರೂ ಕೇರಳ ಮೂಲದವರಾಗಿದ್ದು, ಎರಡು ತಿಂಗಳ ಹಿಂದೆ ಕಾಲೇಜು ಆರಂಭವಾದಾಗ ಬಂದಿದ್ದಾರೆ. ಬರುವಾಗ ಕೊರೊನಾ ನೆಗೆಟಿವ್ ವರದಿ ತಂದಿದ್ದರೆಂದು ಹಾಸ್ಟೆಲ್ ಮೇಲ್ವಿಚಾರಕರು ತಿಳಿಸಿದ್ದಾರೆ ಎಂದ ರಾಘವನ್, ಜಿಲ್ಲೆಯಲ್ಲಿ ರೂಪಾಂತರಿ ಕೊರೊನಾ ವೈರಸ್ ಕಂಡು ಬಂದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

# ಇಂದಿನಿಂದ ಕೆಎಸ್ಸಾರ್ಟಿಸಿ ಮುಷ್ಕರ

## ನೌಕರರ ಜೊತೆ ಮಾತುಕತೆ ನಡೆಸದಿರಲು ಸರ್ಕಾರ ನಿರ್ಧಾರ

ಬೆಂಗಳೂರು, ಏ. 6 - ಸಾರ್ವಜನಿಕರಿಗೆ ನಾಳೆಯಿಂದ ರಾಜ್ಯ ರಸ್ತೆ ಸಾರಿಗೆ ಬಸ್ ಸೇವೆ ದೊರೆಯುವುದಿಲ್ಲ. ಸರ್ಕಾರಿ ನೌಕರರಿಗೆ ನೀಡಲಾಗುತ್ತಿರುವ 6ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ತಮಗೂ ಅನ್ವಯಗೊಳಿಸಬೇಕು ಎಂದು ಸಾರಿಗೆ ನೌಕರರು ಮುಷ್ಕರಕ್ಕೆ ಇಳಿದಿದ್ದಾರೆ.

ನೌಕರ ಬೇಡಿಕೆ ಈಡೇರಿಕೆ ಸಾಧ್ಯವಿಲ್ಲ ಎಂದಿರುವ ಸರ್ಕಾರ ಶೇ. 8ರಷ್ಟು ವೇತನ ಹೆಚ್ಚಳಕ್ಕೆ ಅನುಮತಿ ನೀಡಿದೆ. ಆದರೆ, ಆರನೇ ವೇತನ ಆಯೋಗದ ಶಿಫಾರಸ್ಸು ಜಾರಿಗೊಳಿಸುವ ಮಾತೇ ಇಲ್ಲ. ಇನ್ನು ಮುಂದೆ ಸಾರಿಗೆ ನೌಕರರ ಜೊತೆ ಮಾತುಕತೆಯೂ ಇಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಮುಷ್ಕರದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಗೃಹ ಕಚೇರಿ ಕೃಷ್ಣಾದಲ್ಲಿಂದು ಅಧಿಕಾರಿಗಳ ಜೊತೆ ಸಭೆ ನಡೆಸಿ ಮೊಟ್ಟ ಮೊದಲ ಬಾರಿಗೆ ಇಂತಹ ಕಠಿಣ ನಿರ್ಧಾರ ಕೈಗೊಂಡರು.



ಸಭೆ ನಂತರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಸರ್ಕಾರದ ಮುಖ್ಯಕಾರ್ಯದರ್ಶಿ ಪಿ. ರವಿಕುಮಾರ್, ಕೊರೊನಾ ಸಂಕಷ್ಟದ ಈ ಸಂದರ್ಭದಲ್ಲಿ ಸಾಧ್ಯವಾಗದಂತಹ ಬೇಡಿಕೆ ಮುಂದಿಟ್ಟುಕೊಂಡು ಮುಷ್ಕರ ನಡೆಸುತ್ತಿರುವುದು ಸರಿಯಲ್ಲ ಎಂದರು.

ಕೊರೊನಾ ಹಾಗೂ ಲಾಕ್‌ಡೌನ್‌ನಿಂದ ಸಾರಿಗೆ ನಿಗಮಗಳು ಭಾರೀ ನಷ್ಟದಲ್ಲಿವೆ. ನೌಕರರಿಗೆ ತೊಂದರೆ ಆಗಬಾರದೆಂದು ಸರ್ಕಾರವೇ ವೇತನ ನೀಡುತ್ತಿದೆ.

ಸಾಂಕ್ರಾಮಿಕ ರೋಗಕ್ಕೆ ಹೆದರಿ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ. 50ರಷ್ಟು ಕಡಿಮೆಯಾಗಿದೆ, ಇದರಿಂದ ನಿಗಮಕ್ಕೆ ದಿನನಿತ್ಯ ನಾಲ್ಕು ಕೋಟಿ ರೂ. ನಷ್ಟವಾಗುತ್ತಿದೆ. ನೌಕರರ 9 ಬೇಡಿಕೆಗಳಲ್ಲಿ ಈಗಾಗಲೇ 8 ಬೇಡಿಕೆಗಳನ್ನು (2ನೇ ಪುಟಕ್ಕೆ)

### ನಿಗಮದಿಂದ ಎಸ್ಮಾ ಜಾರಿ

**ಬೆಂಗಳೂರು, ಏ. 6 - ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರು ಯಾವುದೇ ರೀತಿಯ ಮುಷ್ಕರ ಹೂಡುವಂತಿಲ್ಲ, ಎಂದಿನಂತೆ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರ್ನಾಟಕ ಅಗತ್ಯ ಸೇವಾ ನಿರ್ವಹಣಾ ಕಾಯಿದೆಯಡಿ ಸರ್ಕಾರ ಎಸ್ಮಾ ಜಾರಿಗೊಳಿಸಿದೆ.**

**ಸಂಘ, ಸಂಸ್ಥೆ ಅಥವಾ ವ್ಯಕ್ತಿಗಳು ಸಾರಿಗೆ ಸಂಸ್ಥೆಯ ನೌಕರರು ಮುಷ್ಕರ ಹೂಡುವಂತೆ ಪ್ರಚೋದಿಸುವಂತಿಲ್ಲ ಹಾಗೂ ಬೆಂಬಲ ಸಹ ವ್ಯಕ್ತಪಡಿಸುವಂತಿಲ್ಲ ಎಂದು ಆದೇಶದಲ್ಲಿ ಸ್ಪಷ್ಟಪಡಿಸಿದೆ.**

**ಸಾರಿಗೆ ನೌಕರರ ಮುಷ್ಕರದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಉನ್ನತ ಮಟ್ಟದ ಸಭೆ ನಡೆಸಿ, ಕಠಿಣ ನಿರ್ಧಾರ ಕೈಗೊಳ್ಳುತ್ತಿದ್ದಂತೆ ಸಂಬಂಧಪಟ್ಟ ಸಾರಿಗೆ ನಿಗಮಗಳು ಎಸ್ಮಾ ಜಾರಿಗೊಳಿಸಿವೆ.**

**ದೈನಂದಿನ ಕರ್ತವ್ಯಕ್ಕೆ ಗೈರು ಹಾಜರಾದರೆ ಅಂತಹವರಿಗೆ ವೇತನವಿಲ್ಲ, ದಿನದ ವೇತನ ಕಡಿತಗೊಳಿಸುವ ಜೊತೆಗೆ ಆಡಳಿತ ವರ್ಗವು ಅನಧಿಕೃತವಾಗಿ ಗೈರು ಹಾಜರಾದ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಬಹುದಾಗಿದೆ.**


**ನ್ಯಾಯಾಲಯ ಈ ಹಿಂದೆ ನೀಡಿರುವ ತೀರ್ಪುಗಳನ್ನು ಆಧಾರವಾಗಿಟ್ಟುಕೊಂಡು ಮುಷ್ಕರ ನಿರತರು ಮತ್ತು ಗೈರು ಹಾಜರಾದವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದಿದೆ.**

## ಸೋಂಕಿತರಲ್ಲಿ ಮಧ್ಯವಯಸ್ಕರೇ ಹೆಚ್ಚು

### ಸಾವಿನ ಆಡಿಟ್ ಮಾಡಿಸಲು ತಾಂತ್ರಿಕ ಸಲಹಾ ಸಮಿತಿಗೆ ಸೂಚನೆ : ಸುಧಾಕರ್

ಬೆಂಗಳೂರು, ಏ. 6 - ಯುವಜನರು ಮತ್ತು ಮಧ್ಯ ವಯಸ್ಸಿನವರು ಕೊರೊನಾ ಸೋಂಕಿಗೆ ಒಳಗಾಗುತ್ತಿರುವುದು ಆತಂಕಕ್ಕೆ ಎಡೆ ಮಾಡಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಪ್ರತಿಕ್ರಿಯಿಸಿದ್ದಾರೆ.

ರಾಜ್ಯದಲ್ಲಿ ಸಾವಿನ ಸಂಖ್ಯೆ ಹೆಚ್ಚುತ್ತಿದೆ, ನಿನ್ನೆ ಒಂದೇ ದಿನ 32 ಮಂದಿ ಸಾವೀಗೀಡಾಗಿದ್ದಾರೆ, ಇವರಲ್ಲಿ ಹೆಚ್ಚಿನವರು ಕಡಿಮೆ ವಯಸ್ಸಿನವರಾಗಿರುವುದು ತೀವ್ರ ಆತಂಕಕಾರಿ ಬೆಳವಣಿಗೆಯಾಗಿದೆ ಎಂದರು. ಸುದ್ದಿಗಾರರೊಂದಿಗೆ ಮಾತನಾ



ಡಿದ ಅವರು, ಸೋಂಕಿನ ತೀವ್ರತೆಯನ್ನು ಗಮನದಲ್ಲಿಟ್ಟುಕೊಂಡು ಸಾವಿನ ಆಡಿಟ್ ಮಾಡಿಸುವಂತೆ ತಾಂತ್ರಿಕ ಸಲಹಾ ಸಮಿತಿಗೆ ಸೂಚಿಸಲಾಗಿದೆ ಎಂದರು.

ಮೊದಲ ಅಲೆಗೆ ಹೋಲಿಸಿದರೆ ಎರಡನೇ ಅಲೆ ತೀವ್ರಗತಿಯಲ್ಲಿ ಹರಡುತ್ತಿದೆ, ದೇಶದಲ್ಲಿ ಒಂದೇ ದಿನದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಂದಿಗೆ ಸೋಂಕು ತಗುಲಿದೆ, ಸಾವಿನ ಸಂಖ್ಯೆಯೂ ಹೆಚ್ಚುತ್ತಿದೆ ಎಂದವರು ಹೇಳಿದ್ದಾರೆ.

ಸಾಂಕ್ರಾಮಿಕ ಸ್ಥಿತಿ ಎದುರಿಸಲು ಅಗತ್ಯ ಸಿದ್ಧತೆಗಳನ್ನು ಮಾಡಲಾಗಿದೆ. ಈವರೆಗೆ 48.05 ಲಕ್ಷ ಜನರಿಗೆ ಕೋವಿಡ್ ಸೋಂಕು ನಿಯಂತ್ರಣ ಲಸಿಕೆ ನೀಡಲಾಗಿದೆ.

60 ವರ್ಷ ಮೇಲ್ಪಟ್ಟ ಇಪ್ಪತ್ತೆರಡೂವರೆ ಲಕ್ಷ ಜನರಿಗೆ, 45-59 ವರ್ಷ ವಯಸ್ಸಿನ 10.4 ಲಕ್ಷ ಮಂದಿಗೆ ಲಸಿಕೆ ನೀಡಲಾಗಿದೆ. (2ನೇ ಪುಟಕ್ಕೆ)

## ಸುಪ್ರೀಂ ಸಿಜೆಐ ಆಗಿ ಎನ್.ವಿ. ರಮಣ ನೇಮಕ



ನವದೆಹಲಿ, ಏ. 6- ಸುಪ್ರೀಂ ಕೋರ್ಟ್‌ನ ಅತ್ಯಂತ ಹಿರಿಯ ನ್ಯಾಯಮೂರ್ತಿ ಎನ್.ವಿ. ರಮಣ ಅವರನ್ನು ಸುಪ್ರೀಂ ಕೋರ್ಟ್ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಗಿದೆ. ಅವರು ಏಪ್ರಿಲ್ 24ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಹಾಲಿ ಇರುವ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರು ಏಪ್ರಿಲ್ 23ರಂದು ನಿವೃತ್ತರಾಗಲಿದ್ದಾರೆ. ನ್ಯಾಯಮೂರ್ತಿ ರಮಣ ಅವರ ಅಧಿಕಾರವಧಿ ಆಗಸ್ಟ್ 26, 2022ರವರೆಗೆ ಇರಲಿದೆ.

## ರಫೇಲ್ ಕರ್ಮದಿಂದ ತಪ್ಪಿಸಿಕೊಳ್ಳಲಾಗದು ರಾಹುಲ್ ಗಾಂಧಿ

ನವದೆಹಲಿ, ಏ. 6- ರಫೇಲ್ ವಿಮಾನ ಖರೀದಿಗೆ ಸಂಬಂಧಿಸಿದಂತೆ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕರ್ಮದಿಂದ ಯಾರೂ ತಪ್ಪಿಸಿಕೊಳ್ಳಲಾಗದು ಎಂದಿದ್ದಾರೆ.

ರಫೇಲ್ ವಿಮಾನ ಉತ್ಪಾದಿಸುವ ಕಂಪನಿಯಾದ ಡಸಾಲ್ಟ್, ಮಧ್ಯವರ್ತಿಗಳಿಗೆ 1.1 ಲಕ್ಷ ಯೂರೋ ಹಣ ನೀಡಿತ್ತು ಎಂದು ಫ್ರಾನ್ಸ್ ಮಾಧ್ಯಮವೊಂದು (2ನೇ ಪುಟಕ್ಕೆ)

## ಸೈನಿಕ ಪತಿ ಮರಣದ 69 ವರ್ಷದ ನಂತರ ಪತ್ನಿಗೆ ಪಿಂಚಣಿ

ಪಿತೋರ್‌ಘಡ್ (ಉತ್ತರಾಖಂಡ), ಏ. 6 – ಪತಿಯ ಮರಣದ 69 ವರ್ಷಗಳ ನಂತರ ಮಾಜಿ ಸೈನಿಕರೊಬ್ಬರ 81 ವರ್ಷದ ಪತ್ನಿ ಪಿಂಚಣಿಗೆ ಅರ್ಹತೆ ಪಡೆದುಕೊಂಡಿದ್ದಾರೆ.

ಸಾಮಾಜಿಕ ಕಾರ್ಯಕರ್ತ ಡಿ.ಎಸ್ ಭಂಡಾರಿ ಅವರು ವೃದ್ಧೆಯ ಸಂಕಷ್ಟ ಗಮನಿಸಿ ಅವರಿಗೆ ನೆರವಾಗಿದ್ದಾರೆ. 12 ವರ್ಷದಲ್ಲೇ ಮದುವೆಯಾಗಿದ್ದ ಮಹಿಳೆ, ನಂತರ ಪತಿಯನ್ನು ಕಳೆದುಕೊಂಡಿದ್ದರು.

ಪರುಲಿ ದೇವಿ ಅವರ ಪತಿ ಗಗನ್ ಸಿಂಗ್ ಸೈನ್ಯದ ಸೇವೆಯಲ್ಲಿದ್ದಾಗಲೇ ಮರಣ ಹೊಂದಿದ್ದರು. ಪಿಂಚಣಿಗಾಗಿ ದೇವಿ ಸಾಕಷ್ಟು ಅಲೆದಾಡಿದರೂ (2ನೇ ಪುಟಕ್ಕೆ)

## ಜಿಲ್ಲಾಸ್ಪತ್ರೆಗೆ ಡಿಸಿ ದಿಢೀರ್ ಭೇಟಿ

ದಾವಣಗೆರೆ, ಏ. 6- ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು, ಎಸ್ಪಿ ಹನುಮಂತರಾಯ ಅವರೊಂದಿಗೆ ಜಿಲ್ಲಾ ಚಿಗಟೇರಿ ಆಸ್ಪತ್ರೆಗೆ ಮಂಗಳವಾರ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಿದರು.

ಆಸ್ಪತ್ರೆಯ ಇಎಂಸಿಯು, ಐಸೋಲೇಷನ್ ಹಾಗೂ ಐಸಿಯು ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳ ಕುರಿತು ಶಸ್ತ್ರಚಿಕಿತ್ಸಕರು ಮತ್ತು ಇತರೆ ವೈದ್ಯರ ಬಳಿ ವಿಚಾರಿಸಿದರು. ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಲು, ಗುಣಮಟ್ಟದ ಆಹಾರ ಪೂರೈಕೆ, ಆಸ್ಪತ್ರೆಯ ಕೊಠಡಿಗಳನ್ನು ಹಾಗೂ ಹೊರ ಆವರಣದ ಸ್ವಚ್ಛತೆ ಕುರಿತು ವೈಯಕ್ತಿಕ ಗಮನ ಹರಿಸುವಂತೆ ಜಿಲ್ಲಾ ಶಸ್ತ್ರಚಿಕಿತ್ಸಕರಿಗೆ ಸೂಚನೆ ನೀಡಿದರು.

ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿ ರುವ ವೈದ್ಯರುಗಳು ಹಾಗೂ ಸಿಬ್ಬಂದಿಗಳು ಆಸ್ಪತ್ರೆಗೆ ಬರುವ ರೋಗಿಗಳಿಗೆ ಮತ್ತು ಸಾರ್ವಜನಿಕರಿಗೆ ಸರ್ಕಾರದ ಯೋಜನೆಗಳ ಕುರಿತು ಅರಿವು ಮೂಡಿಸಿ ಅವರುಗಳಿಗೆ ಪ್ರಯೋಜನ ಸಿಗುವ ಹಾಗೆ ಕ್ರಮ ವಹಿಸುವಂತೆ (6ನೇ ಪುಟಕ್ಕೆ)

# ಎಸ್ಸೆಸ್ಸೆಂ ಅವರ ಐಸಿಪಿಎಲ್ ಹೆಚ್ಚು ಕಬ್ಬು ಅರೆದು ಸಕ್ಕರೆ ಉತ್ಪಾದಿಸುವಲ್ಲಿ ದೇಶದಲ್ಲೇ ಪ್ರಥಮ



ದಾವಣಗೆರೆ, ಏ.6-ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿರುವ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ ಮಾಲೀಕತ್ವದ ಇಂಡಿಯನ್ ಪವರ್ ಲಿಮಿಟೆಡ್ ಸಕ್ಕರೆ ಕಾರ್ಖಾನೆಯು ಅತಿ ಹೆಚ್ಚು ಟನ್ ಕಬ್ಬು ಅರೆದು ಸಕ್ಕರೆ ಉತ್ಪಾದಿಸುವಲ್ಲಿ ರಾಜ್ಯದಲ್ಲಿ ಮಾತ್ರವಲ್ಲದೇ, ದೇಶದಲ್ಲೇ ಪ್ರಥಮ ಸ್ಥಾನ ಪಡೆದಿದೆ.

ಪ್ರಸಕ್ತ ವರ್ಷ ಕಾರ್ಖಾನೆಯಲ್ಲಿ 20,14,850 ಮೆಟ್ರಿಕ್ ಟನ್ ಕಬ್ಬು ಅರೆದು ಸಕ್ಕರೆ ಉತ್ಪಾದಿಸಿರುವುದು ಸಿಂಗಲ್ ಕಾಂಪ್ಲೆಕ್ಸ್ ಕಾರ್ಖಾನೆಗಳ ಪೈಕಿ ಭಾರತದಲ್ಲಿಯೇ ಪ್ರಥಮವಾಗಿದೆ. ಕಳೆದ ವರ್ಷ ಇದೇ ಕಾರ್ಖಾನೆ 10.75 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆದು ಸಕ್ಕರೆ ಉತ್ಪಾದನೆ ಮಾಡಿತ್ತು.

ಕಾರ್ಖಾನೆ ನಿರ್ಮಾಣ 2005ರಿಂದ ಆರಂಭವಾಗಿ, 2008ಕ್ಕೆ ಕೆಲಸ ಆರಂಭಿಸಿತ್ತು. ಆರಂಭದಲ್ಲಿ ದಿನಕ್ಕೆ 5 ಸಾವಿರ ಮೆಟ್ರಿಕ್ ಟನ್ ಕಬ್ಬು ಅರೆಯುವ ಸಾಮರ್ಥ್ಯ, 28 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಮಾತ್ರ ಹೊಂದಿದ್ದ ಕಾರ್ಖಾನೆ ನಂತರ 2018ಕ್ಕೆ ತನ್ನ ಸಾಮರ್ಥ್ಯವನ್ನು 24 ಸಾವಿರ ಮೆಟ್ರಿಕ್ ಟನ್ ಮತ್ತು ವಿದ್ಯುತ್ ಉತ್ಪಾದನೆ ಸಾಮರ್ಥ್ಯ 83 ಮೆಗಾವ್ಯಾಟ್ ಗೆ ಹೆಚ್ಚಿಸಿಕೊಂಡಿತ್ತು.

ಒಟ್ಟಾರೆ ಕಬ್ಬು ಅರೆಯುವ ಹಾಗೂ ವಿದ್ಯುತ್ ಉತ್ಪಾದಿಸುವಲ್ಲಿ ಐಸಿಪಿಎಲ್ ಕಾರ್ಖಾನೆ ದೇಶದಲ್ಲಿಯೇ ಪ್ರಥಮ ಸ್ಥಾನ ಪಡೆದಿರುವುದು ಹೆಮ್ಮೆಯ ವಿಚಾರವಾಗಿದೆ ಎಂದು ಎಸ್.ಎಸ್. ಮಲ್ಲಿಕಾರ್ಜುನ್ ಸಂತಸ ವ್ಯಕ್ತಪಡಿಸಿದ್ದಾರೆ.

**ಯಶಸ್ವಿ ಉದ್ದಿಮೆದಾರರನ್ನು ಗೌರವಿಸಲು ಒತ್ತಾಯ:** ಶಾಸಕ ಶಾಮನೂರು ಶಿವಶಂಕರಪ್ಪ ಅವರ ಮಾರ್ಗದರ್ಶನದಲ್ಲಿ ದೇಶ ವಿದೇಶಗಳನ್ನು ಸುತ್ತಿ ಸದಾ ಹೊಸ ಆವಿಷ್ಕಾರ, ವಿಶಿಷ್ಟ ರೀತಿಯ ಯೋಜನೆಗಳನ್ನು ರೂಪಿಸುವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಈ ಸಾಧನೆಗೆ ಕಾರಣೀಕರ್ತರಾಗಿದ್ದು, ಯಶಸ್ವಿ ಉದ್ದಿಮೆದಾರರನ್ನು ಗೌರವಿಸಿ, ಪ್ರಶಸ್ತಿ ನೀಡುವ ಮೂಲಕ ಉತ್ತೇಜಿಸಬೇಕು ಎಂದು ಕೆಪಿಸಿಸಿ ಸಾಮಾಜಿಕ ಜಾಲ ತಾಣ ವಿಭಾಗದ ರಾಜ್ಯ ಕಾರ್ಯದರ್ಶಿ ಕೆ.ಎಲ್. ಹರೀಶ್ ಬಸಾಪುರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಎಸ್ಸೆಸ್ಸೆಂ ಅವರು ಪ್ರಾರಂಭಿಸಿರುವ ಕಾರ್ಖಾನೆಯಂತೆ ಜಿಲ್ಲೆಯಲ್ಲಿಯೂ ಹೊಸ ಕಾರ್ಖಾನೆಗಳನ್ನು ಸರ್ಕಾರವು ಪ್ರಾರಂಭಿಸಿ ಜಿಲ್ಲೆಯ ಯುವಕರಿಗೆ ಉದ್ಯೋಗ ಸೃಷ್ಟಿ ಮಾಡಿಕೊಡಬೇಕು ಎಂದವರು ಹೇಳಿದ್ದಾರೆ.


MANIS DATA LINK
BSNL
# 446/1, Lawyer Road, K.B.Extension, Davanagere.
ನಿಮ್ಮಲ್ಲಿರುವ ಹಳೇ ಲ್ಯಾಂಡ್ ಲೈನ್ ನಂಬರ್‌ಗೆ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಲಾಗುವುದು
3300 GB
60 Mbps
Super Speed Inter Net
24 Hrs. Unlimited free Calling on (Local + STD) to Any Network, FTTH Plan
Starting Plan
Rs.599/-
Instalation Free
PH: 08192 295900



॥ ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ ॥
ಪ್ರಥಮ ವರ್ಷದ ಪುಣ್ಯಸ್ಮರಣೆ



ಜನನ 15.04.1945
ನಿಧನ 07.04.2020
ದಿ. ಗೌಡ್ರ ಎಂ. ಮಲ್ಲಪ್ಪನವರ ಮಗ
ಗೌಡ್ರ ಡಾ॥ ಎಂ. ರಾಮಚಂದ್ರಪ್ಪ
ದಾವಣಗೆರೆ, (ಹಿಂಡಿಸಕಟ್ಟೆ)
ನೀವು ನಮ್ಮನ್ನಗಲಿ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿರುವ....
ತಾಯಿ: ಗೌಡ್ರ ಎಂ.ಮಂಜಮ್ಮ, ಪತ್ನಿ: ಡಾ॥ ಎ.ಪಾರ್ವತಮ್ಮ, ಮಗ : Er. ಭರತ್ ಗೌಡ ಎಂ.ಆರ್.
ಮಗಳು ಮತ್ತು ಅಳಿಯ ಡಾ॥ ಪವಿತ್ರ ಎಂ.ಆರ್, ಡಾ॥ ಸಂದೀಪ್ ದಂಡಿನ್
ಸಹೋದರ ಮತ್ತು ಸೊಸೆ: Er.ಗೌಡ್ರ ಎಂ. ಮಂಜುನಾಥ, ಶ್ರೀಮತಿ ರಾಜೇಶ್ವರಿ
ಸಹೋದರಿಯರು ಮತ್ತು ಅಳಿಯಂದಿರು: ♦ ಶ್ರೀಮತಿ ನಾಗರತ್ನಮ್ಮ ಎಂ., ಡಾ॥ ಎಲ್.ಎಲ್. ದಂಡಿನ್
♦ ಶ್ರೀಮತಿ ಎಂ.ಶಾರದಮ್ಮ ಪೂಜಾರ್ ♦ ಶ್ರೀ ಮಹಾಬಲೇಶ್ವರಪ್ಪ ದೊಡ್ಡಮನಿ
♦ ಶ್ರೀಮತಿ ಶಾಂತಕುಮಾರಿ ಎಂ. ನಾಗರಾಜ ದೊಡ್ಡಮನಿ
♦ ಶ್ರೀಮತಿ ರೇಣುಕಾ ಉಪ್ಪಾರ್, Er. ಲಕ್ಷ್ಮಣ ಉಪ್ಪಾರ್
ಮೊ: 94488 72612, 85532 17632

# ಜಿಲ್ಲಾ ನಾಗರಿಕ ಹಿತರಕ್ಷಣಾ ಸಮಿತಿಯಿಂದ ಶ್ರದ್ಧಾಂಜಲಿ



ದಾವಣಗೆರೆ, ಏ.6- ಛತ್ತೀಸ್ ಗಡದಲ್ಲಿ ನಕ್ಸಲರ ದಾಳಿಗೆ ಬಲಿಯಾದ ವೀರ ಯೋಧರಿಗೆ ಜಿಲ್ಲಾ ನಾಗರಿಕ ಹಿತರಕ್ಷಣಾ ಸಮಿತಿ ವತಿಯಿಂದ ನಗರದಲ್ಲಿಂದು ಸಂಜೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಸಮ್ಮುಖದಲ್ಲಿ ಭಾವಪೂರ್ಣ ನಮನ ಸಲ್ಲಿಸಲಾಯಿತು.

ರಿಂಗ್ ರಸ್ತೆಯಲ್ಲಿನ ಕ್ಲಾಕ್ ಟವರ್ ಅಮರ್ ಜವಾನ್ ವೃತ್ತದಲ್ಲಿ ಸಮಿತಿ ಪದಾಧಿಕಾರಿಗಳ ಜೊತೆಗೂಡಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಮೇಣದ ಬೆಳಕು ಮೂಡಿಸಿ, ಒಂದು ನಿಮಿಷ ಮೌನಾಚರಣೆ ಮಾಡುವುದರ ಮುಖಾಂತರ ಹುತಾತ್ಮ ಯೋಧರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸಿದರು.

ದೇಶದ ಜನರ ರಕ್ಷಣೆಗಾಗಿ ತಮ್ಮ ಜೀವ ಮುಡಿಪಾಗಿಟ್ಟು ವೀರ ಯೋಧರ ಸ್ಮರಣೆ ಸದಾ ನಾವು ಮಾಡಬೇಕು. ಯೋಧರು ಸಂಕಷ್ಟ, ಸಂಘರ್ಷಗಳ ಮಧ್ಯೆ ತಮ್ಮ ಬದುಕು ಸವೆಸುತ್ತಾ ದೇಶದ ಜನರಿಗೆ ನೆಮ್ಮದಿ ಬದುಕನ್ನು ಕಟ್ಟಿಕೊಡುತ್ತಿದ್ದಾರೆ. ಇದನ್ನು

**ಮೇಣದ ಬೆಳಕು ಮೂಡಿಸಿದ ಡಿಸಿ ಮಹಾಂತೇಶ್ ಬೀಳಗಿ**

ಎಂದೂ ಮರೆಯಬಾರದು ಎಂದ ಅವರು, ಯೋಧರನ್ನು ಸ್ಮರಿಸುವ ಕಾರ್ಯಕ್ರಮಗಳು ಯುವ ಸಮೂಹಕ್ಕೆ ಪ್ರೇರಣೆಯಾಗಬೇಕು. ದೇಶದ ರಕ್ಷಣೆಗೆ ನಿಲ್ಲಲು ಸದೃಢರಾಗಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಟಿ. ಯುವರಾಜ್, ಪದಾಧಿಕಾರಿಗಳಾದ ಶಿವು ಶೆಟ್ಟಿ, ಗಂಗಾಧರ್, ಪ್ರಕಾಶ್, ರಾಮಚಂದ್ರ, ಡಿ. ಜೆ. ರವಿ, ಮುಖಂಡರಾದ ರವಿ ಸ್ವಾಮಿ, ಮಂಜುನಾಥ್, ಕುಮಾರ್, ರಘು, ವಿನಯ್ ಜೋಗಪ್ಪನವರ್, ಪ್ರತಾಪ್, ಅಭಿಷೇಕ್, ರಘು, ನಾಗರಾಜ್, ವಾಸು, ಪ್ರಕಾಶ್ ಸೇರಿದಂತೆ ಇತರರು ಇದ್ದರು.

# ಹುತಾತ್ಮ ಯೋಧರಿಗೆ ಜಿಲ್ಲಾ ಕಾಂಗ್ರೆಸ್ ನಮನ

ದಾವಣಗೆರೆ, ಏ.6- ಛತ್ತೀಸ್ ಘಡದ ಸುಕ್ಮಾ-ಬಿಜಾಪುರ ಅರಣ್ಯ ಪ್ರದೇಶದಲ್ಲಿ ನಡೆದ ಅತೀ ಭೀಕರ ನಕ್ಸಲ್ ದಾಳಿಗೆ ಹುತಾತ್ಮರಾದ 22 ವೀರ ಯೋಧರಿಗೆ ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದಲ್ಲಿಂದು ಸಂಜೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ರಾಂ ಅಂಡ್ ಕೋ ವೃತ್ತದಲ್ಲಿ ಜಮಾಯಿಸಿದ್ದ ಪಕ್ಷದ ಮುಖಂಡರು, ಕಾರ್ಯಕರ್ತರು ಮೇಣದ ಬೆಳಕು ಮೂಡಿಸಿ, ದೇಶದ ರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡಿ ವೀರ ಮರಣವನ್ನಪ್ಪಿದ ಹುತಾತ್ಮ ಯೋಧರ ದೇಶ ಸೇವೆಯನ್ನು ಸ್ಮರಿಸಲಾಯಿತು. ಅಲ್ಲದೇ ಅವರುಗಳ ಆತ್ಮಕ್ಕೆ ಶಾಂತಿ ಕೋರಲಾಯಿತು.

ವೀರ ಯೋಧರು ಅಮರರಾಗಲಿ ಎಂದು ಜಯಘೋಷ ಹಾಕಿ, ಯೋಧರ ಸಾವಿಗೆ ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಧೋರಣೆ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮಾತನಾಡಿ, ದೇಶದ ಚೌಕಿದಾರ್ ಎಂದು ಹೇಳಿದ ಪ್ರಧಾನಿ ಮೋದಿ ಅವರ ಆಡಳಿತದಲ್ಲಿ ಸಾವಿರಾರು ಯೋಧರು ಹತರಾದರು. ಆದರೆ ಈ ಬಗ್ಗೆ ಕೇಂದ್ರ ಸರ್ಕಾರ ಗಮನ ಹರಿಸದೇ ಯೋಧರ ಹೆಸರಿನಲ್ಲಿ ರಾಜಕೀಯ ಮಾಡುತ್ತಿದೆ ಎಂದು ದೂರಿದರು.

ಇಂದಿರಾ ಗಾಂಧಿ ಪ್ರಧಾನಿಯಾಗಿದ್ದ ಅವಧಿಯಲ್ಲಿ ಪಾಕಿಸ್ತಾನದ 70 ಸಾವಿರ ಉಗ್ರರನ್ನು ಹಿಡಿದದ್ದು ಸುದ್ದಿಯಾಗಲಿಲ್ಲ. ಪುಲ್ವಾಮಾ ದಾಳಿ ಮುಂದಿಟ್ಟುಕೊಂಡು ಬಿಜೆಪಿ ಪ್ರಚಾರ ಪಡೆದುಕೊಂಡಿತು. ಯೋಧರಿಗೆ ಜೀವರಕ್ಷಕ ವಸ್ತುಗಳನ್ನು ನೀಡುವುದಾಗಿ ಸುಳ್ಳು ಹೇಳಿತು ಎಂದು ಟೀಕಿಸಿದರು. ಕೇಂದ್ರದ ಬಿಜೆಪಿ ಸರ್ಕಾರದ ಗುಪ್ತಚರ ವೈಫಲ್ಯದಿಂದಾಗಿ 25 ಮಂದಿ ವೀರ ಯೋಧರು ಮೃತರಾಗಿದ್ದಾರೆ. ಮೃತರ ಕುಟುಂಬಕ್ಕೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.



**ಯೋಧರ ಸಾವಿಗೆ ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಧೋರಣೆಯೇ ಕಾರಣ**

ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಮಾತನಾಡಿ, ಪುಲ್ವಾಮಾ ದಾಳಿ ವೇಳೆ ಸಿಕ್ಕ ಆರ್‌ಡಿಎಕ್ಸ್ ಬಗ್ಗೆ ಈವರೆಗೆ ತನಿಖೆ ನಡೆಯಲಿಲ್ಲ. ಐಟಿ, ಇಡಿ ಎಂದು ಹೇಳುವ ಕೇಂದ್ರ ಸರ್ಕಾರ, ಶತ್ರು ರಾಷ್ಟ್ರ ಪಾಕಿಸ್ತಾನಕ್ಕೆ 4.5 ಕೋಟಿ ಕೋವಿಡ್ ಲಸಿಕೆಯನ್ನು ರವಾನಿಸಿ ದೇಶದ್ರೋಹತನ ಪ್ರದರ್ಶಿಸಿದೆ. ಚುನಾವಣೆಗಳು ಬಂದ ವೇಳೆ ಯೋಧರ ಮೇಲೆ ದಾಳಿ ನಡೆಯುತ್ತಿದ್ದು, ಈ ದಾಳಿಗಳನ್ನು ಭಯೋತ್ಪಾದಕರು,ನಕ್ಸಲರುಮಾಡುತ್ತಿದ್ದಾರೋ ಅಥವಾ ಮೋದಿಯೇ ದಾಳಿ ನಡೆಸುತ್ತಿದ್ದಾರೋ ಎಂದು ಅನುಮಾನ ವ್ಯಕ್ತಪಡಿಸಿದರು.

ಯೋಧರ ಶವದ ಮೇಲೆ ಬಿಜೆಪಿ ರಾಜಕಾರಣ ಮಾಡುವುದನ್ನು ಬಿಡಬೇಕು. ಮೋದಿ ಸರ್ಕಾರದಲ್ಲಿ ಇದುವರೆಗೆ ಮೃತರಾದ ಯೋಧರ ಕುರಿತಂತೆ ಶ್ವೇತಪತ್ರ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ವಕ್ತಾರರಾದ ಶ್ರೀಮತಿ ನಾಗರತ್ನಮ್ಮ ಮಲ್ಲೇಶಪ್ಪ, ಯುವ ಕಾಂಗ್ರೆಸ್‌ನ ಮೈನುದ್ದೀನ್, ಅಯೂಬ್ ಪೈಲ್ವಾನ್, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಸದಸ್ಯರುಗಳಾದ ಜಿ.ಎಸ್. ಮಂಜುನಾಥ್, ಕೆ. ಚಮನ್ ಸಾಬ್, ಅಬ್ದುಲ್ ಲತೀಫ್, ಪಾಮೇನಹಳ್ಳಿ ನಾಗರಾಜ್, ಗಣೇಶ್ ಹುಲ್ಮನಿ, ಅಜ್ಜಪ್ಪ ಪವಾರ್, ಎಸ್. ರವಿ, ಸುಧಾ ಮಂಜುನಾಥ್, ಅನಿತಾ ಬಾಯಿ ಮಾಲತೇಶ್, ಸುಷ್ಮಾ ಪಾಟೀಲ್, ಕವಿತಾ ಚಂದ್ರಶೇಖರ್, ಗೀತಾ ಚಂದ್ರಶೇಖರ್, ಶಿಲ್ಪಾ, ರಾಜೇಶ್ವರಿ, ಶುಭಮಂಗಳ, ಜಂಬಗಿ ರಾಧೇಶ್, ಹರೀಶ್ ಕೆ.ಎಲ್, ಸಾಗರ್, ರಾಕೇಶ್, ಸೈಯದ್ ಖಾಲಿದ್, ಸದ್ದಾಂ, ರಾಕೇಶ್, ಇಮ್ತಿಯಾಜ್ ಬೇಗ್, ಜಿಕ್ರಿಯಾ, ಶ್ರೀಕಾಂತ್ ಬಗರೆ, ಪ್ರವೀಣ್ ಫಾರ್ಮ, ಸುಭಾನ್ ಸಾಬ್ ಇತರರು ಇದ್ದರು.

## ಕೆಎಸ್ಸಾರ್ಟಿಸಿ ಮುಷ್ಕರ

**(1ನೇ ಪುಟದಿಂದ)** ಈಡೇರಿಸಲಾಗಿದೆ, ಸರ್ಕಾರಿ ನೌಕರರಿಗೆ ನೀಡಲಾಗುತ್ತಿರುವ ವೇತನವನ್ನು ನೀಡಲಾಗದು, ಸಾರಿಗೆ ನೌಕರರಿಗೆ ಪ್ರತಿ ನಾಲ್ಕು ವರ್ಷಕ್ಕೆ ಒಮ್ಮೆ ವೇತನ ಹೆಚ್ಚಳ ಮಾಡಲಾಗುತ್ತಿದೆ. ಈಗಲೂ ಶೇ. 8ರಷ್ಟು ವೇತನ ಹೆಚ್ಚಳಕ್ಕೆ ಅನುಮತಿ ಕೋರಿ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದೇವೆ. ಅನುಮತಿ ದೊರೆಯುತ್ತಿದ್ದಂತೆ ವೇತನ ಪರಿಷ್ಕರಣೆ ಮಾಡಲಾಗುವುದು, ಇಷ್ಟಾದರೂ ಅವರು ಮುಷ್ಕರ ನಡೆಸಿದರೆ, ಕಠಿಣ ತೀರ್ಮಾನಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದವರು ಎಚ್ಚರಿಸಿದ್ದಾರೆ.

ಕೊರೊನಾ ಸೋಂಕು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಗುಂಪು ಸೇರುವುದು ಮತ್ತು ಸಭೆ ನಡೆಸುವುದಕ್ಕೆ ಅವಕಾಶ ಇರುವುದಿಲ್ಲ. ಹಾಗೊಂದು ವೇಳೆ ಮುಷ್ಕರಕ್ಕೆ ಮುಂದಾದರೆ ಸಾಂಕ್ರಾಮಿಕ ಸೋಂಕು ನಿಯಂತ್ರಣ ನಿಯಮದಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು. ಕೆಲಸಕ್ಕೆ ಹಾಜರಾಗದಿದ್ದರೆ ವೇತನ ಇಲ್ಲ ಎಂದರು. ಮುಷ್ಕರದಿಂದ ಸಾರ್ವಜನಿಕರಿಗೆ ಸ್ವಲ್ಪ ತೊಂದರೆ ಆಗುತ್ತದೆ, ಇದಕ್ಕೆ ಪರಿಹಾರವಾಗಿ ಖಾಸಗಿ ಬಸ್, ಶಾಲಾ ವಾಹನಗಳು ಹಾಗೂ ಇತರೆ ವಾಣಿಜ್ಯ ಸಾರಿಗೆ ವಾಹನಗಳಿಗೆ ಮುಕ್ತ ಸಂಚಾರಕ್ಕೆ ಅನುಮತಿ ನೀಡಲಾಗುತ್ತಿದೆ, ಖಾಸಗಿ ವಾಹನಗಳಿಗೆ ದರ ನಿಗದಿ ಮಾಡಲಾಗುತ್ತದೆ.

ಹಬ್ಬ ಹರಿದಿನಗಳು ಬರುತ್ತಿದ್ದು ಈ ವೇಳೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮೈಸೂರು, ಹುಬ್ಬಳ್ಳಿ, ಬೆಳಗಾವಿ, ಕಲಬುರಗಿ ನಗರಗಳಿಗೆ ವಿಶೇಷ ರೈಲುಗಳ ಸಂಚಾರ ಕೈಗೊಳ್ಳುವಂತೆ ರೈಲ್ವೆ ಇಲಾಖೆಗೆ ಮನವಿ ಸಲ್ಲಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ರವಿಕುಮಾರ್ ತಿಳಿಸಿದರು.

ಈ ನಡುವೆ ಸರ್ಕಾರದ ನಿರ್ಧಾರವನ್ನು ತೀವ್ರವಾಗಿ ಖಂಡಿಸಿರುವ ಸಾರಿಗೆ ನೌಕರರು, ತಮ್ಮ ಬೇಡಿಕೆ ಈಡೇರುವವರೆಗೆ ನಾಳೆಯಿಂದ ಬಸ್‌ಗಳನ್ನು ರಸ್ತೆಗೆ ಇಳಿಸುವುದಿಲ್ಲ ಎಂದು ಹೇಳಿದ್ದಾರೆ.

## ಸೋಂಕಿತರಲ್ಲಿ ಮಧ್ಯವಯಸ್ಕರೇ ಹೆಚ್ಚು

**(1ನೇ ಪುಟದಿಂದ)** ಲಸಿಕೆ ನೀಡಿಕೆಯಲ್ಲಿ ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳದ ನಂತರ ಕರ್ನಾಟಕ ದೇಶದಲ್ಲಿ 6 ನೇ ಸ್ಥಾನದಲ್ಲಿದೆ.

ಕೋವಿಡ್ ಸೋಂಕಿತರ ಚಿಕಿತ್ಸೆಗೆ ರಾಜ್ಯಾದ್ಯಂತ 33,697 ಹಾಸಿಗೆಗಳನ್ನು ಸಿದ್ಧಪಡಿಸಲಾಗಿದೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಸಹಿತ ಹಾಸಿಗೆಗಳ ಸಂಖ್ಯೆ 15,733 ಇದ್ದು, ಈ ಪೈಕಿ 10,083 ಹಾಸಿಗೆಗಳನ್ನು ಕೋವಿಡ್ ಸೋಂಕಿತರಿಗೆ ಮೀಸಲಿಡಲಾಗಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಖಾಸಗಿ ಆಸ್ಪತ್ರೆಗಳಲ್ಲಿ ಶೇ. 20ರಷ್ಟು ಹಾಸಿಗೆ ಮೀಸಲಿಡಲು ಸೂಚಿಸಲಾಗಿದೆ, ಕೋವಿಡ್ ಅಲ್ಲದೆ ಇತರೆ ಕಾಯಿಲೆಗಳಿಗೂ ವೈದ್ಯಕೀಯ ಚಿಕಿತ್ಸೆ ನೀಡುವುದು ಮುಖ್ಯವಾಗಿದೆ ಎಂದು ಸುಧಾಕರ್ ತಿಳಿಸಿದ್ದಾರೆ.

ಕೊರೊನಾ ನಿಯಂತ್ರಣ ಕುರಿತ ತಾಂತ್ರಿಕ ಸಲಹಾ ಸಮಿತಿಯು ಚಿತ್ರಮಂದಿರ, ಶಾಲೆ, ಕಲ್ಯಾಣ ಮಂಟಪ, ಬಸ್ ಪ್ರಯಾಣ ಸೇರಿದಂತೆ ಪ್ರತಿಯೊಂದು ದೈನಂದಿನ ಚಟುವಟಿಕೆಗಳ ನಡವಳಿಕೆ ಹೇಗಿರಬೇಕೆಂಬ ಬಗ್ಗೆ 20 ದಿನಗಳ ಹಿಂದೆಯೇ ವರದಿ ನೀಡಿದೆ ಎಂದವರು ಹೇಳಿದ್ದಾರೆ.

ಪಕ್ಕದ ರಾಜ್ಯ ಮಹಾರಾಷ್ಟ್ರದಲ್ಲಿ ಲಾಕ್‌ಡೌನ್ ಘೋಷಿಸಲಾಗಿದೆ, ಅಂತಹ ಪರಿಸ್ಥಿತಿ ನಮ್ಮರಾಜ್ಯಕ್ಕೆ ಬರುವುದು ಬೇಡ, ಸಾರ್ವಜನಿಕರು ಕೋವಿಡ್ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದವರು ಕರೆ ನೀಡಿದ್ದಾರೆ.

ಕೋವಿಡ್ ಲಸಿಕೆ ಪಡೆದಾಕ್ಷಣ ಸೋಂಕು ತಟ್ಟುವುದಿಲ್ಲ ಎಂಬ ಭ್ರಮೆ ಬೇಡ, ಸೋಂಕು ತಗುಲಿದ ಸಂದರ್ಭದಲ್ಲಿ ರೋಗದ ತೀವ್ರತೆ ಕಡಿಮೆಯಾಗಿರುತ್ತದೆ.

ಲಸಿಕೆ ಪಡೆದ ಅನೇಕ ಮಂದಿ ಆರೋಗ್ಯವಾಗಿದ್ದಾರೆ, ನಿರ್ಲಕ್ಷ್ಯದಿಂದ ಲಸಿಕೆ ಪಡೆಯದೆ ಕೊರೊನಾ ಸೋಂಕು ತಗುಲಿ ಐಸಿಯುಗೆ ದಾಖಲಾಗಿರುವ ನಿದರ್ಶನಗಳಿವೆ. ಜನರು ಲಸಿಕೆಯನ್ನು ಕಡ್ಡಾಯವಾಗಿ ಪಡೆಯಬೇಕು, ಆರೋಗ್ಯ ಸಿಬ್ಬಂದಿ ಲಸಿಕೆ ಪಡೆಯುವ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು ಎಂದೂ ಸಚಿವ ಸುಧಾಕರ್ ಮನವಿ ಮಾಡಿದರು.

## ಕರ್ಮದಿಂದ ತಪ್ಪಿಸಿಕೊಳ್ಳಲಾಗದು

**(1ನೇ ಪುಟದಿಂದ)** ವರದಿ ಮಾಡಿತ್ತು. ಈ ಬಗ್ಗೆ ಟ್ವೀಟ್ ಮಾಡಿರುವ ರಾಹುಲ್ ಗಾಂಧಿ, ನಮ್ಮ ಕ್ರಿಯೆಗಳ ಕರ್ಮ ಫಲದಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ರಫೇಲ್ ವ್ಯವಹಾರದ ಬಗ್ಗೆ ತೀವ್ರವಾಗಿ ಪ್ರಚಾರ ಮಾಡಿತ್ತು.

# ಲಸಿಕೆ ವಯೋಮಿತಿ ಸಡಿಲಿಕೆಗೆ ನಕಾರ

**(1ನೇ ಪುಟದಿಂದ)** ಯಾವುದೇ ದೇಶದ ಉದ್ದೇಶ ಸೋಂಕಿನಿಂದ ಅತಿ ಹೆಚ್ಚಿನ ಅಪಾಯ ಎದುರಿಸುತ್ತಿರುವವರನ್ನು ರಕ್ಷಿಸು ವುದಾಗಿದೆ. ಲಸಿಕೆ ನೀಡುವ ಉದ್ದೇಶ ಎಂದೂ ಯಾರು ಕೇಳುತ್ತಾರೋ ಅವರಿಗೆ ಕೊಡುವುದಲ್ಲ ಯಾರಿಗೆ ಅಗತ್ಯವಿರುವುದೋ ಅವರಿಗೆ ಕೊಡುವುದು ಎಂದವರು ಹೇಳಿದ್ದಾರೆ.

ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ. ವಿ. ಕೆ. ಪೌಲ್ ಮಾತನಾಡಿದ್ದು, ಲಸಿಕೆ ಪ್ರಕ್ರಿಯೆಯನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಬೇಕು. ಇಂತಿಷ್ಟು ಪ್ರಮಾಣದಲ್ಲಿ ಲಸಿಕೆ ನೀಡಿದರೆ ಸಮೂಹ ರೋಗ ನಿರೋಧಕತೆ (ಹರ್ಡ್ ಇಮ್ಯುನಿಟಿ) ಸಿಗುತ್ತದೆ ಎಂಬುದು ಇನ್ನೂ ಸಾಬೀತಾಗಿಲ್ಲ ಎಂದಿದ್ದಾರೆ.

ಆದರೆ, ಲಸಿಕೆಯನ್ನು ಸಾವುಗಳನ್ನು ತಡೆಯಲು, ರೋಗದ ತೀವ್ರತೆ ಕಡಿಮೆ ಮಾಡಲು, ಜೀವ ರಕ್ಷಿಸಲು ಹಾಗೂ ಆದ್ಯತಾ ಗುಂಪುಗಳನ್ನು ಗಮನದಲ್ಲಿಟ್ಟುಕೊಂಡು ನೀಡಲಾಗುತ್ತಿದೆ ಎಂದು ಪೋಲ್ ಹೇಳಿದ್ದಾರೆ.

ಸಾವಿನ ಕಳವಳ ಹೆಚ್ಚಾಗಿರುವ ಗುಂಪುಗಳಿಗೆ ಆದ್ಯತೆಯ ಮೇರೆಗೆ ಲಸಿಕೆ ನೀಡಲಾಗುತ್ತಿದೆ. ಸೋಂಕಿನ ಸಂದರ್ಭದಲ್ಲಿ ಎಷ್ಟು ಸಾವುಗಳು ಸಂಭವಿಸಿದವು ಎಂಬುದನ್ನು ಇತಿಹಾಸ ನೆನಪಿನಲ್ಲಿಟ್ಟುಕೊಳ್ಳುತ್ತದೆ. ಜಾಗತಿಕವಾಗಿ ಲಸಿಕೆ ಲಭ್ಯತೆ ಸೀಮಿತವಾಗಿದೆ ಎಂದವರು ತಿಳಿಸಿದ್ದಾರೆ.

18 ವರ್ಷ ಮೀರಿದ ಎಲ್ಲರೂ ಲಸಿಕೆ ಪಡೆಯಲು ಕೇಂದ್ರ ಸರ್ಕಾರ ಅನುಮತಿ ನೀಡಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಪತ್ರ ಬರೆದಿತ್ತು.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರೂ ಸಹ ಲಸಿಕೆ ಪಡೆಯುವ ವಯೋಮಿತಿ ಸಡಿಲಿಸಲು ಒತ್ತಾಯಿಸಿದ್ದರು.

## ಸೋಂಕಿನಿಂದ ದೇಶದ ಪರಿಸ್ಥಿತಿ ಕಠಿಣ

**(1ನೇ ಪುಟದಿಂದ)** ಬಲಗೊಳಿಸುವುದು ಹಾಗೂ ಲಸಿಕಾ ಅಭಿಯಾನ ತೀವ್ರಗೊಳಿಸಬೇಕು ಎಂದು ಪೌಲ್ ಹೇಳಿದ್ದಾರೆ.

ಮಾಸ್ಕ್ ಧರಿಸುವುದು ಹಾಗೂ ಗುಂಪಿನಿಂದ ದೂರವಿರುವುದನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕರೆ ನೀಡಿರುವ ಅವರು, ಕೆಲ ರಾಜ್ಯಗಳಲ್ಲಿ ಕೊರೊನಾ ಸೋಂಕು ಅತಿ ಹೆಚ್ಚಾಗಿದೆ. ಉಳಿದ ರಾಜ್ಯಗಳಲ್ಲೂ ಸೋಂಕು ಏರುಮುಖವಾಗಿದೆ ಎಂದಿದ್ದಾರೆ.

ಎರಡನೇ ಅಲೆ ನಿಯಂತ್ರಿಸುವಲ್ಲಿ ಜನರ ಸಹಭಾಗಿತ್ವ ಮುಖ್ಯವಾಗಿದೆ. ಮುಂದಿನ ನಾಲ್ಕು ವಾರ ಕಠಿಣವಾಗಿದೆ. ಇಡೀ ದೇಶ ಜೊತೆಯಾಗಬೇಕು ಹಾಗೂ ಕೊರೊನಾ ವಿರುದ್ಧ ಹೋರಾಡಬೇಕು ಎಂದಿದ್ದಾರೆ.

ಕೊರೊನಾ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವಂತೆಯೇ, ಸಾವಿನ ಸಂಖ್ಯೆಯೂ ಏರುಮುಖವಾಗಿದೆ. ದೇಶದ ಜನಸಂಖ್ಯಾ ಗಾತ್ರ ಹಾಗೂ ದಶಲಕ್ಷ ಜನಸಂಖ್ಯೆಗೆ ಸಂಭವಿಸುತ್ತಿರುವ ಸಾವುಗಳನ್ನು ಪರಿಗಣಿಸಿದಾಗ ನಾವು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದೇವೆ ಹಾಗೂ ಸೋಂಕು ನಿಯಂತ್ರಣದಲ್ಲಿದೆ ಎಂದಿದ್ದಾರೆ.

ದೇಶದ ಕೊರೊನಾ ಪರಿಸ್ಥಿತಿಯ ಬಗ್ಗೆ ವಿವರ ನೀಡಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಛತ್ತೀಸ್‌ಘಡದ ದುರ್ಗ ಸೇರಿದಂತೆ ದೇಶದ 10 ಜಿಲ್ಲೆಗಳಲ್ಲಿ ಸಕ್ರಿಯ ಸೋಂಕು ಅತಿ ಹೆಚ್ಚಾಗಿದೆ. ಈ ಪೈಕಿ ಏಳು ಮಹಾರಾಷ್ಟ್ರದಲ್ಲಿವೆ ಹಾಗೂ ಒಂದು ಕರ್ನಾಟಕದಲ್ಲಿದೆ. ದೆಹಲಿಯನ್ನು ಒಂದು ಜಿಲ್ಲೆಯಾಗಿ ಪರಿಗಣಿಸಲಾಗಿದೆ ಎಂದಿದ್ದಾರೆ.

ಪುಣೆ, ಮುಂಬೈ, ಥಾಣೆ, ನಾಗಪುರ, ನಾಸಿಕ್, ಬೆಂಗಳೂರು ನಗರ, ಔರಂಗಾಬಾದ್, ಅಹಮದ್‌ನಗರ, ದೆಹಲಿ ಹಾಗೂ ದುರ್ಗಗಳಲ್ಲಿ ಸಕ್ರಿಯ ಸೋಂಕು ಹೆಚ್ಚಾಗಿದೆ ಎಂದವರು ಹೇಳಿದ್ದಾರೆ.

ಮಹಾರಾಷ್ಟ್ರ, ಪಂಜಾಬ್ ಹಾಗೂ ಛತ್ತೀಸ್‌ಘಡಗಳ ಬಗ್ಗೆ ಅತಿ ಹೆಚ್ಚು ಕಳವಳವಿದೆ. ಇಲ್ಲಿ ಜನಸಂಖ್ಯೆ ಹೆಚ್ಚಾಗಿದೆ, ಪಂಜಾಬ್ ಮತ್ತು ಛತ್ತೀಸ್‌ಘಡಗಳಲ್ಲಿ ಸಾವುಗಳು ಹೆಚ್ಚಾಗಿವೆ ಎಂದವರು ಹೇಳಿದ್ದಾರೆ.

ಕೊರೊನಾ ಪ್ರಕರಣಗಳು ಹಾಗೂ ಸಾವುಗಳು ಹೆಚ್ಚಾಗಿರುವ ಮಹಾರಾಷ್ಟ್ರ, ಛತ್ತೀಸ್‌ಗಡ ಹಾಗೂ ಪಂಜಾಬ್‌ಗಳಲ್ಲಿ 50 ಬಹುಶಿಸ್ತೀಯ ಆರೋಗ್ಯ ತಂಡಗಳನ್ನು ನಿಯೋಜಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ಮಹಾರಾಷ್ಟ್ರದ 30, ಛತ್ತೀಸ್‌ಘಡದ 11 ಹಾಗೂ ಪಂಜಾಬ್‌ನ 9 ಜಿಲ್ಲೆಗಳಲ್ಲಿ ಈ ತಂಡಗಳನ್ನು ನಿಯೋಜಿಸಲಾಗುವುದು.

## ಪತ್ನಿಗೆ ಪಿಂಚಣಿ

**(1ನೇ ಪುಟದಿಂದ)** ನೆರವು ದೊರೆತಿರಲಿಲ್ಲ. ಖಜಾನೆಯ ಅಧಿಕಾರಿಯಾಗಿ ನಿವೃತ್ತರಾಗಿದ್ದ ಭಂಡಾರಿ, ಏಳು ವರ್ಷಗಳ ಹಿಂದೆ ಮಹಿಳೆಗೆ ನೆರವು ದೊರಕಿಸುವ ಪ್ರಯತ್ನ ಆರಂಭಿಸಿದ್ದರು. 1985ರಲ್ಲಿ ಸರ್ಕಾರ ರೂಪಿಸಿದ ನಿಯಮಗಳ ಪ್ರಕಾರ ಮಹಿಳೆ ಪಿಂಚಣಿಗೆ ಅರ್ಹರಿದ್ದರು.

ಅಂತಿಮವಾಗಿ 1977ರಿಂದ ಪೂರ್ವಾನ್ವಯವಾಗುವ ರೀತಿಯಲ್ಲಿ ಮಹಿಳೆಗೆ ಪಿಂಚಣಿ ನೀಡಲು ನಿರ್ಧರಿಸಲಾಗಿದೆ. ಮಹಿಳೆಗೆ 20 ಲಕ್ಷ ರೂ.ಗಳ ಹಿಂಬಾಕಿ ಸಿಗಲಿದೆ. ಈ ಬಗ್ಗೆ ಸಂತೋಷದಿಂದ ಪ್ರತಿಕ್ರಿಯೆ ನೀಡಿರುವ ದೇವಿ, ನನಗೆ ಹಣದ ಅಗತ್ಯವಿಲ್ಲ. ಆದರೆ, ಪತಿಗೆ ಹಾಗೂ ನನಗೆ ಸರ್ಕಾರ ಮಾನ್ಯತೆ ನೀಡಿರುವುದೇ ತೃಪ್ತಿ ಎಂದಿದ್ದಾರೆ.

## ಮಹಾರಾಷ್ಟ್ರ : ಲಾಕ್‌ಡೌನ್ ವರ್ತಕರ ಪ್ರತಿಭಟನೆ

**(1ನೇ ಪುಟದಿಂದ)** ಕೊರೊನಾ ಪರಿಸ್ಥಿತಿಯ ಕುರಿತು ಸ್ವಯಂ ಪ್ರೇರಿತವಾಗಿ ವಿಚಾರಣೆ ನಡೆಸಿದ ನ್ಯಾಯಾಲಯ ಈ ಸಲಹೆ ನೀಡಿದೆಯಲ್ಲದೇ, ರಾಜಕೀಯ ಕಾರ್ಯಕ್ರಮಗಳೂ ಸೇರಿದಂತೆ ಎಲ್ಲಾ ರೀತಿಯ ಸಭೆ ಸಮಾರಂಭಗಳನ್ನು ನಿಯಂತ್ರಿಸಬೇಕು ಇಲ್ಲವೇ ತಡೆಯಬೇಕು ಎಂದು ಹೇಳಿದೆ.

**ವ್ಯಾಪಾರಿಗಳ ಪ್ರತಿಭಟನೆ :** ಮಹಾರಾಷ್ಟ್ರ ಸರ್ಕಾರ ಲಾಕ್‌ಡೌನ್ ಹೇರಿಕೆ ಮಾಡಿರುವುದರ ವಿರುದ್ಧ ನಾಗಪುರ ಹಾಗೂ ಪುಣೆಗಳಲ್ಲಿ ವ್ಯಾಪಾರಿಗಳು ಬೀದಿಗಿಳಿದು ಪ್ರತಿಭಟಿಸಿದ್ದಾರೆ. ದೈನಂದಿನ ಬಳಕೆಯಲ್ಲದ ವಸ್ತುಗಳ ಅಂಗಡಿಗಳು ಏಪ್ರಿಲ್ 30ರವರೆಗೆ ತೆರೆಯಬಾರದು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು.

ನಾಗಪುರದ ಇತ್ವಾರಿ, ಗಂಡಿಬಾಗ್ ಹಾಗೂ ಜರಿಪಟ್ಕ ಮಾರುಕಟ್ಟೆಗಳಲ್ಲಿ ಜನರು ಬೀದಿಗಿಳಿದು ರಾಜ್ಯ ಸರ್ಕಾರದ ಆದೇಶದ ವಿರುದ್ಧ ಪ್ರತಿಭಟಿಸಿದರು. ಪೊಲೀಸರು ಅವರ ಮನವೊಲಿಸಿ ಜಾಗ ಖಾಲಿ ಮಾಡಿಸಿದ್ದಾರೆ.

ಸರ್ಕಾರದ ನಿರ್ಧಾರವನ್ನು ಪುಣೆಯ ವ್ಯಾಪಾರಿಗಳ ಒಕ್ಕೂಟ ಖಂಡಿಸಿದ್ದು, ದೈನಂದಿನ ಬಳಕೆಯ ವಸ್ತುಗಳ ಖರೀದಿಗೆ ಜನಸಂದಣಿ ಹೆಚ್ಚಾಗಿರುತ್ತದೆ. ಆದರೆ, ಇತರೆ ವಸ್ತುಗಳ ಖರೀದಿಗೆ ಜನಸಂದಣಿ ಇರುವುದಿಲ್ಲ. ಹೀಗಾಗಿ ನಿರ್ಬಂಧ ಹೇರಬಾರದು ಎಂದು ಒತ್ತಾಯಿಸಿದೆ. ಹೋಟೆಲ್, ರೆಸ್ಟೋರೆಂಟ್ ಹಾಗೂ ಬಾರ್‌ಗಳನ್ನು ಪ್ರತಿನಿಧಿಸುವ ಒಕ್ಕೂಟ ಸಹ ಪುಣೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದೆ.

**ದೆಹಲಿಯಲ್ಲಿ ರಾತ್ರಿ ಕರ್ಫ್ಯೂ :** ತಕ್ಷಣದಿಂದ ಜಾರಿಗೆ ಬರುವಂತೆ ರಾತ್ರಿ ಕರ್ಫ್ಯೂ ವಿಧಿಸಿರುವುದಾಗಿ ದೆಹಲಿ ಸರ್ಕಾರ ಪ್ರಕಟಿಸಿದೆ. ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 5 ರವರೆಗೆ ಏಪ್ರಿಲ್ 30 ರವರೆಗೆ ಕರ್ಫ್ಯೂ ಜಾರಿಯಲ್ಲಿರಲಿದೆ. ಆದರೆ, ಅಗತ್ಯ ವಸ್ತುಗಳನ್ನು ಮಾರುವವರು, ಮಾಧ್ಯಮದವರು, ವೈದ್ಯಕೀಯ ಸಿಬ್ಬಂದಿ, ಪ್ರಯಾಣಿಕರು, ಸಾರಿಗೆ ವಲಯದಲ್ಲಿ ಕಾರ್ಯ ನಿರ್ವಹಿಸುವವರು ಮತ್ತಿತರರಿಗೆ ವಿನಾಯಿತಿ ನೀಡಲಾಗಿದೆ.

## ಭುವನೇಶ್ವರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣ ಪ್ರೇಮಿಯ ಹುಟ್ಟುಹಬ್ಬ



ರಾಣೇಬೆನ್ನೂರು, ಏ. 6- ನಗರದ ವಿವೇಕಾನಂದ ಗ್ರಾಮೀಣ ವಿದ್ಯಾಸಂಸ್ಥೆ ಅಧ್ಯಕ್ಷರು ಮತ್ತು ಹಾವೇರಿ ಜಿಲ್ಲೆಯ ಸಾವಿತ್ರ ಬಾ ಪುಲೆ ಎಂದೇ ಹೆಸರಾದ ಶಿಕ್ಷಣ ಪ್ರೇಮಿ, ಪಿಂಚಣಿ ಹಣದಲ್ಲಿ ಭುವನೇಶ್ವರಿ ಆದರ್ಶ ಹಿರಿಯ ಪ್ರಾಥಮಿಕ ಶಾಲೆ ಸ್ಥಾಪಿಸಿ ಬಡ ವಿದ್ಯಾರ್ಥಿಗಳ ಪಾಲಿಗೆ ಬೆಳಕಾದ ಪುಟ್ಟಮ್ಮ ಬಸಯ್ಯ ಹಿರೇಮಠ ಅವರ ಹುಟ್ಟಿದ ಹಬ್ಬ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷ ಚೇತನ್ ಪೂಜಾರ್, ಅನೂಪ್ ನಾಗರಾಜ ಪೂಜಾರ್, ದುಷ್ಯಂತ್ ದ್ಯಾಮಕ್ಕನವರ್, ಮುಖ್ಯೋಪಾಧ್ಯಾಯರಾದ ಮಲ್ಲಿಕಾರ್ಜುನ ಬಾವಿಕಟ್ಟಿ, ಸಹ ಶಿಕ್ಷಕರುಗಳಾದ ಶಿವಯ್ಯ ಹಿರೇಮಠ, ರೇಖಾ.ಸಿ, ರೇಣುಕಮ್ಮ ಎಸ್, ದೇವರಾಜ ಮಲ್ಲಾಪುರ ಮತ್ತು ಅಡುಗೆ ಸಿಬ್ಬಂದಿಗಳಾದ ಯಶೋದಾ ಚಕ್ರಸಾಲಿ, ಅನಸೂಯಮ್ಮ ಹಾಲಮ್ಮನವರ, ಗೀತಾ ಗೋಣೆಪ್ಪನವರ ಉಪಸ್ಥಿತರಿದ್ದರು.

## 15, 16, 22ನೇ ವಾರ್ಡುಗಳಲ್ಲಿ ಬಿಜೆಪಿ ಸಂಸ್ಥಾಪನಾ ದಿನಾಚರಣೆ



ದಾವಣಗೆರೆ, ಏ. 6- ಬಿಜೆಪಿ ಸಂಸ್ಥಾಪನ ದಿನವಾದ ಇಂದು ಪಕ್ಷದ ಆದೇಶದ ಮೇರೆಗೆ ಮಹಾ ಶಕ್ತಿ ಕೇಂದ್ರದಲ್ಲಿ ಪಕ್ಷದ ಧ್ವಜಾರೋಹಣ 15, 16 ಮತ್ತು 22 ನೇ ವಾರ್ಡ್‌ನ ಪ್ರಮುಖರ ಮತ್ತು ಕಾರ್ಯಕರ್ತರ ಸಭೆ ನಡೆಯಿತು.

ಈ ಸಂಧರ್ಭದಲ್ಲಿ ಮುಖ್ಯ ಭಾಷಣಕಾರರಾಗಿ ಮಾಜಿ ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಹಾವೇರಿ ಜಿಲ್ಲಾ ಪ್ರಭಾರಿ ಎಲ್.ಎಲ್.ಕಲ್ಲೇಶ್, ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ಹೆಚ್.ದಿವಾಕರ್, ಕೈಗಾರಿಕ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ ಚಿಕ್ಕಿ ಮಂಜುನಾಥ ಮಾತಾನಾಡಿದರು.

ರಾಜ್ಯ ಸಮಿತಿಯ ಸದಸ್ಯರಾದ ಎ.ಸಿ. ರಾಘವೇಂದ್ರ, ಗಣೇಶ್ ರಾವ್, ಸಿದ್ದಪ್ಪ ಅಡಾಣಿ, ಗುಡ್ಡಪ್ಪ, ಚಂದ್ರು, ರುದ್ರೇಶ್ ಸಾಳಂಕಿ, ಹನುಮಂತ ಸುರ್ವೆ, ಮಹಿಳಾ ಮೋರ್ಚಾ ಮುಖಂಡರಾದ ಪುಷ್ಪ ವಾಲಿ, ಗೌರಮ್ಮ ಪಾಟೀಲ್, ದ್ರಾಕ್ಷಯಣಮ್ಮ, ರೂಪ ದೀಪಕ್, ಶಾರದ ರಾಯ್ಕರ್, ರವಿ, ರವಿ ಬೆಸ್ತಾರ್, ಮತ್ತಿತರರು ಉಪಸ್ಥಿತರಿದ್ದರು.

## ಬಿಜೆಪಿ ಸಂಸ್ಥಾಪನಾ ದಿನಾಚರಣೆ



**ಹರಿಹರ**

ಹರಿಹರ, ಏ.6- ಭಾರತೀಯ ಜನತಾ ಪಕ್ಷ ಸ್ಥಾಪನೆಯಾಗಿ ಇಂದಿಗೆ 40 ವರ್ಷಗಳು ಪೂರೈಸಿದೆ. ಭಾರತದಲ್ಲಿ ಸ್ವಾತಂತ್ರ್ಯ ನಂತರ ಅಸ್ತಿತ್ವಕ್ಕೆ ಬಂದಿರುವ ಯಾವ ಪಕ್ಷಗಳೂ ಇಷ್ಟು ಕಡಿಮೆ ಅವಧಿಯಲ್ಲಿ ವ್ಯಾಪಕವಾಗಿ ಬೆಳೆದಿಲ್ಲ. ಈ ನಿಟ್ಟಿನಲ್ಲಿ ಬಿಜೆಪಿ ಮಾತ್ರ ಇಂದು ವಿಶ್ವದ ಅತ್ಯಂತ ದೊಡ್ಡ ಸಂಘಟನೆಯಾಗಿದೆ ಎಂದು ದೂಡಾ ಸದಸ್ಯ ರಾಜು ರೋಖಡೆ ಹೇಳಿದರು.

ನಗರದ ಲೇಬರ್ ಕಾಲೋನಿಯ ಶಕ್ತಿ ಕೇಂದ್ರ ಪ್ರಮುಖರ ಮನೆಯಲ್ಲಿ ಪಕ್ಷದ ಬಾವುಟ ಹಾರಿಸುವುದರ ಮೂಲಕ ಬಿಜೆಪಿ ಪಕ್ಷದ ಸಂಸ್ಥಾಪನಾ ದಿನ ಆಚರಿಸಿ ಅವರು ಮಾತನಾಡಿದರು.

ಅಟಲ್ ಬಿಹಾರಿ ವಾಜಪೇಯಿ, ನರೇಂದ್ರ ಮೋದಿಯವರಂತಹ ಅಗ್ರಮಾನ್ಯ ವ್ಯಕ್ತಿಗಳನ್ನು ದೇಶಕ್ಕೆ ಕೊಟ್ಟ ಕೀರ್ತಿ ನಮ್ಮ ಪಕ್ಷಕ್ಕೆ ಸಲ್ಲುತ್ತದೆ. ಇದಕ್ಕೆ ಪಕ್ಷದ ಹಿರಿಯರಾದ ಸ್ವರ್ಗೀಯ ಪಂಡಿತ್ ದೀನದಯಾಳ್ ಉಪಾಧ್ಯಾಯ ಹಾಗೂ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರೇ ಮೂಲ ಪ್ರೇರಣಾ ಶಕ್ತಿ ಎಂದರು.

ನಗರ ಘಟಕದ ಉಪಾಧ್ಯಕ್ಷ ತುಳಜಪ್ಪ ಭೂತೆ ಮಾತನಾಡಿ, ರಾಜಕಾರಣ ಉದ್ಯೋಗವಲ್ಲ. ಬದಲಾಗಿ ದೇಶ ಸೇವೆಯ ಒಂದು ಮಹತ್ತರ ಭಾಗ ಎನ್ನುವುದು ಬಿಜೆಪಿ ತತ್ವ, ಸಿದ್ಧಾಂತ ಎಂದರು. ಕಾರ್ಯಕರ್ತರಿಂದಲೇ ನಡೆಯುವಂತಹ ಪಕ್ಷ ನಮ್ಮದಾಗಿದೆ ಎಂದರು.

ನಗರ ಘಟಕದ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಮಂಜಾನಾಯ್ಕ, ಮಾರುತಿ ಶೆಟ್ಟಿ, ಮುಖಂಡರಾದ ಹೆಚ್. ಗಿರೀಶ್, ಅಮರ್, ಸುರೇಶ್ ಹಂಸಾಗಾರ್, ಅಜರುದ್ದೀನ್, ಸುಧೀಂದ್ರ, ಪಿ. ರಾಘು, ಹರೀಶ್, ಅಜಯ್ ಇನ್ನಿತರರಿದ್ದರು.

## ಪಾರ್ವತಮ್ಮ ಕಲ್ಲಪ್ಪ ನಿಧನ



ದಾವಣಗೆರೆಯ ನಿವೃತ್ತ ಕಾರ್ಯಪಾಲಕ ಅಭಿಯಂತರರಾಗಿದ್ದ ದಿ|| ಜಿ. ಕಲ್ಲಪ್ಪ ಅವರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮ ಅವರು ದಿನಾಂಕ 06.04.2021ರ ಮಂಗಳವಾರ ಬೆಳಿಗ್ಗೆ 7.30 ಕ್ಕೆ ದಾವಣಗೆರೆ ಎಂಸಿಸಿ 'ಎ' ಬ್ಲಾಕ್, ಮನೆ ಸಂಖ್ಯೆ 1957ರ ತಮ್ಮ ಸ್ವಗೃಹದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 85 ವರ್ಷ ವಯಸ್ಸಾಗಿತ್ತು. ಪಾರ್ವತಮ್ಮ ಅವರು, ಮಗಳು ಶ್ರೀಮತಿ ಸುಧಾ ಶೇಖರ್, ಅಳಿಯ ದಾವಣಗೆರೆ ಹಾರ್ಟ್ ಹಾಸ್ಪಿಟಲ್‌ನ ಹೃದಯರೋಗ ತಜ್ಞರಾದ ಡಾ|| ಕೆ.ಎಸ್. ಸೋಮಶೇಖರ್, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 06.04.2021ರ ಮಂಗಳವಾರ ಸಂಜೆ ದಾವಣಗೆರೆ ತಾಲ್ಲೂಕು ಮಳಲಕೆರೆ ಗ್ರಾಮದಲ್ಲಿರುವ ಅವರ ಸ್ವಂತ ತೋಟದಲ್ಲಿ ನೆರವೇರಿಸಲಾಯಿತು.

- ದುಃಖತಪ್ತ ಕುಟುಂಬ ವರ್ಗ

## ಜಿಗಳಿ ಗ್ರಾಮದ ಲಕ್ಷ್ಮಮ್ಮ ನಿಧನ



ಹರಿಹರ ತಾಲ್ಲೂಕು ಜಿಗಳಿ ಗ್ರಾಮದ ವಾಸಿ ದಿ|| ಕೆಪ್ಪಬಸಣ್ಣನವರ ನಾಗಪ್ಪ ಅವರ ಧರ್ಮಪತ್ನಿ ಶ್ರೀಮತಿ ಲಕ್ಷ್ಮಮ್ಮ (83) ಅವರು ದಿನಾಂಕ 6.4.2021ರ ಮಂಗಳವಾರ ಮಧ್ಯಾಹ್ನ 1.45ಕ್ಕೆ ನಿಧನರಾದರು. ಎಲ್ಐಸಿ ಅಭಿವೃದ್ಧಿ ಅಧಿಕಾರಿ ಕೆ.ಎನ್. ಜನಾರ್ದನ ಸೇರಿದಂತೆ ಮೂವರು ಪುತ್ರರು, ಆರು ಜನ ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 7.4.2021ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಜಿಗಳಿ ಗ್ರಾಮದಲ್ಲಿ ನೆರವೇರಲಿದೆ.

## ಹರಿಹರ ತಾಲ್ಲೂಕು ಆಡಳಿತದಿಂದ ಜಗಜೀವನ್ ರಾಮ್ ಜನ್ಮ ದಿನಾಚರಣೆ



ಹರಿಹರ, ಏ.6- ಬಡವರ, ಶೋಷಿತ ಮತ್ತು ದುರ್ಬಲ ವರ್ಗದವರ ಕಲ್ಯಾಣಕ್ಕಾಗಿ ಶ್ರಮಿಸಿದ ಡಾ. ಬಾಬು ಜಗಜೀವನ್ ರಾಮ್ ಅವರ ಜನ್ಮ ದಿನದ ಆಚರಣೆಯನ್ನು ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ತಾ.ಪಂ. ಅಧ್ಯಕ್ಷ ಆದಾಪುರದ ವೀರಭದ್ರಪ್ಪ, ದಲಿತ ಸಮಾಜದ ಮುಖಂಡರಾದ ಮಲ್ಲೇಶಪ್ಪ, ಹನುಮಂತಪ್ಪ, ಮಹಾಂತೇಶ್, ನಗರಸಭೆ ನಾಮನಿ ಸದಸ್ಯ ಸುರೇಶ್ ತೇರದಾಳ ಹಾಗೂ ಇನ್ನಿತರರಿದ್ದರು.

## ಎಂ.ಪಿ.ಆರ್ ಜಾತ್ಯತೀತ, ಸಮಾಜವಾದಿ ನಾಯಕ



ಹರಪನಹಳ್ಳಿಯಲ್ಲಿ ಎಂ.ಪಿ.ಲತಾ

ಹರಪನಹಳ್ಳಿ, ಏ.6- ಎಂ.ಪಿ. ರವೀಂದ್ರ ಜಾತ್ಯತೀತ, ಸಮಾಜವಾದಿ ನಾಯಕ ದಿ|| ಎಂ.ಪಿ. ಪ್ರಕಾಶ್‌ರಂತಹ ಸೃಜನಶೀಲ ರಾಜಕಾರಣಿ ಮತ್ತು ಧೀಮಂತ ನಾಯಕನ ಅವಶ್ಯಕತೆ ಈ ತಾಲ್ಲೂಕಿಗೆ ಬೇಕಿದೆ ಎಂದು ರಾಜ್ಯ ಮಹಿಳಾ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ ಕಾಶಿ ಸಂಗಮೇಶ್ವರ ಬಡಾವಣೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಹಮ್ಮಿಕೊಂಡಿದ್ದ ಮಾಜಿ ಶಾಸಕ ದಿ|| ಎಂ.ಪಿ. ರವೀಂದ್ರ ಅವರ 52ನೇ ವರ್ಷದ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರದ ಸೌಲಭ್ಯ ಸರಿಯಾಗಿ ಬಳಸಿಕೊಳ್ಳಿ ನಿಮ್ಮ ಜೊತೆ ನಾನಿದ್ದೇನೆ ಎಂದು ನುಡಿದಂತೆ ನಡೆದ ಎಂ.ಪಿ. ರವೀಂದ್ರ. ನಮ್ಮೆಲ್ಲರ ಪ್ರೀತಿಯ ರವಿಯಣ್ಣ ಕೊಡುಗೈ ದಾನಿ. ಯಾರಾದ್ರು ಕಷ್ಟ ಹೇಳ್ಕೊಂಡು ಬಂದ್ರೆ ಅವರನ್ನು ಎಂದೂ ಬರಿಗೈಲಿ ಕಳಿಸಿದಂತಹ ಆಸಾಮಿಯಲ್ಲ. ರವೀಂದ್ರ ನಮ್ಮೆಲ್ಲರ ಪ್ರೀತಿಯ ನಾಯಕ, ಕಲ್ಯಾಣ ಕರ್ನಾಟಕದ ಜನಪ್ರಿಯ ನಾಯಕ ಹೇಳಿದರು.

ಈ ಸಂದರ್ಭದಲ್ಲಿ ತಾ.ಪಂ. ಸದಸ್ಯ ಚಂದ್ರಪ್ಪ, ಓ. ರಾಮಪ್ಪ, ಪುರಸಭಾ ಸದಸ್ಯರಾದ ಡಿ.ಅಬ್ದುಲ್ ರಹಿಮಾನ್, ಎಂ.ವಿ ಅಂಜಿನಪ್ಪ, ಟಿ.ವೆಂಕಟೇಶ್, ಗೊಂಗಡಿ ನಾಗರಾಜ್, ಗಣೇಶ್, ವಸಂತಪ್ಪ, ಚಿಕ್ಕೇರಿ ಬಸಪ್ಪ, ಟಿ.ಹೆಚ್.ಎಂ ಮಂಜುನಾಥ್, ಬಸಾಪುರದ ಮಂಜುನಾಥ್, ಕಂಚಿಕೇರಿ ಜಯಲಕ್ಷ್ಮಿ, ಗುಂಡಗತ್ತಿ ನೇತ್ರಾವತಿ, ಉಮಾ, ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ್, ಮೈದೂರು ರಾಮಣ್ಣ, ಓ.ಮಹಾಂತೇಶ್, ಯಡಿಹಳ್ಳಿ ಉಮಾಶಂಕರ್ ಮತ್ತಿತರರು ಉಪಸ್ಥಿತರಿದ್ದರು.

## ತಂದೆ - ತಾಯಿ ಮರೆತರೆ ಮಕ್ಕಳಿಗೆ ಭವಿಷ್ಯವಿಲ್ಲ

ಮಲೇಬೆನ್ನೂರು, ಏ.6 - ಮಕ್ಕಳು ತಂದೆ ತಾಯಿಯನ್ನು ಮರೆತರೆ ಮುಂಬರುವ ಜೀವನದಲ್ಲಿ ಭವಿಷ್ಯವಿಲ್ಲ ಎಂದು ಹರಿಹರ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಶ್ರೀ ಶಾರದೇಶಾನಂದಜೀ ಮಹಾರಾಜ್ ಸಂದೇಶ ನುಡಿದರು.

ಅವರು ಸಮೀಪದ ಕುಣೆಬೆಳಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸವೇಶ್ವರ ಕ್ಯಾಂಪ್‌ನಲ್ಲಿ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಶ್ರೀ ಯೋಗಾನಂದಜೀ ರವರ ಜಯಂತಿ ನಿಮಿತ್ತ 50 ಬಡ ಮಹಿಳೆಯರಿಗೆ ಪೌಷ್ಟಿಕ ಆಹಾರ ಹಾಗೂ ಮಕ್ಕಳಿಗೆ ಡ್ರೆಸ್ ವಿತರಿಸಿ, ಆಶೀರ್ವಚನ ನೀಡುತ್ತಾ ಮಕ್ಕಳು ದೊಡ್ಡವರಾದ ಬಳಿಕ ಹೆತ್ತವರನ್ನು ಮರೆಯಬಾರದು.

ಹತ್ತನೇ ತರಗತಿಯಲ್ಲಿ ಶೇ 80 ರಷ್ಟು ಫಲಿತಾಂಶ ಪಡೆದ ಮೂವರು ಬಡ ಮಕ್ಕಳಿಗೆ ಉಚಿತ ಕಂಪ್ಯೂಟರ್ ಶಿಕ್ಷಣವನ್ನು ನೀಡಲು ಆಶ್ರಮ ನೆರವಾಗುತ್ತದೆ ಎಂದು ಹೇಳಿದರು.

ಡಾ.ಶಾರದಾದೇವಿ ಮಾತನಾಡಿ, ಬಸವೇಶ್ವರ ಕ್ಯಾಂಪ್‌ನಲ್ಲಿ ತಜ್ಞ ವೈದ್ಯರನ್ನು ಕರೆಸಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಿ, ಎಲ್ಲರಿಗೂ ಉಚಿತ ಔಷಧಿಗಳನ್ನು ನೀಡಲಾಗುವುದು ಎಂದರು. ರಾಮಕೃಷ್ಣ ವಿವೇಕ ಆಶ್ರಮವು ಕಳೆದ ನೆರೆ ಹಾವಳಿಯಲ್ಲಿ ಹತ್ತು ಲಕ್ಷ ರೂ.ಗಳಲ್ಲಿ ಬಡ ವಿದ್ಯಾರ್ಥಿಗಳಿಗೆ ಪುಸ್ತಕ, ಬ್ಯಾಗ್, ಬಟ್ಟೆ, ಹೊದಿಕೆ ಮತ್ತಿತರೆ ಆಹಾರಗಳನ್ನು ವಿತರಿಸಲಾಗಿದೆ ಎಂದು ಮೆಚ್ಚುಗೆಪಟ್ಟರು.

ಕೆನರಾ ಬ್ಯಾಂಕ್‌ನ ಪ್ರಮೋದ್ ಬೀಳಗಿ ಮಾತನಾಡಿ, ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಸುರಕ್ಷಾ ವಿಮಾ, ಜೀವನ್ ಭೀಮಾ ಹಾಗೂ ಅಟಲ್ ಪಿಂಚಣಿ ಯೋಜನೆಯ ವಿವರ ನೀಡಿದರು.

ಕಂಪ್ಯೂಟರ್ ಕೇಂದ್ರದ ನಾಗರತ್ನ ಅಂಬಾಸಾ ಮಾತನಾಡಿ, ಪ್ರತಿಭಾವಂತ ಮಕ್ಕಳಿಗೆ ಉಚಿತ ಗಣಕಯಂತ್ರ ಶಿಕ್ಷಣ ನೀಡಲು ಸಂಸ್ಥೆ ಬಯಸಿದೆ ಎಂದರು. ಗ್ರಾಮದ ಹರೀಶ್, ರವಿ, ಗಣೇಶ, ಚೈತ್ರ, ಮಧುಮತಿ, ಶೀಲಾ, ಶಾಂತಮ್ಮ ಅನಿಸಿಕೆ ಹೇಳಿಕೊಂಡರು. ದಾನಿಗಳಾದ ಶ್ರೀಧರ್ ಭೂತೆ, ಪತ್ರಕರ್ತ ಸದಾನಂದ ಹಾಜರಿದ್ದರು.



ಮಲೇಬೆನ್ನೂರಿನಲ್ಲಿ ಶ್ರೀ ಶಾರದೇಶಾನಂದಜೀ

## ಪರಿಶ್ರಮದಿಂದ ಜೀವನದಲ್ಲಿ ಯಶಸ್ಸು ಸಾಧ್ಯ



ಬಿ.ಎಸ್.ಸಿ ಕಾಲೇಜಿನ ಅಧ್ಯಕ್ಷ ಬಿ.ಸಿ.ಶಿವಕುಮಾರ್

ದಾವಣಗೆರೆ, ಏ.6- ಜೀವನದಲ್ಲಿ ಯಶಸ್ಸು ಸಾಧಿಸಲು ಪರಿಶ್ರಮ ಮುಖ್ಯ. ವಿಜ್ಞಾನಕ್ಕಿಂತ ಕಲೆ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ತ್ವರಿತ ಗತಿಯಲ್ಲಿ ಯಶಸ್ಸು ಗಳಿಸಲು ಸಾಧ್ಯವಿದೆ ಎಂದು ಬಿ.ಎಸ್.ಸಿ. ಪ್ರಥಮ ದರ್ಜೆ ಕಾಲೇಜಿನ ಅಧ್ಯಕ್ಷ ಬಿ.ಸಿ. ಶಿವಕುಮಾರ್ ಅಭಿಪ್ರಾಯಪಟ್ಟರು.

ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರ ಪರೀಕ್ಷಾ ಪೂರ್ವ ಸಿದ್ಧತಾ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ಜೀವನದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪ್ರಮುಖ ಘಟ್ಟ ಎಂದರು. ಬಹುತೇಕ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ನಂತರ ವಿಜ್ಞಾನದತ್ತ ಹೆಚ್ಚು ಆಕರ್ಷಿತರಾಗುತ್ತಾರೆ. ಆದರೆ, ವಿಜ್ಞಾನಕ್ಕಿಂತ ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಯಶಸ್ಸು ಗಳಿಸಲು ಸಾಧ್ಯವಿದೆ. ಆದ್ದರಿಂದ ವಿಜ್ಞಾನ ವಿಷಯಕ್ಕೆ ಹಾಕುವ ಶ್ರಮವನ್ನು ಕಲೆ ಮತ್ತು ವಾಣಿಜ್ಯ ವಿಷಯದತ್ತ ಹರಿಸಿದರೆ ಉತ್ತಮ ಸಾಧನೆ ಮಾಡಬಹುದು ಎಂದರು. ಓದಿಗೆ ಸಂಬಂಧಿಸಿದಂತೆ ಪೋಷಕರೇ ನಿರ್ಧಾರ ಕೈಗೊಳ್ಳುತ್ತಾರೆ. ಆದರೆ, ವಿದ್ಯಾರ್ಥಿಗಳೇ ಓದಿನ ಆಯ್ಕೆ ಮಾಡಿಕೊಂಡರೆ ಯಶಸ್ಸು ಸುಲಭವಾಗಲಿದೆ ಎಂದರು. ಜೀವನದಲ್ಲಿ ಯಶಸ್ಸು ಕಾಣಲು ಸಂವಹನ ಕೌಶಲ್ಯ ರೂಢಿಸಿಕೊಳ್ಳಬೇಕೆಂದು ಕರೆ ನೀಡಿದರು.

ಪ್ರಾಚಾರ್ಯ ಡಾ. ಕೆ. ಷಣ್ಮುಖ, ಸಹಾಯಕ ಪ್ರಾಧ್ಯಾಪಕ ಕೆ.ಜೆ. ಗುರುಪ್ರಸಾದ್, ಸಿದ್ದಗಂಗಾ ಪಿಯು ಕಾಲೇಜಿನ ನಿರ್ದೇಶಕ ಡಾ. ಡಿ.ಎಸ್. ಜಯಂತ್ ಮಾತನಾಡಿದರು.

ಕೆ.ಬಿ. ಚಿನ್ಮಯಿ ಪ್ರಾರ್ಥಿಸಿದರು. ಡಾ.ಕೆ.ಎಂ. ಮಂಜುನಾಥ್ ಸ್ವಾಗತಿಸಿದರು. ಡಾ. ಡಿ.ಹೆಚ್. ಭಾಗ್ಯಶ್ರೀ ನಿರೂಪಿಸಿದರು. ಎಂ.ಹೆಚ್. ಪ್ರಸನ್ನ ರೆಡ್ಡಿ ವಂದಿಸಿದರು.

## ಯುಬಿಡಿಟಿ ಕಾಲೇಜಿನಲ್ಲಿ ವಿಚಾರ ಸಂಕಿರಣ




ದಾವಣಗೆರೆ, ಏ.6- ರೋಟರಿ ಕ್ಲಬ್ ವಿದ್ಯಾನಗರ ಹಾಗೂ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಪರಿಸರ ಮಾಲಿನ್ಯ ಮತ್ತು ರಕ್ಷಣೆ ಕುರಿತ ವಿಚಾರ ಸಂಕಿರಣ ನಡೆಯಿತು.

ಬೆಳಗಾವಿ ವಿಟಿಯು ಕಾರ್ಯಕಾರಿ ಮಂಡಳಿ ಸದಸ್ಯ ಡಾ. ಹೆಚ್.ಆರ್. ಪ್ರಭಾಕರ್, ಯುಬಿಡಿಟಿ ಪ್ರಾಧ್ಯಾಪಕ ಡಿ.ಪಿ. ನಾಗರಾಜಪ್ಪ ಕಾರ್ಯಾಗಾರ ನಡೆಸಿಕೊಟ್ಟರು. ರೋಟರಿ ಕ್ಲಬ್ ಅಧ್ಯಕ್ಷ ಎನ್.ಬಿ. ಮೃತ್ಯುಂಜಯಪ್ಪ ಅಧ್ಯಕ್ಷತೆ ವಹಿಸಿದ್ದರು. ಉಪರಾಜ್ಯಪಾಲ ಹೆಚ್.ಬಿ. ಚಂದ್ರಾಚಾರ್ ಮತ್ತಿತರರು ಉಪಸ್ಥಿತರಿದ್ದರು.

## ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಡಿಎಸ್4 ನಿಂದ ಸಿಎಂ ಗೆ ಮನವಿ

ಹರಿಹರ, ಏ.6- ಒಳಮೀಸಲಾತಿ ವರ್ಗೀಕರಣ ಮಾಡುವಂತೆ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೋರಿ ತಾಲ್ಲೂಕಿನ ಡಿಎಸ್4 ಕರ್ನಾಟಕ ತಾಲ್ಲೂಕು ಸಮಿತಿ ಅಧ್ಯಕ್ಷ ಎಂ. ಮಂಜುನಾಥ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಮನವಿ ಸಲ್ಲಿಸಿದರು.

ತಾಲ್ಲೂಕಿನ ಬೆಳ್ಳೂಡಿ ಶಾಖಾ ಮಠದಲ್ಲಿ ಮನವಿ ಸಲ್ಲಿಸಿ ಮಾತನಾಡಿದ ಅವರು, ನ್ಯಾ. ಸದಾಶಿವ ಆಯೋಗದ ವರದಿ ನೆನೆಗುದಿಗೆ ಬಿದ್ದಿದ್ದು, ಅಸ್ಪೃಶ್ಯ ಸಮುದಾಯಕ್ಕೆ ತುರ್ತಾಗಿ ಒಳ ಮೀಸಲಾತಿ ವರ್ಗೀಕರಣ ಮಾಡಬೇಕು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳಿಗೆ ಹೆಚ್ಚಿನ ಸಹಾಯಧನ ನೀಡಬೇಕು ಎಂದರು.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ವಸತಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅನ್ಯಾಯವಾಗಿದ್ದು, ಕೂಡಲೇ ಇದನ್ನು ತನಿಖೆಗೆ ಒಳಪಡಿಸಬೇಕು. ದಲಿತ ಚಳುವಳಿಯ ಸಂಸ್ಥಾಪಕ ಪ್ರೊ. ಬಿ. ಕೃಷ್ಣಪ್ಪನವರ ಸ್ಮಾರಕದ ಪಕ್ಕದಲ್ಲಿ ಮದ್ಯದಂಗಡಿ (ಬಾರ್ ಅಂಡ್ ರೆಸ್ಟೋರೆಂಟ್) ಇಡಲಾಗಿದ್ದು, ಕೂಡಲೇ ತೆರವುಗೊಳಿಸಬೇಕು ಎಂದು ಮನವಿ ಮಾಡಿದರು.

ತಾಲ್ಲೂಕಿನಲ್ಲಿ ಅಂಬೇಡ್ಕರ್ ಭವನಕ್ಕೆ 7-8 ವರ್ಷಗಳ ಹಿಂದೆಯೇ ಅನುದಾನವನ್ನು ಬಿಡುಗಡೆ ಮಾಡಿದ್ದು, ಕೂಡಲೇ ನಗರದ ಹಳೇ ಕೋರ್ಟ್ ಜಾಗದಲ್ಲಿ ಅಂಬೇಡ್ಕರ್ ಭವನವನ್ನು ನಿರ್ಮಿಸಬೇಕು. ಜಿಲ್ಲಾ ಮತ್ತು ತಾಲ್ಲೂಕು ಎಸ್ಸಿ ಮತ್ತು ಎಸ್ಟಿ ಕುಂದು ಕೊರತೆ ಸಭೆಗಳನ್ನು ನಿಗದಿಪಡಿಸಿದ ವೇಳೆಗೆ ನಡೆಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಿಎಸ್4 ಜಿಲ್ಲಾ ಕಾರ್ಯಾಧ್ಯಕ್ಷ ಸಂತೋಷ್. ಎಂ. ನೋಟದವರ್, ಸಮಿತಿಯ ವಿನಾಯಕ ಎನ್. ಹೊಳೆಸಿರಿಗೆರೆ, ಮಂಜುನಾಥ ಹೆಚ್ ಸೇರಿದಂತೆ ಇನ್ನಿತರೆ ಪದಾಧಿಕಾರಿಗಳು ಇದ್ದರು.

## ಮೂರು ತಿಂಗಳ ಗರ್ಭಿಣಿ ಆತ್ಮಹತ್ಯೆ



ದಾವಣಗೆರೆ, ಏ.6- 3 ತಿಂಗಳ ಗರ್ಭಿಣಿಯೋರ್ವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ವಿದ್ಯಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿಂದು ನಡೆದಿದೆ.

ರೇಣುಕಾ (24) ಆತ್ಮಹತ್ಯೆ ಮಾಡಿಕೊಂಡ ಗೃಹಿಣಿ. ತಾನು ಪ್ರೀತಿಸಿದ್ದ ಪ್ರಕಾಶ್ ಎಂಬಾತನೊಂದಿಗೆ ಕಳೆದ 5 ತಿಂಗಳ ಹಿಂದೆ ವಿವಾಹವಾಗಿದ್ದಳು. ಪ್ರೇಮ ವಿವಾಹವಾದ ಮೇಲೆ ತವರು ಮನೆಯವರೊಂದಿಗೆ ಸಂಪರ್ಕ ಕಡಿತವಾಗಿತ್ತು ಎನ್ನಲಾಗಿದೆ. ಯುಗಾದಿ ಹಬ್ಬಕ್ಕೆ ತವರು ಮನೆಗೆ ಹೋಗಬೇಕೆಂಬ ಆಸೆ ಹೊಂದಿದ್ದಳು ಎಂದು ಹೇಳಲಾಗುತ್ತಿದೆ. ಬಾಡಾ ಕ್ರಾಸ್ ಸಮೀಪದ ಆಂಜನೇಯ ಕಾಟನ್ ಮಿಲ್ ಬಳಿಯ ಗಂಡನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದು, ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಂಚೆ ಕಾರ್ಡಿನಲ್ಲಿ ಚಿತ್ರ ಬರೆಯುವ ಸ್ಪರ್ಧೆ




ದಾವಣಗೆರೆ, ಏ. 6- ನಗರದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಮಕ್ಕಳಿಗೆ ಪೋಸ್ಟ್ ಕಾರ್ಡಿನಲ್ಲಿ ವಿಜ್ಞಾನ ಚಿತ್ರ ಚಿತ್ರಿಸುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಮನೋಹರ್ ಎಸ್. ಚಿಗಟೇರಿ ಅವರು ಅಂಚೆ ಕಾರ್ಡಿನ ಮೇಲೆ ರುಜು ಹಾಕುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಕೆ.ಬಿ. ಶಾಂತಕುಮಾರಿ, ಚಿತ್ರಕಲಾ ಶಿಕ್ಷಕ ಶಾಂತಯ್ಯ ಪರಡಿಮಠ, ಕೆ.ಹಾಲಪ್ಪ , ಲಿಂಗರಾಜ ಗಾಜಿ, ಕೆ.ಪಿ. ರುದ್ರೇಶಮೂರ್ತಿ, ಹೆಚ್. ಶ್ವೇತ ಉಪಸ್ಥಿತರಿದ್ದರು.

ಶಾಲೆಯ ಹಿರಿಯ ಶಿಕ್ಷಕ ಬಿ.ಕೆ. ಹನುಮಂತಪ್ಪ ಸ್ವಾಗತಿಸಿದರು. ಜಿ.ಎಂ. ಪ್ರಭುದೇವ ನಿರೂಪಿಸಿದರು. ಜ್ಯೋತಿ ಹೆಚ್.ಬಿ. ವಂದಿಸಿದರು.

## ಹರಿಹರ : ಹಾಲು, ಹಣ್ಣು ವಿತರಣೆ



ಹರಿಹರ, ಏ.6- ಇಲ್ಲಿನ ಶ್ರೀ ಮಹರ್ಷಿ ವಾಲ್ಮೀಕಿ ನಾಯಕ ಸಮಾಜ ಸಂಘದಿಂದ ಲಿಂಗೈಕ್ಯ ಜಗದ್ಗುರು ಶ್ರೀ ಪುಣ್ಯಾನಂದಪುರಿ ಮಹಾಸ್ವಾಮೀಜಿ ಅವರ 14ನೇ ವರ್ಷದ ಪುಣ್ಯಾರಾಧನೆ ಅಂಗವಾಗಿ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಾಲು, ಹಣ್ಣು, ಬ್ರೆಡ್ ವಿತರಿಸಲಾಯಿತು. ಸಂಘದ ಹೆಚ್.ಕೆ.ಮೂರ್ತಿ, ಎಸ್.ಆರ್. ಮಧುಸೂದನ್, ಬಸವರಾಜ್, ನಾಗರಾಜಪ್ಪ, ಹನುಮಂತ, ರಾಜಪ್ಪ, ಕೃಷ್ಣ, ಸಿದ್ದಪ್ಪ, ನಿಂಗಪ್ಪ, ಕರಿಬಸಪ್ಪ, ಪರಶು, ನಾಗನಗೌಡ ಮತ್ತು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪಾರ್ವತಿ ಭಾಗವಹಿಸಿದ್ದರು.

## ಹೊಸ ನ್ಯಾಯಬೆಲೆ ಅಂಗಡಿಗೆ ಅರ್ಜಿ

ದಾವಣಗೆರೆ, ಏ.6- ಚನ್ನಗಿರಿ ತಾಲ್ಲೂಕು ವ್ಯಾಪ್ತಿಯಲ್ಲಿರುವ ಯಕ್ಕೆಗೊಂದಿಗೆ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಲು ಅರ್ಜಿ ಕರೆಯಲಾಗಿದೆ. ಜಿಲ್ಲಾ ಕಚೇರಿ ಅಥವಾ ತಹಶೀಲ್ದಾರ್, ಚನ್ನಗಿರಿ ತಾಲ್ಲೂಕು ಕಚೇರಿಯಿಂದ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದೃಢೀಕೃತ ದಾಖಲೆಗಳೊಂದಿಗೆ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 ದಿವಸದೊಳಗೆ ಜಂಟಿ ನಿರ್ದೇಶಕರು, ಆಹಾರ ನಾಗರಿಕ ಸರಬರಾಜು - ಗ್ರಾಹಕರ ವ್ಯವಹಾರಗಳ ಇಲಾಖೆಗೆ ಸಲ್ಲಿಸುವುದು.

## 24ನೇ ವಾರ್ಡ್ ನಲ್ಲಿ ಬಿಜೆಪಿ ಸಂಸ್ಥಾಪನಾ ದಿನ



ದಾವಣಗೆರೆ, ಏ.6 - ಬಿಜೆಪಿಯ ಸಂಸ್ಥಾಪನಾ ದಿನವನ್ನು 24ನೇ ವಾರ್ಡಿನ ಶಕ್ತಿ ಕೇಂದ್ರದಲ್ಲಿ ಬಿಜೆಪಿ ಪ್ರಮುಖರಿಂದ ಭಾರತಮಾತೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಹಾಗೂ ಅಭಿವೃದ್ಧಿಯ ಮನ್ವಂತರಕ್ಕೆ ಸುಭದ್ರ ಬುನಾದಿ ಹಾಕಿದ ಬಿಜೆಪಿ ಹಿರಿಯ ಮುಖಂಡರಾದ ಎನ್ ಟಿ ಚಂದ್ರಶೇಖರಪ್ಪ ಅವರಿಗೆ ಗೌರವ ಸಮರ್ಪಣೆ ಸಲ್ಲಿಸುವ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿಯ ರಾಜ್ಯ ಪ್ರಕೋಷ್ಠಗಳ ಪ್ರಮುಖ ಡಾ. ಶಿವಯೋಗಿಸ್ವಾಮಿ, ರಾಜ್ಯ ಬಿಜೆಪಿ ಕಾರ್ಯದರ್ಶಿ ಸುಧಾ ಜಯರುದ್ರೇಶ್, 24ನೇ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್ ಕೆ., ಮಹಾ ಶಕ್ತಿಕೇಂದ್ರ ಪ್ರಮುಖ ಪದ್ಮನಾಭ ಶೆಟ್ಟಿ, ಬಿಜೆಪಿ ಮುಖಂಡರಾದ ಜಯರುದ್ರೇಶ್, ಏಕನಾಥ್ ರಾಯ್ಕರ್, ಜಯಣ್ಣ, ಶಕ್ತಿಕೇಂದ್ರದ ಪ್ರಮುಖರಾದ ಕಿರಣ್ ಹಾಗೂ ಶೇಖರ್ ಉಪ್ಪಿನ್, ಬೂತ್ ಅಧ್ಯಕ್ಷರಾದ ಸಿದ್ಧಲಿಂಗೇಶ್, ಸೋಹನ್, ಮಧು, ಜಿತೇಂದ್ರ, ಅನಿಲ್, ವಿನಯ್, ರೇಣುಕಾ ಪ್ರಸನ್ನ, ಪವನ್ ಶೆಟ್ಟಿ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸಚಿನ್ ವೆರ್ಣೇಕರ್, ಪದಾಧಿಕಾರಿಗಳಾದ ವಿವೇಕ್, ಕಾರ್ತಿಕ್, ರಘು ತೊಗಟೆ, ಲಿಂಗರಾಜ್, ಕಿರಣ್, ರಾಕೇಶ್ ಮತ್ತಿತರರು ಉಪಸ್ಥಿತರಿದ್ದರು.

## 9 ರಂದು ವಾಲ್ಮೀಕಿ ಜಾತ್ರಾ ಸೇವಾರ್ಥಿಗಳಿಗೆ ಸನ್ಮಾನ

ದಾವಣಗೆರೆ, ಏ.6- 3ನೇ ವಾಲ್ಮೀಕಿ ಜಾತ್ರಾ ಮಹೋತ್ಸವಕ್ಕೆ ಸೇವೆ ಸಲ್ಲಿಸಿರುವ ಜಿಲ್ಲಾ ವಾಲ್ಮೀಕಿ ನಾಯಕ ಪದಾಧಿಕಾರಿಗಳಿಗೆ ಸನ್ಮಾನ ಹಾಗೂ ಮೀಸಲಾತಿ ಹೋರಾಟದ ರೂಪುರೇಷೆ ಕುರಿತ ಸಭೆ ಇದೇ ದಿನಾಂಕ 9ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ನಡೆಯಲಿದೆ ಎಂದು ವಾಲ್ಮೀಕಿ ಸಮಾಜದ ಮುಖಂಡ ಎನ್.ಎಂ. ಆಂಜನೇಯ ಗುರೂಜಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿಂದು ಈ ವಿಷಯ ತಿಳಿಸಿದ ಅವರು, ನಗರದ ನಾಯಕ ವಿದ್ಯಾರ್ಥಿ ನಿಲಯದ ಶ್ರೀ ವಾಲ್ಮೀಕಿ ಸಮುದಾಯ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಜಾತ್ರಾ ಮಹೋತ್ಸವದಲ್ಲಿ ಸೇವೆ ಸಲ್ಲಿಸಿದ ಸಮಾಜದ ಎಲ್ಲಾ ಪದಾಧಿಕಾರಿಗಳಿಗೆ ಶ್ರೀಮಠದ ವತಿಯಿಂದ ಸನ್ಮಾನಿಸಲಾಗುವುದು.


ಸಾನ್ನಿಧ್ಯವನ್ನು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ವಹಿಸಲಿದ್ದಾರೆ ಎಂದರು.

ಜಿಲ್ಲಾ ವಾಲ್ಮೀಕಿ ಸಮಾಜದ ಅಧ್ಯಕ್ಷ ಬಿ. ವೀರಣ್ಣ ಮಾತನಾಡಿ, ಬರುವ ಮೇ 30 ರಂದು ನಗರದ ರಾಜವೀರ ಮದಕರಿ ನಾಯಕ ವೃತ್ತದಲ್ಲಿ ಲುಂಕೆಪ್ಪ ಬಸಪ್ಪ ಬಡಗಿ ಕೃಷ್ಣಪ್ಪ ಅವರ ಸವಿನೆನಪಿಗಾಗಿ ಸರ್ವಧರ್ಮ ಸಾಮೂಹಿಕ ವಿವಾಹ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು, ಜಿಲ್ಲಾಡಳಿತ ಅನುಮತಿ ನೀಡಿದರೆ ನಡೆಸಲಾಗುವುದು ಎಂದು ಹೇಳಿದರು.

ಅಂದಿನ ಸಭೆಯಲ್ಲಿ ಶೇ.7.5ರಷ್ಟು ಮೀಸಲಾತಿ ಹೋರಾಟದ ಬಗ್ಗೆ ಚರ್ಚಿಸಲಾಗುವುದು. ಈಗಾಗಲೇ ಕೇಂದ್ರ ಸರ್ಕಾರ ಮೀಸಲಾತಿ ಕೊಟ್ಟಿದೆ. ರಾಜ್ಯ ಸರ್ಕಾರವೂ ನೀಡುವ ವಿಶ್ವಾಸವಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶ್ಯಾಗಲೆ ಮಂಜುನಾಥ್, ಗೋವಿಂದರಾಜು, ಗುಮ್ಮನೂರು ಶಂಭಣ್ಣ, ಅಣ್ಣಾಪುರ ಹೇಮಣ್ಣ, ಚೇತನ್, ಗುಡಾಳ್ ವೆಂಕಟೇಶ್, ಎಸ್.ಕೆ. ಸ್ವಾಮಿ ಉಪಸ್ಥಿತರಿದ್ದರು.

## ಉದ್ಯೋಗ ಖಾತ್ರಿ ಕಾಮಗಾರಿ ಪರಿಶೀಲನೆ



ಕೂಡ್ಲಿಗಿ, ಏ.6- ತಾಲ್ಲೂಕಿನ ಹುಡೇಂ ಗ್ರಾಮ ಪಂಚಾಯ್ತಿಯಲ್ಲಿ ನಡೆದ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಚೆಕ್ ಡ್ಯಾಂ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಮಹಾಂತೇಶ್ ಸ್ವಾಮಿ, ಇಂಜಿನಿಯರ್ ಬಿ.ಎಸ್.ಪಿ ಪ್ರಸನ್ನ ಭೇಟಿ ನೀಡಿ ಕಾಮಗಾರಿ ಪರಿಶೀಲನೆ ಮಾಡಿದರು.

ಭೇಟಿ ವೇಳೆ ಫಲಾನುಭವಿಗಳನ್ನುದ್ದೇಶಿಸಿ ಮಾತನಾಡಿದ ಬಿಎಸ್‌ಪಿ ಪ್ರಸನ್ನ, ಬಡವರಿಗೆ, ಆರ್ಥಿಕವಾಗಿ ಹಿಂದುಳಿದವರಿಗೆ, ಕೂಲಿಕಾರರಿಗೆ ಇದೊಂದು ಒಳ್ಳೆಯ ಯೋಜನೆಯಾಗಿದೆ. ವೈಯಕ್ತಿಕ ಕಾಮಗಾರಿ ಹಾಗೂ ಸಾಮೂಹಿಕ ಕಾಮಗಾರಿಗಳಲ್ಲಿ ತೊಡಗಿಸಿಕೊಂಡು ಯೋಜನೆಯ ಲಾಭ ಪಡೆಯಬೇಕು ಎಂದರು.

ಹುಡೇಂ ಗ್ರಾ.ಪಂ. ಹಾಗೂ ಹೊಸೂರು ಗ್ರಾಮದಲ್ಲಿ ತಾಲ್ಲೂಕಿನಲ್ಲಿ ಒಟ್ಟು 1,432 ಜಾಬ್ ಕಾರ್ಡ್‌ಗಳನ್ನು ನೀಡಲಾಗಿದ್ದು, ಇದರಲ್ಲಿ ಹುಡೇಂ ಹಾಗೂ ಹೊಸೂರು ಗ್ರಾಮದಲ್ಲಿರುವ ಒಟ್ಟು 500 ಕೂಲಿಗಾರರ ಜಾಬ್ ಕಾರ್ಡ್ ಫೀಡ್ ಆಗಿದ್ದು ಇದರಲ್ಲಿ 400 ಕ್ಕೂ ಹೆಚ್ಚು ಕೂಲಿಕಾರರು ಕೆಲಸವನ್ನು ನಿರ್ವಹಿಸುತ್ತಿದ್ದಾರೆ ಎಂದರು.

ಕೋವಿಡ್ ಹೆಚ್ಚಾಗಿದ್ದು, ಜೊತೆಗೆ ಬೇಸಿಗೆ ಇರುವ ಕಾರಣದಿಂದ ಕೂಲಿಯನ್ನು ಶೇ.30 ಹೆಚ್ಚಳ ಮಾಡಲಾಗಿದೆ ಎಂದು ಕೂಲಿಕಾರರಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾ.ಪಂ. ಸದಸ್ಯರುಗಳಾದ ಬಿ. ರಾಮಚಂದ್ರಪ್ಪ, ಸುಂದರಮ್ಮ ಮಲ್ಲಿಕಾರ್ಜುನ್, ನಾಗಮ್ಮ ಗದ್ದಿಗಗೆ ಸ್ವಾಮಿ, ಶಶಿಕಲಾ ಜಯಣ್ಣ, ಕುರಿ ಪಾಲಯ್ಯ, ಎಲ್ಲಪ್ಪ ಹಾಗೂ ಮೇಟಿ ನಾಗರಾಜ್, ಗೋವಿಂದಪ್ಪ, ಸಿದ್ದೇಶ್ ಹಾಗೂ ಹೆಚ್. ಮಂಜುನಾಥ್, ಗ್ರಾ.ಪಂ. ಸಿಬ್ಬಂದಿ ವರ್ಗದವರು ಹಾಗೂ ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

## ಅನಾಥಾಶ್ರಮಗಳು ನಿರ್ಗತಿಕರ, ವಯೋವೃದ್ಧರ ಆಶಾಕಿರಣ



ಕೊಟ್ಟೂರಿನಲ್ಲಿ ಉಪನ್ಯಾಸಕ ಹೆಚ್.ಮಲ್ಲಿಕಾರ್ಜುನ್

ಕೊಟ್ಟೂರು, ಏ.6- ಅನಾಥಾಶ್ರಮಗಳು ನಿರ್ಗತಿಕರ, ವಯೋವೃದ್ಧರ, ವಿಕಲಚೇತನರ ಆಶಾಕಿರಣಗಳಾಗಿವೆ. ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ಇಂತಹ ಆಶ್ರಮಗಳನ್ನು ತೆರೆಯಬೇಕು ಎಂದು ಎಸ್.ಯು.ಎಸ್. ಜೆ.ಪ.ಪೂ ಕಾಲೇಜಿನ ಕನ್ನಡ ಉಪನ್ಯಾಸಕ ಹೆಚ್.ಮಲ್ಲಿಕಾರ್ಜುನ ಅಭಿಪ್ರಾಯ ಪಟ್ಟರು.

ಪಟ್ಟಣದ ಉತ್ತಂಗಿ ಹರೇಮಠದ ರುದ್ರಮ್ಮ ಕೊಟ್ರಸ್ವಾಮಿ ಅನಾಥಾಶ್ರಮಕ್ಕೆ ಭೇಟಿ ನೀಡಿ ಅನಾಥರನ್ನು ತನ್ನ ಮಕ್ಕಳಂತೆ ಪಾಲನೆ ಮಾಡುತ್ತಿರುವ ರುದ್ರಮ್ಮನವರಿಗೆ ಸನ್ಮಾನಿಸಿ ಹಣದ ಸಹಾಯ ಮಾಡಿ ಮಾತನಾಡಿ, ರುದ್ರಮ್ಮನಂತವರು ಊರಿಗೊಬ್ಬರಿದ್ದರೆ, ದುರ್ಬಲರ ಬದುಕಿನಲ್ಲಿ ಆಶಾಕಿರಣ ಮೂಡುತ್ತದೆ. ಸರ್ಕಾರದ ಸಹಾಯವಿಲ್ಲದೆ ಕೇವಲ ದಾನಿಗಳ ಸಹಾಯದಿಂದ ಅನಾಥಾಶ್ರಮ ಬಂಗಾರ ಮಾರಿ, ಅದೂ ಸಾಲದೆ ನಡೆಸುತ್ತಿರುವುದು ಮಾದರಿಯಾಗಿದೆ. ತನ್ನ ಗಂಡನ ಪೆನ್ಷನ್ ಹಣದಿಂದ ಕಳೆದ 5 ವರ್ಷಗಳಿಂದ ಅನಾಥಾಶ್ರಮ ನಡೆಸಿಕೊಂಡು ಬರುತ್ತಿರುವುದು ನಿಸ್ವಾರ್ಥ.

75 ವರ್ಷ ವಯಸ್ಸಾಗಿದ್ದರೂ ಸ್ವತಃ ತಾವೇ ಅನಾಥರ ಸೇವೆ ಮಾಡುತ್ತಿರುವುದು ನಿಜವಾದ ಸೇವೆಯಾಗಿದೆ. ಇಂತವರಿಗೆ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಗುರುಪ್ರಸಾದ್ ಮಾತನಾಡಿ, ರಾಣೇಬೆನ್ನೂರು, ದಾವಣಗೆರೆ, ಚಿತ್ರದುರ್ಗ, ಹೊಸಪೇಟೆ, ಕೋಗಳಿ, ಶೃಂಗಾರ ತೋಟ, ಸಂಡೂರು ಮುಂತಾದ ಊರುಗಳಿಂದ 20ಕ್ಕೂ ಹೆಚ್ಚು ಅನಾಥರು ಸೇವಾಶ್ರಮದಲ್ಲಿರುವುದರಿಂದ ಕೈಲಾದವರು ರುದ್ರಮ್ಮನವರಿಗೆ ಸಹಕಾರ ನೀಡಬೇಕು ಎಂದರು. ಮಠದ ನಟರಾಜ್, ಉಪನ್ಯಾಸಕ ಬೀರಾನಾಯ್ಕ ಸೇವಾಶ್ರಮಕ್ಕೆ ಭೇಟಿ ನೀಡಿದ್ದರು.

## ದರೋಡೆ ಪ್ರಕರಣ : ಅಪರಾಧಿಗೆ ಜೈಲು ಶಿಕ್ಷೆ

ದಾವಣಗೆರೆ, ಏ.6- ಒಂಟಿ ಮಹಿಳೆ ಇದ್ದ ಮನೆಗೆ ನುಗ್ಗಿ ಪಂಚಲೋಹದ ಮೂರ್ತಿ ಹಾಗೂ ಪಾದುಕೆಗಳ ಜೊತೆಗೆ ಚಾಕುವಿನಿಂದ ಹಲ್ಲೆ ಮಾಡಿ ಮಹಿಳೆಯ ಕುತ್ತಿಗೆಯಲ್ಲಿದ್ದ ಬಂಗಾರದ ಮಾಂಗಲ್ಯ ಸರವನ್ನು ಅಪಹರಿಸಿ ದರೋಡೆಗೆ ಯತ್ನಿಸಿದ್ದ ಅಪರಾಧಿಗೆ ಇಲ್ಲಿನ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ 7 ವರ್ಷ ಜೈಲು ಶಿಕ್ಷೆ ಮತ್ತು 10 ಸಾವಿರ ದಂಡ ವಿಧಿಸಿ ಇಂದು ತೀರ್ಪು ನೀಡಿದೆ.

ನಗರದ ಅಶೋಕ ನಗರ ವಾಸಿ ಬಸವರಾಜ್ ಶಿಕ್ಷೆಗೆ ಗುರಿಯಾದ ಆರೋಪಿ. ನಗರದ ದೇವರಾಜ್ ಅರಸ್ ಬಡಾವಣೆ 'ಸಿ' ಬ್ಲಾಕ್‌ನ 5ನೇ ಕ್ರಾಸ್‌ನ ಮನೆಯಲ್ಲಿ ನೀಲಮ್ಮ ಅವರು ಒಬ್ಬರೇ ವಾಸವಾಗಿದ್ದರು.

2014ರ ಮಾರ್ಚ್ 24ರಂದು ಮಧ್ಯಾಹ್ನ ಆರೋಪಿ ಬಸವರಾಜ್ ಮನೆಗೆ ಅಕ್ರಮ ಪ್ರವೇಶ ಮಾಡಿ, ದೇವರ ಮನೆಯಲ್ಲಿಟ್ಟಿದ್ದ ಪಂಚಲೋಹದ ಲಕ್ಷ್ಮೀದೇವಿಯ ಮೂರ್ತಿ ಹಾಗೂ 2 ಪಾದುಕೆಗಳನ್ನು ಕಳ್ಳತನ ಮಾಡಿಕೊಂಡು ಅಲ್ಲಿದ್ದ ನೀಲಮ್ಮನಿಗೆ ಚಾಕುವಿನಿಂದ ತಿವಿದು ಗಾಯಗೊಳಿಸಿ ಅವರ ಕೊರಳಲ್ಲಿದ್ದ ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಮನೆಯಿಂದಾಚೆ ಪರಾರಿಯಾಗಲು ಯತ್ನಿಸಿದ್ದಾನೆ.

ಈ ವೇಳೆ ಸಾರ್ವಜನಿಕರು ಆರೋಪಿಯನ್ನು ಹಿಡಿದುಕೊಂಡು ಪೊಲೀಸರಿಗೆ ಮಾಹಿತಿ ನೀಡಿದರು. ಬಸವನಗರ ಠಾಣಾ ಸಿಬ್ಬಂದಿ ಸ್ಥಳಕ್ಕೆ ಬಂದು ಆರೋಪಿಯನ್ನು ಮಾಲು ಸಮೇತ ಹಿಡಿದು ಪ್ರಕರಣ ದಾಖಲಿಸಿ, ಆರೋಪಿಯ ವಿರುದ್ಧ ನಗರದ ಸಿಪಿಐ ಅವರು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಪ್ರಕರಣ ಸಂಬಂಧ ವಿಚಾರಣೆ ನಡೆದು, ನ್ಯಾಯಾಧೀಶರಾದ ಕೆ.ಬಿ. ಗೀತಾ ಅವರು ಆರೋಪಿ ಬಸವರಾಜನಿಗೆ ಜೈಲು ಶಿಕ್ಷೆ, ದಂಡ ವಿಧಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಎಸ್.ವಿ. ಪಾಟೀಲ್ ವಾದ ಮಂಡಿಸಿದರು.

# ಆರೋಗ್ಯ ಯಾರ ಸ್ವತ್ತೂ ಅಲ್ಲ... ಅದು ನಮ್ಮ ಸ್ವತ್ತು...




**ವಿಶ್ವ ಆರೋಗ್ಯ ದಿನದಂದು ಆರೋಗ್ಯ ಕುರಿತಂತೆ ಇರುವ ಅಸಮಾನತೆಗಳನ್ನು ಹೋಗಲಾಡಿಸಲು ವರ್ಷವಿಡೀ ಜಾಗತಿಕ ಅಭಿಯಾನದ ಅಂಗವಾಗಿ ಜನರನ್ನು ಒಗ್ಗೂಡಿಸಿ, ಉತ್ತಮ ಹಾಗೂ ಆರೋಗ್ಯಕರ ಜಗತ್ತನ್ನು ನಿರ್ಮಿಸುವ ಭರವಸೆಯನ್ನು ವಿಶ್ವ ಆರೋಗ್ಯ ಸಂಸ್ಥೆ ನೀಡಿದೆ. ನಾಗರಿಕರಾದ ನಾವು, ನಮ್ಮಗಳ ಆರೋಗ್ಯ ಸುರಕ್ಷತೆಯ ಕಡೆ ಗಮನಹರಿಸಿ ಸದೃಢ ಸಮಾಜ ನಿರ್ಮಾಣ ಮಾಡುವ ಕಡೆ ಹೆಜ್ಜೆ ಹಾಕೋಣ, ಸರ್ಕಾರಗಳ ಜೊತೆ ಕೈ ಜೋಡಿಸೋಣ...**

ವಿಶ್ವ ಆರೋಗ್ಯ ಸಂಸ್ಥೆಯು 1950 ರಿಂದ ಪ್ರತಿ ವರ್ಷ ಏಪ್ರಿಲ್ 7 ರಂದು 'ವಿಶ್ವ ಆರೋಗ್ಯ ದಿನ'ವನ್ನಾಗಿ ಆಚರಿಸುವ ಪರಿಪಾಠವನ್ನು ಜಾರಿಗೆ ತಂದಿದೆ. ಜಗತ್ತಿನ ನಾಗರಿಕರನ್ನು ಗಮನದಲ್ಲಿಟ್ಟು ಕೊಂಡು ಪ್ರತಿ ವರ್ಷ ಆರೋಗ್ಯಕ್ಕೆ ಸಂಬಂಧಿಸಿದ ಒಂದು ನಿರ್ದಿಷ್ಟ ಉದ್ದೇಶದ ಹಿನ್ನೆಲೆಯಲ್ಲಿ ಏಪ್ರಿಲ್ 7 ರ ಈ ದಿನವನ್ನು ವಿಶ್ವ ಆರೋಗ್ಯ ದಿನವನ್ನಾಗಿ ಆಚರಿಸಲಾಗುವುದು. ಅದರಂತೆ 2021 ರ ಈ ವರ್ಷದಲ್ಲಿ 'ಸರ್ವರಿಗೂ ಉತ್ತಮವಾದ ಆರೋಗ್ಯಕರ ಜಗತ್ತನ್ನು ನಿರ್ಮಿಸುವ' ಸದುದ್ದೇಶವನ್ನು ವಿಶ್ವ ಆರೋಗ್ಯ ಸಂಸ್ಥೆ ಹೊಂದಿದೆ.

ಆರೋಗ್ಯವೇ ಭಾಗ್ಯ, ಆರೋಗ್ಯವೇ ಸಂಪತ್ತು, ಆರೋಗ್ಯ ಹೊರತುಪಡಿಸಿದರೆ ಉಳಿದೆಲ್ಲವೂ ಮಿಥ್ಯ, ರಾಗಿ ಉಂಡವನು ನಿರೋಗಿ, ದಿನಕ್ಕೊಂದು ಸೇಬು ತಿನ್ನಿ ರೋಗದಿಂದ ದೂರವಿರಿ ಎಂದು ಹೇಳುವುದು ವಾಡಿಕೆ. ಆದರೂ ಬಹುತೇಕ ಮಂದಿ ಆರೋಗ್ಯ ಸಂಪಾದನೆಗಿಂತ ಹಣ ಸಂಪಾದನೆಯ ಕಡೆ ಹೆಚ್ಚು ಗಮನಹರಿಸುವುದು ಉಂಟು. ಆರೋಗ್ಯ ನಮ್ಮ ಕೈಲಿದೆ. ಅದನ್ನು ನಾವು ಅತ್ಯಂತ ಜಾಣತನದಿಂದ ಕಾಪಾಡಿಕೊಳ್ಳಬೇಕೆಂಬ ಸಾಮಾನ್ಯ ಅರಿವು ಪ್ರತಿಯೊಬ್ಬರಲ್ಲಿಯೂ ಇರಬೇಕು. ಆರೋಗ್ಯವನ್ನು ನಾವು ಕಾಪಾಡಿಕೊಂಡರೆ, ಅದೇ ಆರೋಗ್ಯ ನಮ್ಮನ್ನು ಕಾಪಾಡುತ್ತದೆ ಎಂಬ ಸತ್ಯವನ್ನು ಎಲ್ಲರೂ ಅರಿಯಬೇಕು. ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಮಧುಮೇಹಿಗಳ ಸಂಖ್ಯೆ ಅಧಿಕ, ಈ ರೋಗವು ಹತ್ತು ಹಲವು ಕಾಯಿಲೆಗಳಿಗೆ ಆಹ್ವಾನ ನೀಡುತ್ತದೆ. ಇದರಿಂದಾಗಿ 40 ವರ್ಷಕ್ಕೆ ಮೇಲ್ಪಟ್ಟವರು ವರ್ಷಕ್ಕೆ 2-3 ಬಾರಿ ದೇಹದಲ್ಲಿ ಸಕ್ಕರೆ ಪ್ರಮಾಣ ಎಷ್ಟಿದೆ ಎಂಬುದನ್ನು ತಿಳಿಯಲು ಪರೀಕ್ಷೆ ಮಾಡಿಸಿಕೊಳ್ಳುವುದು ಆರೋಗ್ಯ ದೃಷ್ಟಿಯಿಂದ ಒಳಿತು, ಆಗಲಾದರೂ ಸ್ವಲ್ಪ ಮಟ್ಟಿಗೆ ರೋಗಗಳು ಬರದಂತೆ ತಡೆಗಟ್ಟಬಹುದು.

ಅಧಿಕ ರಕ್ತದೊತ್ತಡ, ಪಾರ್ಶ್ವವಾಯು, ಕಡಿಮೆ ಉಸಿರಾಟದ ಸೋಂಕು, ಶ್ವಾಸಕೋಶದ ಕಾಯಿಲೆ, ಕ್ಯಾನ್ಸರ್, ಡಯಾಬಿಟೀಸ್, ಬುದ್ಧಿ ಮಾಂದ್ಯತೆ, ಅತಿಸಾರ, ಕ್ಷಯ, ಸಿರೋಸಿಸ್, ಎಬೋಲಾ, ಇನ್ ಫ್ಲುಯೆಂಜಾ ಇವು ಅತ್ಯಂತ ಮಾರಕ ರೋಗಗಳು. ಕಾಲರಾ, ಮಲೇರಿಯಾ, ಹಕ್ಕಿ ಜ್ವರ, ಚಿಕನ್‌ಫಾಕ್ಸ್ ರೋಗಗಳು ಇನ್ನಿತರೆ ರೋಗಗಳಾಗಿವೆ. ಈ ಎಲ್ಲ ರೋಗಗಳ ತೀಕ್ಷ್ಣತೆ ಮತ್ತು ಪರಿಹಾರ ಕುರಿತು ಜನತೆ ಚಿಂತನೆ ನಡೆಸಿ ತನ್ಮೂಲಕ ಆರೋಗ್ಯ ಕಾಪಾಡಿಕೊಳ್ಳುವುದರ ಕಡೆ ಆದ್ಯ ಗಮನಹರಿಸಬೇಕು.

ವಿಶ್ವದ ಅತಿ ದೊಡ್ಡ ಕಾಯಿಲೆ ಎಂದರೆ ಇಸ್ಕೆಮಿಕ್ ಹೃದ್ರೋಗ. ಇದು ವಿಶ್ವದ ಒಟ್ಟು ಸಾವುಗಳಲ್ಲಿ ಶೇ. 16 ರಷ್ಟಿದೆ. 2000 ದಿಂದೀಚೆಗೆ ಈ ಕಾಯಿಲೆಯಿಂದ ಅನೇಕ ಸಾವುಗಳಾಗಿವೆ. ಇದರಿಂದ 2019 ರ ಸುಮಾರಿಗೆ 2 ಮಿಲಿಯನ್ ಗಿಂತಲೂ ಹೆಚ್ಚು ಸಾವುಗಳು ಸಂಭವಿಸಿವೆ. ಇತ್ತೀಚಿನ ದಶಕಗಳಲ್ಲಿ ಸಾಂಕ್ರಾಮಿಕ ಕಾಯಿಲೆಗಳಲ್ಲಿ ಜಾಗತಿಕ ಮಟ್ಟದಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿದೆ. 1990 ರಲ್ಲಿ 1.1



ಶತಕೋಟಿಗಿಂತಲೂ ಹೆಚ್ಚಿದ್ದದ್ದು 2016 ರ ಸುಮಾರಿಗೆ 670, 000 ಕ್ಕಿಂತ ಅಂದರೆ ಸರಿ ಸುಮಾರು ಶೇ. 40 ರಷ್ಟು ಕಡಿಮೆಯಾಗಿರುವುದು ಅಂಕಿ ಸಂಖ್ಯೆಗಳಿಂದ ತಿಳಿದುಬಂದಿದೆ.

2020 ರ ಮಾರ್ಚ್ ತಿಂಗಳಿನಿಂದ ಕೊರೊನಾ ಎಂಬ ಮಹಾಮಾರಿ ಸಾಂಕ್ರಾಮಿಕ ರೋಗವು ಇಡೀ ಜಗತ್ತನ್ನು ಬಾಧಿಸುತ್ತಿದೆ. ಈ ರೋಗಕ್ಕೆ ತುತ್ತಾಗದಿರುವ ದೇಶ ಅತಿ ವಿರಳ. ಈ ರೋಗವು ಜನತೆಯ ಆರೋಗ್ಯ ಲಾಭಗಳನ್ನು ಕಡಿಮೆ ಮಾಡಿದೆ. ಬಹುತೇಕ ಜನರನ್ನು ಆಹಾರ ಅಭದ್ರತೆ ಮತ್ತು ಬಡತನಕ್ಕೆ ತಳ್ಳಿದೆ. ಲಿಂಗ, ಸಾಮಾಜಿಕ ಮತ್ತು ಆರೋಗ್ಯ ಅಸಮಾನತೆಗಳನ್ನು ಹೆಚ್ಚಿಸಿದೆ. ಎಲ್ಲಾ ರಾಷ್ಟ್ರಗಳು ಆರ್ಥಿಕವಾಗಿ ಜರ್ಜರಿತವಾಗಿವೆ. ಯಾರು ಅನೇಕ ಕಾಯಿಲೆಗಳಿಂದ ನರಳುತ್ತಿರುವರೋ ಅವರಿಗೆ ಸರಿಯಾದ ಆರೋಗ್ಯ ಸೇವೆಗಳು ಲಭಿಸುತ್ತಿಲ್ಲ. ಕೊರೊನಾದಿಂದಾಗಿ ವಿಶ್ವದ ಕೆಲ ಗುಂಪುಗಳ ಕನಿಷ್ಠ ದಿನದ ಆದಾಯದಲ್ಲಿ ಇಳಿಕೆಯಾಗಿದೆ, ಉದ್ಯೋಗಗಳ ಕೊರತೆ ಮತ್ತು ವಲಸೆ ಪ್ರಮಾಣ ಹೆಚ್ಚಾಗಿದೆ. ಲಿಂಗ ಅಸಮಾನತೆ, ಆರೋಗ್ಯಕರ ಪರಿಸರ, ಶುದ್ಧ ನೀರು, ಗಾಳಿ, ಆಹಾರ ಭದ್ರತೆ, ಶಿಕ್ಷಣ, ಕೌಟುಂಬಿಕ ಪರಿಸ್ಥಿತಿ, ಆರೋಗ್ಯ ಸೇವೆಗಳು ಇವೇ ಮೊದಲಾದವುಗಳಿಂದ ಸಮುದಾಯದ ಜನರು ವಂಚಿತರಾಗಿದ್ದಾರೆ. ಈ ಎಲ್ಲಾ ಅಂಶಗಳು ಪರೋಕ್ಷವಾಗಿ ವಿವಿಧ ಬಗೆಯ ರೋಗಗಳು ಮತ್ತು ಸಾವುಗಳಿಗೆ ದಾರಿ ಮಾಡಿಕೊಡುತ್ತಿವೆ.

ಕೊರೊನಾ ಮಹಾಮಾರಿಯಿಂದ ಯಾವ ದೇಶಗಳೂ ಮುಕ್ತಿಯನ್ನು ಹೊಂದಿಲ್ಲ. ಇದೀಗ ಎರಡನೆಯ ಅಲೆಯಲ್ಲಿ ರೂಪಾಂತರಿ ಕೊರೊನ ಪ್ರಾರಂಭವಾಗಿದೆ. ಇದರ ವೇಗ ಮೊದಲು ಇದ್ದಿದ್ದಕ್ಕಿಂತಲೂ ಅಧಿಕ. ಇದರ ನಿರ್ಮೂಲನೆಯಲ್ಲಿ ಸರ್ಕಾರದ ಪಾತ್ರ ಎಷ್ಟಿದೆಯೋ, ಅದಕ್ಕಿಂತಲೂ ಹೆಚ್ಚಾಗಿ ಸಾರ್ವಜನಿಕರ ಪಾತ್ರವಿದೆ. ಸರ್ಕಾರ ವಿಧಿಸುವ ಎಲ್ಲ ನಿಯಮಗಳನ್ನು ಸಾರ್ವಜನಿಕರು ಚಾಚೂ ತಪ್ಪದೆ ಪಾಲಿಸಬೇಕು. ಆಗ ಮಾತ್ರ ಇದರ ನಿರ್ಮೂಲನೆ ಸಾಧ್ಯ.

ಸರ್ಕಾರ ಮತ್ತು ಜನಪ್ರತಿನಿಧಿಗಳು ಪ್ರತಿಯೊಬ್ಬ ನಾಗರಿಕನಿಗೆ ಯಾವಾಗ ಮತ್ತು ಎಲ್ಲಿ ಅವಶ್ಯಕತೆ ಕಂಡುಬರುವುದೋ ಅಲ್ಲಿ ಅವರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸಲು ಮುಂದಾಗಬೇಕು. ಯಾರ ಆರೋಗ್ಯ ಯಾವ ಸಮಯದಲ್ಲಿ ಏನಾಗುವುದೋ ಊಹಿಸಲು ಆಗದು. ಆದ್ದರಿಂದ ನಮ್ಮ ಎಚ್ಚರಿಕೆ ನಮ್ಮ ಕೈಯಲ್ಲಿ ಇರಬೇಕು. ಯಾವುದೇ ರೋಗವನ್ನು ಗುಣಪಡಿಸುವುದಕ್ಕಿಂತ, ಅದು ಬರದಂತೆ ಎಚ್ಚರಿಕೆ ವಹಿಸುವುದು ಉತ್ತಮ. ಮಾರುಕಟ್ಟೆಯಲ್ಲಿ ಹಣ ಕೊಟ್ಟು ಬೇಕಾದ ವಸ್ತುವನ್ನು ಕೊಂಡುಕೊಳ್ಳಬಹುದು. ಆದರೆ ಒಮ್ಮೆ ಆರೋಗ್ಯ ಹದಗೆಟ್ಟರೆ ಎಷ್ಟು ಹಣ ಖರ್ಚು ಮಾಡಿದರೂ ಅದು ಮೊದಲಿನಂತೆ ಸಿಗದು.

ವಿಶ್ವ ಆರೋಗ್ಯ ದಿನದಂದು ಆರೋಗ್ಯ ಕುರಿತಂತೆ ಇರುವ ಅಸಮಾನತೆಗಳನ್ನು ಹೋಗಲಾಡಿಸಲು ವರ್ಷವಿಡೀ ಜಾಗತಿಕ ಅಭಿಯಾನದ ಅಂಗವಾಗಿ ಜನರನ್ನು ಒಗ್ಗೂಡಿಸಿ ಉತ್ತಮ ಹಾಗೂ ಆರೋಗ್ಯಕರ ಜಗತ್ತನ್ನು ನಿರ್ಮಿಸುವ ಭರವಸೆಯನ್ನು ವಿಶ್ವ ಆರೋಗ್ಯ ಸಂಸ್ಥೆ ನೀಡಿದೆ.

ಈ ಹಿನ್ನೆಲೆಯಲ್ಲಿ ವಿಶ್ವ ಆರೋಗ್ಯ ದಿನವನ್ನು ಇಂದು ವಿಶ್ವವ್ಯಾಪಿಯಾಗಿ ಆಚರಿಸಲಾಗುತ್ತಿದೆ. ನಾಗರಿಕರಾದ ನಾವು ನಮ್ಮಗಳ ಆರೋಗ್ಯ ಸುರಕ್ಷತೆಯ ಕಡೆ ಗಮನಹರಿಸಿ ಸದೃಢ ಸಮಾಜ ನಿರ್ಮಾಣ ಮಾಡುವ ಕಡೆ ಹೆಜ್ಜೆ ಹಾಕೋಣ, ಸರ್ಕಾರಗಳ ಜೊತೆ ಕೈ ಜೋಡಿಸೋಣ, ಮಾಸ್ಕ್ ಧಾರಣೆಯ ಜೊತೆಗೆ ಸಾಮಾಜಿಕ ಅಂತರ ಪಾಲನೆ ಮಾಡಿ ಕೊರೊನಾ ಎಂಬ ಸಾಂಕ್ರಾಮಿಕ ರೋಗವನ್ನು ಹಿಮ್ಮೆಟ್ಟಿಸುವ ಸಂಕಲ್ಪದೊಂದಿಗೆ ಉತ್ತಮ ಆರೋಗ್ಯವನ್ನು ನಮ್ಮದಾಗಿಸಿ ಕೊಳ್ಳೋಣ.

**- ಡಾ. ಶಿವಯ್ಯ ಎಸ್.**
ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ
9880466996
s.shivaiah26@gmail.com

## ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಹುದ್ದೆಗೆ ಅರ್ಜಿ

ದಾವಣಗೆರೆ, ಏ. 6- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ದಾವಣಗೆರೆ, ಜಗಳೂರು, ಹರಿಹರ, ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಹುದ್ದೆಗಳಿಗೆ ನೇಮಕ ಮಾಡಲು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಒಟ್ಟು 17 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 63 ಅಂಗನವಾಡಿ ಸಹಾಯಕಿಯರ ಹುದ್ದೆಗಳು ಖಾಲಿ ಇದ್ದು, ಅರ್ಹ ಅಭ್ಯರ್ಥಿಗಳು ನಾಡಿದ್ದು ದಿನಾಂಕ 8 ರಿಂದ ಈ ವೆಬ್‌ಸೈಟ್‌ಗೆ http://davanagere.nic.in ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಮೇ 7 ಕೊನೆಯ ದಿನಾಂಕವಾಗಿದೆ. ವಿವರಕ್ಕೆ ಸಂಬಂಧಪಟ್ಟ ಕಚೇರಿಯನ್ನು ಸಂಪರ್ಕಿಸಬಹುದು.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟ್‌ಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಪೂರ್ವ 30x50 ಕಾರ್ನರ್, 30x40 ಪಶ್ಚಿಮ ಕಾರ್ನರ್, 30x50 ಪಶ್ಚಿಮ, ಬಸವೇಶ್ವರ ಲೇಔಟ್ 30x40 ಪೂರ್ವ, 30x40 ಪಶ್ಚಿಮ, ಶಿವಕುಮಾರಸ್ವಾಮಿ ಬಡಾವಣೆ, ಪೂರ್ವ 22x68.
ಸೈಟ್ ಕೊಡುವುದಕ್ಕೆ ಹಾಗೂ ತೆಗೆದುಕೊಳ್ಳುವುದಕ್ಕೆ ವಿಚಾರಿಸಿ
ಐಗೂರು ವಿಜಯ್‌ಕುಮಾರ್ 99457 02495
ಸುರೇಶ್ 95911 60520

**ಸೈಟುಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆಯಲ್ಲಿ, ಸಿದ್ದವೀರಪ್ಪ ಬಡಾವಣೆಯಲ್ಲಿ
50x50 West, 60x40 North, 40x56 South, 30x50 North, 70x50 East South Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
25ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ಡಾ. ಲತಾ ಕೊಡ್ಲಿಕೇರಿ ಮತ್ತು ಶ್ರೀ ಪ್ರಕಾಶ್ ಕೊಡ್ಲಿಕೇರಿ, ಪುಣೆ
ಇವರ ಸೇವಾರ್ಥ

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ 30x40 ಉತ್ತರ, ಶಿವ - ಪಾರ್ವತಿ ಬಡಾವಣೆಯಲ್ಲಿ 30x48 ಪೂರ್ವ, 30x52 ಪೂರ್ವ, ಬನಶಂಕರಿ ಬಡಾವಣೆಯಲ್ಲಿ 30x50 ಪೂರ್ವ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 30x40, 40x60, ಪಶ್ಚಿಮ 30x40, 38x40, ದಕ್ಷಿಣ 50x80, 50x120. ವಿನಾಯಕ ಬಡಾವಣೆ (ವಿದ್ಯಾನಗರ) ಉತ್ತರ 40x86 ಅಕ್ಕಪಕ್ಕ, ದಕ್ಷಿಣ 40x90, 40x50.
ಸೈಟ್ ಕೊಡುವುದಕ್ಕೆ ಹಾಗೂ ತೆಗೆದುಕೊಳ್ಳುವುದಕ್ಕೆ ವಿಚಾರಿಸಿ
ಐಗೂರು ವಿಜಯ್‌ಕುಮಾರ್ 99457 02495
ಸುರೇಶ್ 95911 60520

**ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
30x50 West, 30x45 East, 50x80 North, 40x50 South, 60x40 South west Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸಂಗೀತ ಆಸಕ್ತರಿಗಾಗಿ**
ಕೀ ಬೋರ್ಡ್ & ಹಾರ್ಮೋನಿಯಂ ಕ್ಲಾಸಸ್, ಸಿಂಗಿಂಗ್ ಕ್ಲಾಸಸ್ ತಮ್ಮ ಮನೆಗಳಿಗೇ ಬಂದು ತರಬೇತಿ ನೀಡಲಾಗುವುದು. ಸಂಪರ್ಕಿಸಿ :
ರವಿಕುಮಾರ್ ಆರ್.
ವಾದ್ಯಗೋಷ್ಠಿ ಸಂಗೀತ ನಿರ್ದೇಶಕರು
Mob. : 99646 92457

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಲೈಸೆನ್ಸ್ ಹಾಗೂ ದ್ವಿಚಕ್ರ ವಾಹನ ಹೊಂದಿರುವ ಕಾರ್ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ
ಮೊ. 94486 56091
(ಮೇಲ್ಕಂಡ ನಂಬರಿಗೆ ಈ ಹಿಂದೆ ಕರೆ ಮಾಡಿ ಸಂದರ್ಶನಕ್ಕೆ ಸಹಾ ಬಂದವರು ಪುನಃ ಕರೆ ಮಾಡಬೇಡಿ)

**ಕಲ್ಯಾಣ ಮಂಟಪಕ್ಕೆ ಯೋಗ್ಯ ಸ್ಥಳ ಮಾರಾಟಕ್ಕಿದೆ**
ಶಿವ ಪಾರ್ವತಿ ಬಡಾವಣೆ 110 ಅಡಿ ರಿಂಗ್ ರೋಡ್‌ಗೆ ದಕ್ಷಿಣ 200x130, ಕಲ್ಯಾಣ ಮಂಟಪ, ಕಾಂಪ್ಲೆಕ್ಸ್, ಅಪಾರ್ಟ್‌ಮೆಂಟ್‌ಗೆ ಯೋಗ್ಯವಾದ ಸೈಟ್ ಮಾರಾಟಕ್ಕಿದೆ.
ಸೈಟ್ ಕೊಡುವುದಕ್ಕೆ ಹಾಗೂ ತೆಗೆದುಕೊಳ್ಳುವುದಕ್ಕೆ ವಿಚಾರಿಸಿ
ಐಗೂರು ವಿಜಯ್‌ಕುಮಾರ್ 99457 02495
ಸುರೇಶ್ 95911 60520

**ಬೇಕಾಗಿದ್ದಾರೆ**
ಹೋಟೆಲ್ ನಲ್ಲಿ ಕೆಲಸ ಮಾಡಲು ಕ್ಲೀನರ್ ಮತ್ತು ಸಪ್ಲೈಯರ್ ಬೇಕಾಗಿದ್ದಾರೆ. ಸಂಪರ್ಕಿಸಿ:
ಪವಾರ್ ಫ್ಯಾಮಿಲಿ ರೆಸ್ಟೋರೆಂಟ್
ಸಿತಾರ ಹೋಟೆಲ್ ಪಕ್ಕ, ಪಿ.ಬಿ.ರಸ್ತೆ, ದಾವಣಗೆರೆ.
ಮೊ:93410 83995

**ಬೇಕಾಗಿದ್ದಾರೆ**
ಅನುಭವವಿರುವ ಲ್ಯಾಬ್ ಟೆಕ್ನಿಷಿಯನ್ಸ್ ಮತ್ತು ಸ್ಯಾಂಪಲ್ ಕಲೆಕ್ಷನ್ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿಶ್ವಾಸ್ ಹೈಟೆಕ್ ಡಯಾಗ್ನಸ್ಟಿಕ್ ಸೆಂಟರ್
8ನೇ ಮೇನ್, 8ನೇ ಕ್ರಾಸ್, ಪಿ.ಜೆ. ಬಡಾವಣೆ.
9242940661, 9916279576

**ಮನೆ ಮಾರಾಟಕ್ಕಿದೆ**
ಅಳತೆ 31 ಚದರುವಿರುವ 3 ಅಂತಸ್ತಿನ ಉತ್ತರದ ಬಾಗಿಲಿನ ಡುಪ್ಲೆಕ್ಸ್ ಮನೆ ಮಾರಾಟಕ್ಕಿದೆ.
ವಿಳಾಸ: ಡಿಸಿಎಂ ಟೌನ್‌ಶಿಪ್, 1ನೇ ಮೇನ್ ರೋಡ್ (ಸಿಮೆಂಟ್ ರಸ್ತೆ) 4ನೇ ಬಿ ಕ್ರಾಸ್.
ನೇರವಾಗಿ ಸಂಪರ್ಕಿಸಿ
9353331070
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಬೇಕಾಗಿದ್ದಾರೆ**
ಎಸ್.ಎನ್. ಎಂಟರ್‌ಪ್ರೈಸಸ್ ವಾಟರ್ ಪ್ಯೂರಿಫೈಯರ್ ಆಫೀಸ್‌ನಲ್ಲಿ ಟೆಲಿ ಮಾರ್ಕೆಟಿಂಗ್ ಮಾಡಲು ಅವಿವಾಹಿತ ಯುವತಿಯರು ಬೇಕಾಗಿದ್ದಾರೆ.
ಸಂಬಳ 7000 ದಿಂದ 8000/- call only ladies
99025 04943
ಹೆಲ್ಪರ್ ಆಗಿ ಕೆಲಸ ಮಾಡಲು ಯುವಕರು (Field Work) ಬೈಕ್ ಹೊಂದಿರಬೇಕು.
72595 73740

**ಸೈಟುಗಳು ಮಾರಾಟಕ್ಕಿವೆ**
ಹೈಟೆಕ್ ಆಸ್ಪತ್ರೆ ಹಿಂಭಾಗ, KSRTC ಡಿಪೋ ಎದುರಿಗೆ, ಹೆಚ್‌ಕೆಆರ್ ಲೇಔಟ್‌ನಲ್ಲಿ 30x40 ಉತ್ತರ ಹಾಗೂ ಹೈಟೆಕ್ ಆಸ್ಪತ್ರೆ ಹತ್ತಿರ ಟಿವಿ ಕೆರೆ ಹಿಂಭಾಗದ 30x40 ಪಶ್ಚಿಮ ಸೈಟ್‌ಗಳು ಮಾರಾಟಕ್ಕಿವೆ. ಆಸಕ್ತರು ಸಂಪರ್ಕಿಸಿ
99020 20358, 70192 43267

**ಮನೆ ಬಾಡಿಗೆಗೆ ಇದೆ**
ನಿಟ್ಟುವಳ್ಳಿ ಸಿದ್ದಗಂಗಾ ಸ್ಕೂಲ್ ಹಿಂಭಾಗ 10x30 ಉತ್ತರ ಮೊದಲನೇ ಮಹಡಿಯ ಎರಡು ಮನೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ
9902020358
9902448227

**ಬೇಕಾಗಿದ್ದಾರೆ**
ಪಾರ್ಟ ಟೈಂ or ಫುಲ್ ಟೈಂ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
94838 62779

**FOR SALE**
Drinking water purifier machine for sale (one month used)
Mo-7676313191

**ಪ್ಲೈವುಡ್ ಹೋಲ್ ಸೇಲ್ ದರದಲ್ಲಿ**
ನಮ್ಮಲ್ಲಿ ಉತ್ತಮ ಗುಣಮಟ್ಟದ ಪ್ಲೈವುಡ್‌ಗಳು ಹೋಲ್ ಸೇಲ್ ದರದಲ್ಲಿ ದೊರೆಯುತ್ತವೆ.
96325 66170

**ಕ್ರಯಪತ್ರ ಕಳೆದಿದೆ**
ಕೆ.ವಿ. ಸೈಯದ್ ಸನಾ ಉಲ್ಲಾ ಬಿನ್ ಸೈಯದ್ ವಜೀರ್ ಸಾಬ್, ಶಿಂಗರಹಳ್ಳಿ, ಹರಪನಹಳ್ಳಿ, ತಾ|| ಬಳ್ಳಾರಿ ಜಿಲ್ಲೆ ವಾಸಿಯಾದ ನಾನು, ನನ್ನ ಹೆಸರಿನ ಹರಪನಹಳ್ಳಿ ಸಬ್ ರಿಜಿಸ್ಟ್ರಾರ್ ಕಚೇರಿ 1ನೇ ಪುಸ್ತಕದ ದಸ್ತಾವೇಜು ನಂಬರ್ ಹೆಚ್.ಆರ್.ಪಿ 1-00123-2005-06 ಆಗಿ ಸಿಡಿ ನಂಬರ್ ಹೆಚ್.ಆರ್.ಪಿ.ಡಿ5 ನೇದರಲ್ಲಿ ದಿನಾಂಕ 18.04.2005 ರ ನೋಂದಣಿ ಕ್ರಯ ಪತ್ರವು ದಿನಾಂಕ 5.3.2021 ರಂದು ದಾವಣಗೆರೆಯ ಬಾಷಾ ನಗರದಲ್ಲಿ ಜೆರಾಕ್ಸ್ ಮಾಡಿಸುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ.
70191 61545, 97409 10069, 99456 98059

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಮನೆ ಮಾರಾಟಕ್ಕಿದೆ**
ದಾವಣಗೆರೆಯ ಹಳೇಪೇಟೆಯಲ್ಲಿರುವ ಉತ್ತರಾಭಿಮುಖವಾಗಿರುವ ಟೀಕ್‌ವುಡ್ ಮನೆಯು #977/1 ರೂಫ್‌ಗೆ ಟಾಟಾ ಕಂಪನಿಯ ಶೀಟ್ ಇರುತ್ತದೆ. ಗ್ರೌಂಡ್ ಫ್ಲೋರ್ 16.75x86=1440.5 sq ft. & 1st floor 16.75x54=90.45 sqft. ಸಂಪರ್ಕಿಸಿರಿ : ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ.
93434 75963, 97401 63814

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ನುರಿತ ANM ಮತ್ತು GNM ಆದವರು ಈ ಕೆಳಗಿನ ಮೊಬೈಲ್ ನಂಬರ್‌ಗೆ ತಮ್ಮ ಬಯೋಡೇಟಾದೊಂದಿಗೆ ಬಂದು ವಿಚಾರಿಸಿ.
98450 35710

**ಕೆಲಸಕ್ಕೆ ಬೇಕಾಗಿದ್ದಾರೆ**
ಅಂಗಡಿಯಲ್ಲಿ ಸಾಮಾನು ಕೊಡಲು ಹುಡುಗರು ಬೇಕಾಗಿದ್ದಾರೆ. ಸಂಬಳ 6500/-
ಸಂಪರ್ಕಿಸಿ
ಆನಂದ್ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ ಸೇಲ್ಸ್ ಮೇನ್/ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
94803 43063

**ಮೆಡಿಕಲ್ ಶಾಪ್ ಬೇಕಾಗಿರುತ್ತದೆ**
ಎಲ್ಲಾ ವ್ಯವಸ್ಥೆಗಳನ್ನೊಳಗೊಂಡಿರುವ ಮೆಡಿಕಲ್ ಶಾಪ್ ಬೇಕಾಗಿರುತ್ತದೆ. ಕೊಡಲಿಚ್ಛಿಸುವವರು ತಕ್ಷಣ ಸಂಪರ್ಕಿಸಿರಿ
95356 10817
88920 07561

**ಮಾರಾಟಕ್ಕಿದೆ**
Plumbing store for whole sale
91085 59008

**ಹೊಲ ಮಾರಾಟಕ್ಕಿದೆ**
ಬೆಂಡಿಗೇರಿ ಹತ್ತಿರ ಅಳಿಗಂಜಿಕೇರಿಯಲ್ಲಿ 4 ಎಕರೆ 6 ಸೆಂಟ್ಸ್ (ಕೆಂಪು ಭೂಮಿ) ಮಾರಾಟಕ್ಕಿದೆ. ಸಂಪರ್ಕಿಸಿರಿ
99007 16026

**Room For Rent**
Single Attached Room with all facilities available with wardrobe and cots system. At MCC "A" block, Near Ram Krishna Ashrama, Beside Ganesha Temple
97405 69252

**ಬೇಕಾಗಿದ್ದಾರೆ**
SSLC ಅಥವಾ PUC ಆದ ಮಹಿಳಾ ಅಭ್ಯರ್ಥಿಗಳು ಬಿಲ್ ಮಾಡಲು ಮತ್ತು ಪ್ಯಾಕ್ ಮಾಡಲು ಸಗಟು ಔಷಧಿ ಅಂಗಡಿಯಲ್ಲಿ ಬೇಕಾಗಿದ್ದಾರೆ. ಭೇಟಿಯಾಗುವ ಸಮಯ : ಸಂಜೆ 6.30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2

**ಮನೆ ಬಾಡಿಗೆಗೆ**
1 BHK, ಫಸ್ಟ್ ಫ್ಲೋರ್, ಪೂರ್ವ ಮುಖ, ಹೊಸ ಚರ್ಚ್ ಹಿಂಭಾಗ ಸರಸ್ವತಿ ನಗರ, ದಾವಣಗೆರೆ.
96200 56056
99641 10489

**RCC ಮನೆ ಮಾರಾಟಕ್ಕಿದೆ**
ದಾವಣಗೆರೆಯಲ್ಲಿ 40x15 ಅಳತೆಯಲ್ಲಿ ಹೊಸದಾಗಿ ಕಟ್ಟಿದ ಗ್ರೌಂಡ್‌ಫ್ಲೋರ್+ 1ನೇ ಮಹಡಿ ಪಿ.ಬಿ ರಸ್ತೆ, ಪೂಜಾ ಇಂಟರ್ ನ್ಯಾಷನಲ್ ಹೋಟೆಲ್ ಎದುರಿಗೆ ರಿಲಾಯನ್ಸ್ ಪಕ್ಕ. ಸಂಪರ್ಕಿಸಿ
ಮೊ: 94480 85581

**ಹೋಂ ನರ್ಸಿಂಗ್ ಸರ್ವೀಸ್**
ಬೆಡ್‌ರಿಡನ್ ಪೇಷಂಟ್‌ಗಳಿಗೆ ಸ್ನಾನ, ಡ್ರೆಸಿಂಗ್, ವಾಕಿಂಗ್, ಫಿಜಿಯೋಥೆರಪಿ, ಆಯಿಲ್ ಮಸಾಜ್ ಮತ್ತಿತರೆ ಸರ್ವೀಸ್‌ಗಳು ಮನೆಗೇ ಬಂದು ನೀಡಲಾಗುವುದು.
89711 92936
76250 15036

**15 ದಿನಗಳಲ್ಲಿ ಪರಿಹಾರ**
BP, sugar, ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್ ವೇನ್, ಸ್ಟ್ರೋಕ್, ಮಂಡಿ/ಬೆನ್ನು/ಸೊಂಟ ನೋವುಗಳು ಪಾದದಲ್ಲಿ ಉರಿ/ನೋವು, ಮೈಗ್ರೇನ್, ಮಸಲ್ ಕ್ರ್ಯಾಂಪ್
ಗಂಗೋತ್ರಿ ವೆಲ್‌ನೆಸ್ ಸೆಂಟರ್
ಜಯದೇವ ಸರ್ಕಲ್, ದಾವಣಗೆರೆ.
86602 35013

**ಪ್ರೊಫೆಷನಲ್ ಮೇಕಪ್ ಆರ್ಟಿಸ್ಟ್ ಕೋರ್ಸ್-2021**
20 ದಿನದ ಬ್ರೈಡಲ್ ಮೇಕಪ್, ಸ್ಯಾರಿ ಡ್ರಾಪಿಂಗ್, ಹೇರ್‌ಸ್ಟೈಲ್ ಕೋರ್ಸ್, Only for ಲೇಡೀಸ್ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
70190 73324

**ಜಾಗ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 3ನೇ ಮುಖ್ಯರಸ್ತೆ, ಚೇತನ ಹೋಟೆಲ್ ಹತ್ತಿರ, 80x30 ಅಡಿ ಅಳತೆಯ ಜಾಗ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ :
97310 55765

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC, Technical & Non Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789, 87620 58369
94837 64859, 82173 02649

**ಮನೆ ಬಾಡಿಗೆಗೆ ಇದೆ**
ಎನ್.ಆರ್. ರೋಡ್, ಅಕ್ಕಮಹಾದೇವಿ ಸ್ಕೂಲ್ ಹತ್ತಿರ, ದಾವಣಗೆರೆ-1.
2 ಬೆಡ್ ರೂಂ, 1 ಬೆಡ್ ರೂಂ ಇರುವ ಮನೆ. ಸಸ್ಯಹಾರಿಗಳಿಗೆ ಮಾತ್ರ.
86600 21937

**ಮನೆ ಬಾಡಿಗೆಗೆ ಇದೆ**
ಬಾಪೂಜಿ ಹೈಸ್ಕೂಲ್ ಹಿಂಭಾಗ ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ, # 3810, 2BHK ಫಸ್ಟ್ ಫ್ಲೋರ್, ಬೋರ್‌ವೆಲ್ ಮತ್ತು ಕಾರ್ಪೊರೇಷನ್ ನೀರು ಎರಡೂ ಇದೆ. (ಸಸ್ಯಹಾರಿಗಳಿಗೆ ಮಾತ್ರ)
97421 57455

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ ಅನುಭವ ಇರುವ/ಇಲ್ಲದ ಯಾರಾದರೂ ಸಂಪರ್ಕಿಸಿ : ಬುನಿಯಾದ್
ಅಶೋಕ ರೋಡ್, ದಾವಣಗೆರೆ.
ಮೊ. : 96200 95520

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಮಳಿಗೆ ಲೀಸ್‌ಗಿವೆ**
15x10 ಮತ್ತು 25x15 ಪಿ.ಬಿ. ರೋಡ್ ಗೋಶಾಲೆ ಎದುರು ಆವರಗೆರೆ, ದಾವಣಗೆರೆ.
91085 59008

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಾಡುವ ಮಷಿನ್ ಮಾರಾಟಕ್ಕಿದೆ.
91085 59008

**WANTED**
1) Lady Teacher (B.Sc (PCM), B.Ed (Optional)
2) Computer Operator (Lady)
Ph : 97428-29076

**Smart city Cabs Davanagere**
Etios 4+1 A/c, Minimum 4 Km Rs 100/-, above per kms. Rs 10/- Waiting Charages - 1 Hour Rs. 100/-, 4,8,12 Hour Packages
Call 08192 255555, 99868 18205

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**JOBS**
MCS ACADEMY
Training & Placement Cell
98444 92888

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಹರ್ಷ ಹಾರ್ಡ್ ವೇರ್ ಅಂಡ್ ಪೇಂಟ್ಸ್
ಸುಭಾಷ್ ರೋಡ್, ಅಶೋಕ ಚಿತ್ರಮಂದಿರದ ಎದುರು, ರೈಲ್ವೆ ಗೇಟ್ ಹತ್ತಿರ, ದಾವಣಗೆರೆ - 577 001
ದೂರವಾಣಿ ಸಂಖ್ಯೆ
08192 254787

**ಮನೆ ಬಾಡಿಗೆಗೆ ಇದೆ**
ಭಗತ್ ಸಿಂಗ್ ನಗರ 12 ನೇ ಕ್ರಾಸ್, 3 ನೇ ಮೇನ್ ನಲ್ಲಿ 10x35 ಆರ್.ಸಿ.ಸಿ. ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ
98805 74850

## ರಾಜ್ಯ - ರಾಷ್ಟ್ರೀಯ ವಾರ್ತೆ

### ಮಂಗಳವಾರವೇ ತಟ್ಟಿದ ಸಾರಿಗೆ ಮುಷ್ಕರದ ಬಿಸಿ

ಬೆಂಗಳೂರು, ಏ. 6 - ಸಾರಿಗೆ ನೌಕರರು ಬುಧವಾರದಿಂದ ಮುಷ್ಕರ ಆರಂಭಿಸುವುದಾಗಿ ತಿಳಿಸಿದ್ದರೂ, ಜನರಿಗೆ ಪ್ರತಿಭಟನೆಯ ಬಿಸಿ ಮಂಗಳವಾರವೇ ಮುಟ್ಟಲು ಆರಂಭಿಸಿದೆ.

ಮಂಗಳವಾರದ ಎರಡನೇ ಶಿಫ್ಟ್‌ನ ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಿಲ್ಲ. ಹೀಗಾಗಿ ಮಧ್ಯಾಹ್ನದ ನಂತರದ ಸಾಕಷ್ಟು ಬಸ್‌ಗಳ ಸಂಚಾರ ನಡೆಸಲು ಸಾಧ್ಯವಾಗಿಲ್ಲ. ಹಲವಾರು ಬಸ್‌ಗಳು ಡಿಪೋದಲ್ಲಿದ್ದು, ಪ್ರಯಾಣಿಕರು ಪರದಾಡಿದ್ದಾರೆ.

### ಈಶ್ವರ್ ಖಂಡ್ರೆಗೆ ಕೊರೊನಾ ಸೋಂಕು

ಬೆಂಗಳೂರು, ಏ. 6 – ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅಧ್ಯಕ್ಷ ಈಶ್ವರ್ ಖಂಡ್ರೆ ಅವರಿಗೆ ಕೊರೊನಾ ಸೋಂಕು ಬಂದಿದೆ. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನನಗೆ ಲಘು ಲಕ್ಷಣಗಳು ಕಂಡು ಬಂದಿದ್ದವು. ಪರೀಕ್ಷೆಗೆ ಒಳಗಾದಾಗ ಕೊರೊನಾ ಇರುವುದು ಕಂಡು ಬಂದಿದೆ ಎಂದವರು ಹೇಳಿದ್ದಾರೆ.

### ತೃಣಮೂಲ ಮುಖಂಡನ ಮನೆಯಲ್ಲಿ ಮತ ಯಂತ್ರಗಳು ಪತ್ತೆ

ಉಲುಬೆರಿಯಾ (ಪಶ್ಚಿಮ ಬಂಗಾಳ), ಏ. 6 – ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯಲ್ಲಿ ತೃಣಮೂಲ ಕಾಂಗ್ರೆಸ್ ಮುಖಂಡರೊಬ್ಬರ ಮನೆಯಲ್ಲಿ ನಾಲ್ಕು ವಿದ್ಯುನ್ಮಾನ ಮತ ಯಂತ್ರಗಳು ಹಾಗೂ ನಾಲ್ಕು ವಿ.ವಿ.ಪ್ಯಾಟ್‌ಗಳು ಪತ್ತೆಯಾಗಿವೆ. ಘಟನೆಯ ಹಿನ್ನೆಲೆಯಲ್ಲಿ ಚುನಾವಣಾ ಅಧಿಕಾರಿಯನ್ನು ಅಮಾನತ್ತುಗೊಳಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತುಲ್ಸಿಬೆರಿಯಾ ಹಳ್ಳಿಯಲ್ಲಿ ಈ ಘಟನೆ ನಡೆದಿದೆ. ಗ್ರಾಮಸ್ಥರು ತೃಣಮೂಲ ಕಾಂಗ್ರೆಸ್ ಮುಖಂಡನ ಮನೆಯ ಆವರಣದಲ್ಲಿ ಚುನಾವಣಾ ಆಯೋಗದ ಸ್ಟಿಕರ್ ಇರುವ ವಾಹನ ಗಮನಿಸಿದರು. ನಂತರ ಜನರು ಪ್ರತಿಭಟಿಸಲು ಆರಂಭಿಸಿದರು. ಆಗ ಉಲುಬೆರಿಯಾ ಉತ್ತರ ವಿಧಾನಸಭಾ ಕ್ಷೇತ್ರದ ಸೆಕ್ಟರ್ 17ರ ಅಧಿಕಾರಿ ತಪನ್ ಸರ್ಕಾರ್ ಅವರು ತೃಣಮೂಲ ಕಾಂಗ್ರೆಸ್ ನಾಯಕನ ಮನೆಗೆ ಮತಯಂತ್ರದೊಂದಿಗೆ ಭೇಟಿ ನೀಡಿದ್ದು ಕಂಡು ಬಂತು ಎಂದು ಪೊಲೀಸರು ತಿಳಿಸಿದ್ದಾರೆ.

ನಂತರ ಮತಯಂತ್ರ ಹಾಗೂ ವಿ.ವಿ.ಪ್ಯಾಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ಅಧಿಕಾರಿಯನ್ನು ಅಮಾನತ್ತುಗೊಳಿಸಲಾಗಿದೆ. ಈ ನಾಲ್ಕು ಯಂತ್ರಗಳನ್ನು ನಾಳೆ ನಡೆಯಲಿರುವ ಚುನಾವಣೆಗೆ ಬಳಸುವುದಿಲ್ಲ. ಘಟನೆಯ ಬಗ್ಗೆ ಜಿಲ್ಲಾ ಚುನಾವಣಾ ಅಧಿಕಾರಿಗಳಿಗೆ ದೂರು ನೀಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ತಡವಾಗಿ ನಿನ್ನೆ ಇಲ್ಲಿಗೆ ಬಂದಿದ್ದೆ. ಆಗ ಮತಗಟ್ಟೆ ಬಂದ್ ಆಗಿತ್ತು. ನಂತರ ಬೇರೆ ದಾರಿ ಇಲ್ದೇ ರಾತ್ರಿ ತನ್ನ ಸಂಬಂಧಿಯ ಮನೆಯಲ್ಲಿ ಉಳಿಯಲು ಬಯಸಿದ್ದೆ ಎಂದು ಸೆಕ್ಟರ್ ಅಧಿಕಾರಿ ಸ್ಪಷ್ಟನೆ ನೀಡಿದ್ದಾರೆ.

### ತಾಳೆಎಣ್ಣೆ ಆಮದಿಗೆ ನಿಷೇಧ

ಕೊಲಂಬೊ, ಏ. 6 – ತಕ್ಷಣದಿಂದ ಜಾರಿಗೆ ಬರುವಂತೆ ತಾಳೆ ಎಣ್ಣೆ ಆಮದಿನ ಮೇಲೆ ಶ್ರೀಲಂಕಾದ ಅಧ್ಯಕ್ಷ ಜಿ. ರಾಜಪಕ್ಸೆ ನಿಷೇಧ ಹೇರಿದ್ದಾರೆ ಹಾಗೂ ದೇಶದಲ್ಲಿರುವ ಶೇ.10ರಷ್ಟು ತಾಳೆ ಮರಗಳನ್ನು ಉರುಳಿಸಿ ರಬ್ಬರ್ ಮರ ಇಲ್ಲವೇ ಪರಿಸರ ಸ್ನೇಹಿ ಬೆಳೆ ಬೆಳೆಯುವಂತೆ ಆದೇಶ ಹೊರಡಿಸಿದ್ದಾರೆ.

### ಬಿಜೆಪಿ ಸಂಸದ ಸೈನಿಗೆ ರೈತರ ಘೇರಾವ್, ಕಾರಿನ ಗಾಜು ಧ್ವಂಸ

ಕುರುಕ್ಷೇತ್ರ (ಹರಿಯಾಣ), ಏ. 6 – ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ರೈತರು, ಹರಿಯಾಣದ ಬಿಜೆಪಿ ಸಂಸದ ನಯಾಬ್ ಸಿಂಗ್ ಸೈನಿ ಅವರಿಗೆ ಘೇರಾವ್ ಮಾಡಿದ್ದಾರೆ ಮತ್ತು ಕಾರಿನ ಗಾಜುಗಳನ್ನು ಒಡೆದು ಹಾಕಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಲ್ಲಿಗೆ 20 ಕಿ.ಮೀ. ದೂರದಲ್ಲಿರುವ ಶಹಬಾದ್ ಮರ್ಕಂಡದಲ್ಲಿ ಪ್ರತಿಭಟನಾಕಾರರು ಸಂಸದರ ವಾಹನದ ಮೇಲೆ ದಾಳಿ ನಡೆಸಿದ್ದಾರೆ. ಆಗ ಸಂಸದರು ಕಾರಿನಲ್ಲಿ ಇರಲಿಲ್ಲ.

ಮೂರು ಕೃಷಿ ಕಾಯ್ದೆಗಳ ವಿರುದ್ಧ ರೈತರು ಜನತಾ ಜನತಾ ಪಾರ್ಟಿ ಸಂಸದ ರಾಮ್ ಕರಣ್ ಲಾಲ್ ಅವರ ಮನೆ ಎದುರು ಪ್ರತಿಭಟನೆ ನಡೆಸುತ್ತಿದ್ದರು. ಸಂಸದರು ಮಜ್ರಿ ಮೊಹಲ್ಲಾ ಎಂಬಲ್ಲಿರುವ ಬಿಜೆಪಿ ಕಾರ್ಮಿಕರ ಮನೆಗೆ ಬಂದ ಮಾಹಿತಿ ತಿಳಿದ ನಂತರ ಪ್ರತಿಬಟನಾಕಾರರು ಅಲ್ಲಿಗೆ ತೆರಳಿದರು.

ಸಂಸದ ಸೈನಿ ಇದ್ದ ಬಿಜೆಪಿ ಕಾರ್ಯಕರ್ತನ ಮನೆಗೆ ಘೇರಾವ್ ಮಾಡಿದ ಪ್ರತಿಭಟನಾಕಾರರು, ವಾಹನದ ಗಾಜುಗಳನ್ನು ಒಡೆದು ಹಾಕಿದ್ದಾರೆ. ನಂತರ ಪೊಲೀಸರು ಸಂಸದರನ್ನು ಅಲ್ಲಿಂದ ಹೊರಗೆ ಕರೆದೊಯ್ದಿದ್ದಾರೆ. ಘಟನೆಯ ನಂತರ ಹೆಚ್ಚಿನ ಸಂಖ್ಯೆಯಯ ಪೊಲೀಸರನ್ನು ಅಲ್ಲಿಗೆ ನಿಯೋಜಿಸಲಾಗಿದೆ.

### ಗ್ರಾಮೀಣ ವಸತಿ ಫಲಾನುಭವಿಗಳ ಸಂಖ್ಯೆ ಇಳಿಕೆ

ನವದೆಹಲಿ, ಏ. 6 – ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) ಫಲಾನುಭವಿಗಳ ಸಂಖ್ಯೆ ಈಗ 2.14 ಕೋಟಿ ಇದ್ದು, ಅದು ಮತ್ತಷ್ಟು ಕಡಿಮೆಯಾಗಬಹುದು ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ತಿಳಿಸಿದೆ.

ಈಗಾಗಲೇ 81 ಲಕ್ಷ ಫಲಾನುಭವಿಗಳು ಅನರ್ಹರೆಂದು ಕಂಡು ಬಂದ ನಂತರ, ಫಲಾನುಭವಿಗಳ ಸಂಖ್ಯೆಯನ್ನು 2.91 ಕೋಟಿಯಿಂದ 2.14 ಕೋಟಿಗೆ ಇಳಿಸಲಾಗಿದೆ.

2011ರ ಸಾಮಾಜಿಕ – ಆರ್ಥಿಕ ಗಣತಿಯನ್ನು ಆಧರಿಸಿ 2021-22ರ ವೇಳೆಗೆ 2.95 ಕೋಟಿ ಮನೆಗಳನ್ನು ನಿರ್ಮಿಸಲು ಗ್ರಾಮೀಣ ವಸತಿ ಯೋಜನೆಯಡಿ ನಿರ್ಧರಿಲಾಗಿತ್ತು.

ಆದರೆ, ಇದುವರೆಗೂ 2.14 ಕೋಟಿ ಫಲಾನುಭವಿಗಳು ಮಾತ್ರ ಅರ್ಹರೆಂಬುದು ಕಂಡು ಬಂದಿದೆ. ಹಲವು ಹಂತದ ಪರಿಶೀಲನೆ ನಂತರ ಫಲಾನುಭವಿಗಳ ಸಂಖ್ಯೆ ಕಡಿಮೆಯಾಗಿದೆ. ಇದು ಇನ್ನಷ್ಟು ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಸಚಿವಾಲಯ ಹೇಳಿದೆ.

### ಲಸಿಕೆ : ಆರೋಗ್ಯ ಕಾರ್ಯಕರ್ತರಿಗೆ ಸರ್ಕಾರಿ ಕೇಂದ್ರಗಳಲ್ಲಿ ನೋಂದಣಿ

ನವದೆಹಲಿ, ಏ. 6 – 18 ರಿಂದ 44 ವರ್ಷದ ಆರೋಗ್ಯ ಹಾಗೂ ಮುಂಚೂಣಿ ಕಾರ್ಯಕರ್ತರು ಇನ್ನು ಮುಂದೆ ಸರ್ಕಾರಿ ಕೋವಿಡ್ ಲಸಿಕಾ ಕೇಂದ್ರಗಳಲ್ಲಿ ಮಾತ್ರ ಹೆಸರು ನೋಂದಾಯಿಸಿಕೊಳ್ಳಬಹುದು. ಈ ಸಂದರ್ಭದಲ್ಲಿ ಅವರು ಮೂಲ ಗುರುತಿನ ಚೀಟಿ ಹಾಗೂ ಉದ್ಯೋಗ ಪ್ರಮಾಣದ ಪತ್ರದ ಪ್ರತಿ ಹೊಂದಿರಬೇಕು.

ಈ ಬಗ್ಗೆ ಎಲ್ಲಾ ರಾಜ್ಯಗಳಿಗೆ ಸೋಮವಾರ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಸೂಚನೆ ನೀಡಿದ್ದಾರೆ. ಇದುವರೆಗೂ ಲಸಿಕೆ ಪಟ್ಟಿಯಿಂದ ಹೊರಗಿರುವವರು ಸರ್ಕಾರಿ ಕೇಂದ್ರಗಳಲ್ಲಿ ನೇರವಾಗಿ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಹೇಳಿದ್ದಾರೆ.

ಈ ನಡುವೆ, 45 ವರ್ಷ ಮೀರಿದ ಎಲ್ಲಾ ಸರ್ಕಾರಿ ನೌಕರರು ಲಸಿಕೆ ಪಡೆಯುವ ಮೂಲಕ ಕೊರೊನಾ ಸೋಂಕು ಹರಡುವುದನ್ನು ತಡೆಯಬೇಕು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

# ರಾಷ್ಟ್ರದ ಅಭಿವೃದ್ಧಿಗೆ ಬಿಜೆಪಿ ಶ್ರಮಿಸುತ್ತಿದೆ



## ಹರಪನಹಳ್ಳಿಯಲ್ಲಿ ಜಿ.ಕರುಣಾಕರ ರೆಡ್ಡಿ

ಹರಪನಹಳ್ಳಿ, ಏ.6- ಕಳೆದ 4 ದಶಕಗಳಿಂದ ರಾಷ್ಟ್ರದ ಅಭಿವೃದ್ಧಿಗೆ ಬಿಜೆಪಿ ದುಡಿಯುತ್ತಾ ಬಂದಿದ್ದು, ಪಕ್ಷದ ಹಿರಿಯ ಮುಖಂಡರುಗಳು ಪಕ್ಷದ ಅಭಿವೃದ್ಧಿ ಮಾಡುತ್ತಾ ಬಂದಿದ್ದಾರೆ ಎಂದು ಶಾಸಕ ಜಿ.ಕರುಣಾಕರ ರೆಡ್ಡಿ ಹೇಳಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಜರುಗಿದ ಬಿಜೆಪಿ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಪಕ್ಷದ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

1951 ರಲ್ಲಿ ಶಾಮ್ ಪ್ರಸಾದ್ ಮುಖರ್ಜಿ ಅವರ ಭಾರತೀಯ ಜನತಾ ಸಂಘದಿಂದ ಬಿಜೆಪಿ ಬೆಳೆದು ಬಂದಿತು. 1977 ರಲ್ಲಿ ಹಲವು ಪಕ್ಷಗಳು ವಿಲೀನ ಗೊಂಡು ಜನತಾ ಪಕ್ಷ ಹುಟ್ಟಿಕೊಂಡಿತು. 1980 ರಲ್ಲಿ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಮಂಡಳಿ ತನ್ನ ಸದಸ್ಯರನ್ನು ಉಭಯ ಸದಸ್ಯರಂತೆ ಇರಲು ಸೂಚಿಸಿತು. 1980 ರ ಏಪ್ರಿಲ್ 6 ರಂದು ಬಿಜೆಪಿ ಅಸ್ತಿತ್ವಕ್ಕೆ ಬಂತು ಎಂದರು.

ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ದೇಶ ಹಾಗೂ ರಾಜ್ಯದ ಅಭಿವೃದ್ಧಿಗೆ ಶ್ರಮಿಸುತ್ತಾ ಬಂದಿವೆ, ಕೋವಿಡ್ ನಂತಹ ಸಂಕಷ್ಟದಲ್ಲೂ ಜನರ ಯೋಗ ಕ್ಷೇಮಕ್ಕೆ ಕಾಳಜಿ ವಹಿಸಲಾಗಿದೆ. ಬಿಜೆಪಿ ಕಾರ್ಯಕರ್ತರು ಪಕ್ಷದ ತತ್ವ, ಸಿದ್ಧಾಂತಗಳನ್ನು ಮನೆ ಮನೆಗಳಿಗೆ ತಲುಪಿಸಲು ಪ್ರಯತ್ನಿಸಬೇಕು ಎಂದು ಅವರು ಹೇಳಿದರು.

ಹರಪನಹಳ್ಳಿ ಉಸ್ತುವಾರಿ ವಿಜಯಕುಮಾರ್, ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಆರ್. ಲೋಕೇಶ್, ಪುರಸಭಾ ಅಧ್ಯಕ್ಷ ಮಂಜುನಾಥ ಇಜಂತಕರ್ ,ಸದಸ್ಯರುಗಳಾದ ಎಚ್.ಎಂ. ಅಶೋಕ್, ಕಿರಣ ಶಾನುಭಾಗ, ವಿನಯಕುಮಾರ, ದ್ಯಾಮಜ್ಜಿ ರೊಕ್ಕಪ್ಪ, ಎಂ.ಕೆ. ಜಾವೇದ್ ಮುಖಂಡರಾದ ಎಂ.ಪಿ.ನಾಯ್ಕ, ಶಿರಗನಹಳ್ಳಿ ವಿಶ್ವನಾಥ, ಬಾಗಳಿ ಕೊಟ್ರೇಶಪ್ಪ, ಆರ್. ಕರಿಗೌಡ, ರಾಘವೇಂದ್ರ ಶೆಟ್ಟಿ, ಬಿ.ವೈ. ವೆಂಕಟೇಶ್ ನಾಯ್ಕ, ಹನುಮಂತಪ್ಪ, ಎಸ್.ರಾಜೇಂದ್ರ, ಯು.ಪಿ. ನಾಗರಾಜ್, ಸಂತೋಷ ಹಾಗೂ ಇನ್ನಿತರರಿದ್ದರು.

# ಬಾಪೂಜಿ ಹಾಲ್ ಕಟ್ಟಡ ನಿರ್ಮಾಣ : ಅನುದಾನಕ್ಕೆ ಮನವಿ



ಡಿಸಿ ಕಚೇರಿಗೆ ಮಲೇಬೆನ್ನೂರು ಪುರಸಭೆ ಸದಸ್ಯರ ನಿಯೋಗ

ಮಲೇಬೆನ್ನೂರು, ಏ.6- ಪಟ್ಟಣದಲ್ಲಿ ಮಹಾತ್ಮಗಾಂಧೀಜಿ ಅವರು ವಿಶ್ರಾಂತಿ ಪಡೆದಿದ್ದ ಬಾಪೂಜಿ ಹಾಲ್ ಕಟ್ಟಡದ ಅಭಿವೃದ್ಧಿಗೆ 2018-19 ಹಾಗೂ 2019-20ನೇ ಸಾಲಿನ 14ನೇ ಹಣ ಕಾಸು ಅನುದಾನದಡಿ ಮಂಜೂರಾದ ಕ್ರಿಯಾ ಯೋಜನೆಯಲ್ಲಿ ಅವಕಾಶ ಮಾಡಿಕೊಡುವಂತೆ ಪುರಸಭೆ ನಿಯೋಗ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

2018-19ನೇ ಸಾಲಿನ 14 ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಲ್ಲಿ ಮಂಜೂರಾಗಿರುವ ಘನತ್ಯಾಜ್ಯ ವಸ್ತು ವಿಲೇವಾರಿ ಜಾಗದ ಅಭಿವೃದ್ಧಿಗೆ ಇರುವ 16.57 ಲಕ್ಷ ರೂ. ಮತ್ತು 2019-20ನೇ ಸಾಲಿನ ಅನುದಾನದಲ್ಲಿ ಮಂಜೂರಾಗಿರುವ ಘನತ್ಯಾಜ್ಯ ವಸ್ತು ನಿರ್ವಹಣೆ ಜಾಗದ ಖರೀದಿಗಾಗಿ ಇರುವ 35 ಲಕ್ಷ ರೂ.ಗಳ ಜೊತೆಗೆ ಬಾಪೂಜಿ ಹಾಲ್ ದುರಸ್ತಿ ಕಾಮಗಾರಿಗಾಗಿಯೇ ಇಟ್ಟಿರುವ 9.40 ಲಕ್ಷ ರೂ. ಸೇರಿಸಿ, ಒಟ್ಟು 60.97 ಲಕ್ಷ ರೂ. ಅನುದಾನವನ್ನು ಬಾಪೂಜಿ ಹಾಲ್ ಕಟ್ಟಡ ಅಭಿವೃದ್ಧಿಗಾಗಿ ಬಳಸಲು ಅನುಮತಿ ನೀಡಿದರೆ, ಪಾಳು ಬಿದ್ದಿರುವ ಕಟ್ಟಡವನ್ನು ಕಚೇರಿಗಳ ಸಂಕೀರ್ಣ ಮಾಡಿ ಲೈಬ್ರರಿ, ಪತ್ರಿಕಾ ಭವನ ಸೇರಿದಂತೆ ಇನ್ನಿತರೆ ಕಚೇರಿಗಳಿಗೆ ಅವಕಾಶ ಮಾಡಿಕೊಡಬಹುದು ಎಂದು ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ ನಿಯೋಗದ ಪರವಾಗಿ ಜಿಲ್ಲಾಧಿಕಾರಿಗಳಿಗೆ ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಬಾಪೂಜಿ ಹಾಲ್ ಅಭಿವೃದ್ಧಿ ಆಗಬೇಕೆಂಬ ನಿಮ್ಮ ಕಳಕಳಿಗೆ ನನ್ನ ಸಹಮತ ಇದೆ. ಈಗ ಮಂಜೂರಾಗಿರುವ ಕ್ರಿಯಾ ಯೋಜನೆಯ ಅನುದಾನವನ್ನು ಬದಲಿ ಮಾಡುವುದಕ್ಕೆ ಅವಕಾಶ ಇದೆಯೇ ಎಂಬುದರ ಬಗ್ಗೆ ನಗರಾಭಿವೃದ್ಧಿ ಯೋಜನಾ ನಿರ್ದೇಶಕರೊಂದಿಗೆ ಚರ್ಚಿಸಿ, ತಿಳಿಸುತ್ತೇನೆಂದು ನಿಯೋಗಕ್ಕೆ ಭರವಸೆ ನೀಡಿದರು.

ಎರಡನೇ ಹಂತದಲ್ಲಿ ಕೊರೊನಾ ವೈರಸ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇಂದು ದಾವಣಗೆರೆ ಜಿಲ್ಲೆಯಲ್ಲಿ 50 ಜನರಿಗೆ ಸೋಂಕು ದೃಢಪಟ್ಟಿರುವುದರಿಂದ ಮುಂದೆ ಇದು ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಸಾರ್ವಜನಿಕರಿಗೆ ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಪಟ್ಟಣದಲ್ಲಿ ಅರಿವು ಮೂಡಿಸಿ. ಮಾಸ್ಕ್ ಹಾಕದವರಿಗೆ ದಂಡ ಹಾಕಿ ಮತ್ತು 45 ವರ್ಷ ಮೇಲ್ಪಟ್ಟವರಿಗೆ ಕಡ್ಡಾಯವಾಗಿ ಕೋವಿಡ್ ಲಸಿಕೆ ಹಾಕಿಸುವ ಬಗ್ಗೆ ಆಯಾ ವಾರ್ಡಿನ ಸದಸ್ಯರೇ ಜವಾಬ್ದಾರಿ ತೆಗೆದುಕೊಳ್ಳಿ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಇದೇ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷರು, ಸದಸ್ಯರಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯ ಎ. ಆರೀಫ್ ಅಲಿ ಅವರು ಪಟ್ಟಣದ ಘನತ್ಯಾಜ್ಯ ಹಾಕುವುದಕ್ಕೆ ಸರ್ಕಾರಿ ಗೋಮಾಳ ಜಾಗ ನೀಡುವ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಿ ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು. ಪುರಸಭೆ ಅಧ್ಯಕ್ಷೆ ಶ್ರೀಮತಿ ಪಾನಿಪೂರಿ ರಂಗನಾಥ್, ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಂತೇಶ್ ಸ್ವಾಮಿ, ಸದಸ್ಯರಾದ ಬಿ. ಸುರೇಶ್, ಪಿ.ಆರ್. ರಾಜು, ಜಿ.ಹೆಚ್. ಮಂಜಪ್ಪ, ಎ.ಕೆ. ಲೋಕೇಶ್ ಮತ್ತು ಭೋವಿ ಕುಮಾರ್, ಆದಾಪುರ ವಿಜಯಕುಮಾರ್ ನಿಯೋಗದಲ್ಲಿದ್ದರು.

# ಸಂಭ್ರಮದ ಹಾನಗಲ್ ಕುಮಾರಸ್ವಾಮಿಗಳ ರಥೋತ್ಸವ



ರಾಣೇಬೆನ್ನೂರು, ಏ.6- ತಾಲ್ಲೂಕಿನ ಜೋಯಿಸರ ಹರಳಹಳ್ಳಿಯಲ್ಲಿ ಹಾನಗಲ್ ಕುಮಾರಸ್ವಾಮಿ ರಥೋತ್ಸವ ಇಂದು ವಿಜೃಂಭಣೆಯಿಂದ ಜರುಗಿತು.

ಗ್ರಾಮದ ಹಾನಗಲ್ ಕುಮಾರಸ್ವಾಮಿ ಗದ್ದುಗೆ ಬಳಿ ರಥೋತ್ಸವಕ್ಕೆ ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀ ಗುರುಸಿದ್ಧರಾಜ ಯೋಗೀಂದ್ರ ಸ್ವಾಮಿಗಳು ಚಾಲನೆ ನೀಡಿದರು. ಸಮಾಳ, ಡೊಳ್ಳು, ವೀರಗಾಸೆ ತಂಡಗಳು ರಥೋತ್ಸವಕ್ಕೆ ಹೆಚ್ಚಿನ ಮೆರುಗು ತಂದವು. ಭಕ್ತರು ಜೈಕಾರ ಹಾಕುತ್ತಾ ತೇರನ್ನು ಎಳೆದರು.

ಹೊಸಪೇಟೆಯ ಕೊಟ್ಟೂರು ಸ್ವಾಮಿ ಸಂಸ್ಥಾನ ಮಠದ ಶ್ರೀ ಡಾ.ಸಂಗನಬಸವ ಸ್ವಾಮಿಗಳು, ಘೋಡಗೇರಿ ವಿರಕ್ತಮಠದ ಶ್ರೀ ಕಾಶಿನಾಥ ಸ್ವಾಮಿಗಳು, ಮುಂಡರಗಿ ಅನ್ನದಾನೀಶ್ವರ ಸಂಸ್ಥಾನಮಠದ ನಾಡೋಜ ಶ್ರೀ ಡಾ. ಅನ್ನದಾನ ಸ್ವಾಮಿ, ಹಾವೇರಿ ಹುಕ್ಕೇರಿ ಮಠದ ಶ್ರೀ ಸದಾಶಿವಸ್ವಾಮಿ, ರಟ್ಟೀಹಳ್ಳಿ ಕಬ್ಬಿಣಕಂತಿಮಠದ ಶ್ರೀ ಶಿವಲಿಂಗೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಶಾಸಕರಾದ ಅರುಣ ಕುಮಾರ ಪೂಜಾರ, ವಿರುಪಾಕ್ಷಪ್ಪ ಬಳ್ಳಾರಿ, ಅರಣ್ಯ ಕೈಗಾರಿಕೆ ನಿಗಮದ ನಿರ್ದೇಶಕಿ ಭಾರತಿ ಜಂಬಗಿ, ಗದಿಗೆಪ್ಪ ಹೊಟ್ಟಿಗೌಡ್ರ, ಶಿವಕುಮಾರ ಮುದ್ದಪ್ಪಳವರ, ದಾನಪ್ಪಗೌಡ ಪಾಟೀಲ, ವೀರಭದ್ರಪ್ಪ ಗೊಡಚಿ, ಎಸ್. ಬಿ. ಚೌಡಪ್ಪಳವರ, ಅಶೋಕ ಹೊಟ್ಟಿಗೌಡ್ರ, ಗದಿಗೆಪ್ಪ ಮುದ್ದಪ್ಪಳವರ, ಶೇಖಣ್ಣ ಚೌಡಪ್ಪಳವರ, ಚನ್ನಕೇಶವ ಅರ್ಕಾಚಾರಿ ಹಾಗು ಇನ್ನಿತರರು ರಥೋತ್ಸವದಲ್ಲಿ ಭಾಗವಹಿಸಿದ್ದರು.

## ಬಿಐಇಟಿ ಕಾಲೇಜಿನ 24 ಪ್ರಾಜೆಕ್ಟ್‌ಗಳು ಹಣಕಾಸಿನ ನೆರವಿಗೆ ಆಯ್ಕೆ

ದಾವಣಗೆರೆ, ಏ.6- ನಗರದ ಬಿಐಇಟಿ ಕಾಲೇಜಿನ ವಿದ್ಯಾರ್ಥಿಗಳ 24 ಪ್ರಾಜೆಕ್ಟ್‌ಗಳು ಉತ್ತಮ ಎಂದು ಪರಿಗಣಿಸಲ್ಪಟ್ಟು, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ನೀಡುವ ಹಣಕಾಸಿನ ನೆರವಿಗೆ ಆಯ್ಕೆಯಾಗಿವೆ.

ಸಿವಿಲ್ ವಿಭಾಗದಿಂದ 3, ಇ ಅಂಡ್ ಸಿ ವಿಭಾಗದಿಂದ 2, ಕಂಪ್ಯೂಟರ್ ವಿಭಾಗದಿಂದ 5, ಐಎಸ್ ವಿಭಾಗದಿಂದ 2, ಮೆಕ್ಯಾನಿಕಲ್ ವಿಭಾಗದಿಂದ 5, ಟೆಕ್ಸ್‌ಟೈಲ್ ವಿಭಾಗದಿಂದ 1, ಜೈವಿಕ ತಂತ್ರಜ್ಞಾನ ವಿಭಾಗದಿಂದ 2, ಎಲೆಕ್ಟ್ರಿಕಲ್ ವಿಭಾಗದಿಂದ 2 ಮತ್ತು ಇನ್‌ಸ್ಟ್ರುಮೆಂಟೇಶನ್ ವಿಭಾಗದಿಂದ 2 ಪ್ರಾಜೆಕ್ಟ್‌ಗಳು ಉತ್ತಮ ಎಂದು ಪರಿಗಣಿಸಿ ಹಣಕಾಸಿನ ಪ್ರಾಯೋಜಕತ್ವ ಪಡೆದಿವೆ. ಇದೊಂದು ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆಯಾಗಿದ್ದು, ಬಿಐಇಟಿ ಹೆಮ್ಮೆಯ ಕಿರೀಟಕ್ಕೆ ಗರಿ ಮೂಡಿಸಿದೆ.

ಜಗತ್ತಿನಾದ್ಯಂತ ಕೋವಿಡ್-19 ತಂದಿಟ್ಟ ಈ ಕಠಿಣ ಪರಿಸ್ಥಿತಿಯಲ್ಲಿ ಬಿಐಇಟಿ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಾಧನೆಗೆ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಶಾಮನೂರು ಶಿವಶಂಕರಪ್ಪ, ಜಂಟಿ ಕಾರ್ಯದರ್ಶಿ ಎಸ್. ಎಸ್. ಮಲ್ಲಿಕಾರ್ಜುನ್, ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್, ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಅಭಿನಂದಿಸಿದ್ದಾರೆ.

## ಹಡಗಲಿ: ಅಧಿಕಾರಿಗಳ ನೇಮಕಕ್ಕೆ ಆಗ್ರಹ



ಹೂವಿನಹಡಗಲಿ, ಏ.6- ಸಹಾಯಕ ಕೃಷಿ ನಿರ್ದೇಶಕರು ಸೇರಿದಂತೆ 4 ಜನ ಅಧಿಕಾರಿಗಳನ್ನು ನೇಮಕ ಮಾಡುವಂತೆ ರೈತ ಸಂಘ ಆಗ್ರಹಿಸಿದೆ.

ಹಣಕಾಸಿನ ಅವ್ಯವಹಾರದಲ್ಲಿ ಅಮಾನತ್ತಾಗಿರುವ ಕಾರಣ ಇಲ್ಲಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಅಧಿಕಾರಿಗಳ ಕೊರತೆ ಕಾಡುತ್ತಿದೆ. ಇದರಿಂದಾಗಿ ರೈತರ ಸಮಸ್ಯೆಗಳಿಗೆ ಮತ್ತು ಸೂಕ್ತ ಮಾರ್ಗದರ್ಶನಕ್ಕೆ ಅಡಚಣೆಯಾಗಿದೆ ಎಂದು ರೈತರು ಮನವಿಯಲ್ಲಿ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ಪ್ರಭಾರಿಯಾಗಿ ಹರಪನಹಳ್ಳಿಯ ಕೃಷಿ ನಿರ್ದೇಶಕರನ್ನು ಇಲ್ಲಿಗೆ ನೇಮಿಸಲಾಗಿದ್ದರೂ, ಅವರು ರೈತರ ಸಮಸ್ಯೆಗೆ, ರೈತರ ಕಷ್ಟಗಳಿಗೆ ನೆರವಾಗುತ್ತಿಲ್ಲ.

ಖಾಯಂ ಅಧಿಕಾರಿಗಳಿದ್ದರೆ ರೈತರಿಗೆ ಅನುಕೂಲವಾಗಲಿದೆ. ಆದರೆ, ಸಂಬಂಧಿಸಿದ ಜನಪ್ರತಿನಿಧಿಗಳು ಮತ್ತು ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂದು ಸಂಘದ ಅಂಚೆ ಮಂಜುನಾಥ, ಎಂ.ಶಿವಕುಮಾರ್, ಜಿ. ಮಹೇಂದ್ರ, ಡಿ. ಗಿರೀಶ್ ಇನ್ನಿತರರು ಆರೋಪಿಸಿದ್ದಾರೆ.

# ಬಿಸಿಲಿನ ದಾಹ ತೀರಿಸಿಕೊಳ್ಳಲು ಮಜ್ಜಿಗೆ ಉತ್ತಮ ಪಾನೀಯ



ದಾವಣಗೆರೆ, ಏ.6- ಬಿಸಿಲಿನ ಬೇಗೆಯಿಂದ ಉಂಟಾಗುವ ದಾಹ ತೀರಿಸಿಕೊಳ್ಳಲು ಸಾರ್ವಜನಿಕರು ಮಜ್ಜಿಗೆ ಸೇವನೆ ಮಾಡುವುದು ಉತ್ತಮ. ತನ್ಮೂಲಕ ರೈತರಿಗೂ ಪ್ರೋತ್ಸಾಹಿಸಿದಂತಾಗುತ್ತದೆ ಎಂದು ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ಜಯದೇವ ವೃತ್ತದ ಬಳಿ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಆಯೋಜನೆಗೊಂಡಿದ್ದ ಉಚಿತ ಮಜ್ಜಿಗೆ ಹಾಗೂ ನೀರು ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶ್ರೀಗಳು ಮಾತನಾಡಿದರು.

ಬಸವಣ್ಣನವರು ಮಜ್ಜಿಗೆಯನ್ನು ಶಿವದಾನ ಎಂದು ಕರೆಯಲ್ಪಟ್ಟಿದ್ದರು. ಮಜ್ಜಿಗೆ ಸೇವನೆಯಿಂದ ದೇಹ ತಂಪಾಗುವುದಲ್ಲದೇ ಗ್ಯಾಸ್ಟ್ರಿಕ್ ನಂತಹ ಸಮಸ್ಯೆ ನಿವಾರಣೆಗೂ ಇದು ಉತ್ತಮ ಪಾನೀಯ ಎಂದರು.

ಬೇಸಿಗೆ ಸಂದರ್ಭದಲ್ಲಿ ಸಾರ್ವಜನಿಕರ ಬಿಸಿಲಿನ ದಾಹ ತೀರಿಸಲು ಉಚಿತವಾಗಿ ನೀರು ಮತ್ತು ಮಜ್ಜಿಗೆ ವಿತರಣೆ ಮಾಡುವ ಶ್ರೇಷ್ಠ ಕಾಯಕ ಮಾಡುತ್ತಿರುವ ಕರುಣಾಜೀವ ಕಲ್ಯಾಣ ಟ್ರಸ್ಟ್ ಇತರೆ ಸಂಘ-ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದು ಹೇಳಿದರು.

'ಕರುಣಾ ಜೀವ ಕಲ್ಯಾಣ' ಟ್ರಸ್ಟ್ ಹೆಸರೇ ವಿಶಿಷ್ಟವಾಗಿದೆ. ಈ ಸಂಸ್ಥೆ ತುಂಬಾ ವರ್ಷಗಳಿಂದ ಕರುಣೆಯಿಂದ ಸಮಾಜ ಸೇವಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದು, ಬಡವರ, ದೀನ-ದಲಿತರ ಕಲ್ಯಾಣಕ್ಕಾಗಿ ದುಡಿಯುತ್ತಿರುವುದು ಶ್ಲಾಘನೀಯ ಎಂದರು.

ದಯಾಮರಣ ಹೋರಾಟಗಾರ್ತಿ ಹೆಚ್.ಬಿ. ಕರಿಬಸಮ್ಮ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡಿದರು.

ಟ್ರಸ್ಟ್‌ನ ಅಧ್ಯಕ್ಷ ಸಿ.ಜಿ. ದಿನೇಶ್ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕರಾದ ಮಂಜುಳಾ ಬಸವಲಿಂಗಪ್ಪ, ಡಾ. ಹೆಚ್.ಎನ್. ಮಲ್ಲಿಕಾರ್ಜುನ್, ಬಸವರಾಜ್ ಒಡೆಯರ್, ನಸೀರ್ ಅಹ್ಮದ್, ಸಿಬ್ಬಂದಿ ಆರ್.ಬಿ. ಪಾಟೀಲ್, ವೀಣಾ ಕುಮಾರ್, ಸೋನು, ಲಿಂಗರಾಜ್, ಸದಾನಂದ್, ಸುಮ, ರೇಖಾ, ವಿಜಯಲಕ್ಷ್ಮಿ ಭಾಗವಹಿಸಿದ್ದರು.

## ಇಂದು ಮಹಾನಗರ ಪಾಲಿಕೆ ತುರ್ತು, ಸಾಮಾನ್ಯ ಸಭೆ

ದಾವಣಗೆರೆ: ಮಹಾನಗರ ಪಾಲಿಕೆಯ ಮಹಾಪೌರ ಎಸ್.ಟಿ.ವೀರೇಶ್ ಅವರ ಅಧ್ಯಕ್ಷತೆಯಲ್ಲಿ ಪಾಲಿಕೆಯ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಕ್ಕೆ ತುರ್ತು ಸಭೆ ಏರ್ಪಡಿಸಲಾಗಿದೆ. ಈ ಸಭೆ ಮುಗಿದ ನಂತರ ಸಾಮಾನ್ಯ ಸಭೆಯನ್ನು 12 ಕ್ಕೆ ಕರೆಯಲಾಗಿದೆ ಎಂದು ಪಾಲಿಕೆಯ ಪರಿಷತ್ ಕಾರ್ಯದರ್ಶಿ ತಿಳಿಸಿದ್ದಾರೆ.

## ನೂತನ ಪ್ರಾಂಶುಪಾಲರಾಗಿ ಶಂಕರ್



ದಾವಣಗೆರೆ, ಏ.6- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾಗಿ ಶಂಕರ್ ಶೀಲಿ ಅಧಿಕಾರ ವಹಿಸಿಕೊಂಡರು.

ಈ ಹಿಂದೆ ಪ್ರಾಂಶುಪಾಲರಾಗಿದ್ದ ತೂ.ಕ. ಶಂಕರಯ್ಯ ನಿವೃತ್ತರಾಗಿದ್ದು ಆ ಸ್ಥಾನವನ್ನು ಶೀಲಿ ಅವರು ತುಂಬಿದ್ದಾರೆ.

ಪ್ರೊ. ಭೀಮಣ್ಣ ಸುಣಗಾರ, ವೀರೇಶ್, ಡಾ. ತಿಪ್ಪಾರೆಡ್ಡಿ, ಡಾ. ಅಂಜಿನಪ್ಪ, ಡಾ. ಎಂ. ಮಂಜಣ್ಣ, ಡಾ. ಜಕ್ಕವರ ಮಂಜುನಾಥ್, ಡಾ. ಸದಾಶಿವ, ಡಾ. ದಿನೇಶ್, ಡಾ. ತಿರುಮಲ, ಡಾ. ನಾಗರಾಜ್, ಡಾ. ಶಾಂತಕುಮಾರಿ, ರಂಗಸ್ವಾಮಿ, ಚನ್ನಬಸಪ್ಪ, ಬಿ.ಹೆಚ್. ಲಕ್ಷ್ಮಣ್, ವೆಂಕಟೇಶ್ ಬಾಬು, ಗಿರಿಸ್ವಾಮಿ, ಅಮೂಲ್ಯ, ಚಂದ್ರಮ್ಮ, ಡಾ. ಶ್ಯಾಮಲಾ ಮತ್ತಿತರರು ಹಾಜರಿದ್ದರು.


**ಜಂಟಿ ನಿರ್ದೇಶಕರ ಕಛೇರಿ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ದಾವಣಗೆರೆ.**

ನಂ. 49, ಜಿಲ್ಲಾಡಳಿತ ಭವನ, 2ನೇ ಮಹಡಿ, ದಾವಣಗೆರೆ-577066.
E-mail: aclacdvg@gmail.com ದೂ: 08192-255303

ಸಂಖ್ಯೆ:ಜಂ.ನಿ:ಸ್ಥಲೆಪವ.ದಾ.ಗೆರೆ/ಬಾಡಿಗೆ ವಾಹನ/2021-22/
ದಿನಾಂಕ: 05.04.2021

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಜಂಟಿ ನಿರ್ದೇಶಕರು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ದಾವಣಗೆರೆ ಇವರ ಕಛೇರಿಯ ಜಂಟಿ ನಿರ್ದೇಶಕರು ಮತ್ತು ಉಪ ನಿರ್ದೇಶಕರ ಕೆಲಸ ಕಾರ್ಯಗಳಿಗಾಗಿ 2 ವಾಹನವನ್ನು ಅಲ್ಪಾವಧಿ ಟೆಂಡರ್ ಅನುಮೋದಿಸಿದ ದಿನಾಂಕದಿಂದ 2021-22ನೇ ಸಾಲಿನ ಅವಧಿಗೆ ಅಥವಾ ಮುಂದಿನ ಆದೇಶ ಬರುವವರೆಗೆ (ಯಾವುದೋ ಮೊದಲೋ ಅಲ್ಲಿಯವರೆಗೆ) ಹಳದಿ ಬಣ್ಣದ ವಾಹನ ಸಂಖ್ಯೆ ಫಲಕವುಳ್ಳ 4+1 ಆಸನದ ವ್ಯವಸ್ಥೆಯುಳ್ಳ 2017 ಹಾಗೂ ನಂತರದ ಮಾಡಲ್ ಹೊಂದಿದ ಹವಾ ನಿಯಂತ್ರಣ ಸಹಿತ 1200 ಸಿಸಿ ಮೇಲ್ಪಟ್ಟು ಸಾಮಾರ್ಥ್ಯದ ಇಂಜಿನ್ ಹೊಂದಿರುವ ಮೋಟಾರ್ ಕಾರ್ ವಾಹನವನ್ನು ಇಲಾಖಾ ಆದೇಶದನ್ವಯ ಬಾಡಿಗೆಯಂತೆ ಪೂರೈಸಲು/ಸಂಸ್ಥೆ ಮಾಲೀಕರಿಂದ ದ್ವಿ-ಲಕೋಟೆಯಲ್ಲಿ ತಿಂಗಳಿಗೆ 2500 ಕಿ.ಮೀ. ಮತ್ತು ರೂ. 30000/- ( ಒಂದು ವಾಹನಕ್ಕೆ ಎಲ್ಲಾ ತೆರಿಗೆಗಳು ಒಳಗೊಂಡಂತೆ) ಗಳ ಮಿತಿಯಲ್ಲಿ ಇರುವಂತೆ ಅಲ್ಪಾವಧಿ ಟೆಂಡರ್‌ಗನ್ನು ಆಹ್ವಾನಿಸಲಾಗಿದೆ. 1) ಇ-ಟೆಂಡರ್ ಕರೆಯಲಾದ ದಿನಾಂಕ: 05.04.2021, 2) ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15.04.2021 ರಂದು ಸಂಜೆ 5.00, 3) ಇ-ಟೆಂಡರ್ ತೆರೆಯುವ ದಿನಾಂಕ: 16.04.2021 ರಂದು ಸಂಜೆ 5.15, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಲಕೋಟೆ ಪರಿಶೀಲಿಸಿದ ನಂತರ ತೆರೆಯಲಾಗುವುದು. 5) ಇಎಂಡಿ ಮೊತ್ತ: ರೂ. 18000/-, ಇನ್ನೂಳಿದ ಹೆಚ್ಚಿನ ಮಾಹಿತಿಗಾಗಿ eproc.karnataka.gov.in ಅಥವಾ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ವಾಸಾಇ/ದಾವಣಗೆರೆ/18/ಎಂಸಿಎ/2021-22

ಸಹಿ/- ಉಪ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ದಾವಣಗೆರೆ.



**ಬೇಕಾಗಿದ್ದಾರೆ**

Diploma in Hardware Networking / Software ಅನುಭವವುಳ್ಳಂತಹ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುತ್ತದೆ.

ಎ.ಕೆ. ಫಾರ್ಮ್‌ದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.

ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

ಸ್ಥಳ : ಎ.ಕೆ. ಫಾರ್ಮ್, ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.



**ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ದಾವಣಗೆರೆ.**

(ಕೆನರಾ ಬ್ಯಾಂಕ್ ಶತಮಾನೋತ್ಸವ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್ (ರಿ)ನ ಅಂಗ ಸಂಸ್ಥೆ)
(ಭಾರತ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಸಚಿವಾಲಯದ ಆಶ್ರಯದಲ್ಲಿ)
ರೇಷ್ಮೆ ತರಬೇತಿ ಕೇಂದ್ರದ ಆವರಣ, ಹಳೇ ತೋಳಹುಣಸೆ, ದಾವಣಗೆರೆ - 577002.
Sericulture Department Compound, Old Tholhunse, DAVANGERE - 577 002.
ದೂ: 9448565379, 9481977076, Email: cbrsetidvg@gmail.com

Ref: ಸಿ.ಬಿ.ಆರ್.ಸೆ.ಟಿ.ದಾ/2ನೇ ಉಪನ್ಯಾಸಕರ ಹುದ್ದೆ/02/ಎಂ.ಕೆ.ಜಿ. ದಿನಾಂಕ:06.04.2021

**3 ವರ್ಷ ಗುತ್ತಿಗೆ ಆಧಾರಿತವಾಗಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ**

ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ ರೇಷ್ಮೆ ಇಲಾಖೆ ಆವರಣ, ಹಳೇ ತೋಳಹುಣಸೆ, ದಾವಣಗೆರೆಯಲ್ಲಿರುವ ಸಂಸ್ಥೆಯಲ್ಲಿ 3 ವರ್ಷ ಗುತ್ತಿಗೆ ಆಧಾರಿತವಾಗಿ ಒಂದು ಉಪನ್ಯಾಸಕರ ಉದ್ಯೋಗಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆಗೆ ಅನುಗುಣವಾಗಿ ಈ ಕೆಳಕಂಡ ವಿಳಾಸಕ್ಕೆ ಭೇಟಿ ಮಾಡಿ ದಿನಾಂಕ:22.04.2021ರೊಳಗೆ ಅರ್ಜಿಯನ್ನು ಸಲ್ಲಿಸಬೇಕಾಗಿ ಈ ಮೂಲಕ ಕೋರಲಾಗಿದೆ.

ಅರ್ಹತೆ:
1.ವಯಸ್ಸು : 22 ರಿಂದ 30 ವರ್ಷದೊಳಗಿನವರು (ಅನುಭವ ಹೊಂದಿದವರಿಗೆ 5 ವರ್ಷದ ಸಡಿಲಿಕೆಯ ಆದ್ಯತೆ ನೀಡಲಾಗುವುದು)
2. ವಿದ್ಯಾಭ್ಯಾಸ : ಈ ಕೆಳಕಂಡ ವಿಷಯಗಳಲ್ಲಿ ಪದವಿ/ಸ್ನಾತಕೋತ್ತರ ಪದವೀಧರರಾಗಿರಬೇಕು. MA/.M.Com/M.Sc./MSW/B.Sc.in Agriculture or BBM/BA/B.Sc/ B.Com additionally with B.Ed/M.Ed.
ಭಾಷೆಯ ತಿಳುವಳಿಕೆ : ಇಂಗ್ಲೀಷ್ ಮತ್ತು ಕನ್ನಡದಲ್ಲಿ ಸುಲಲಿತವಾಗಿ ಓದಲು ಮತ್ತು ಬರೆಯಲು ಬರುವಂತವರಾಗಿರಬೇಕು ಹಾಗೂ ಹಿಂದಿ ಬರವಣಿಗೆ ಗೊತ್ತಿರುವವರಿಗೆ ಹೆಚ್ಚಿನ ಅರ್ಹತೆಯಾಗಿ ಪರಿಗಣಿಸಲಾಗುವುದು.
4. ಸಂವಹನ ಕಲೆ : ಉತ್ತಮ ಸಂವಹನ ಕಲೆ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.
5. ಕಂಪ್ಯೂಟರ್ ಜ್ಞಾನ : ಎಂ.ಎಸ್.ಆಫೀಸ್, ಇಂಟರ್‌ನೆಟ್ ತಿಳಿದಂತವರಾಗಿರಬೇಕು ಹಾಗೂ ಕನ್ನಡ ಮತ್ತು ಇಂಗ್ಲಿಷ್ ಟೈಪ್ ಮಾಡಲು ಬರಬೇಕು ಹಾಗೂ ಸಾಮಾನ್ಯ ಲೆಕ್ಕಚಾರ ಜ್ಞಾನ ತಿಳಿದಂತವರಾಗಿರಬೇಕು.

* ಅರ್ಜಿ ಸಲ್ಲಿಸಲು ಆಸಕ್ತರಿರುವವರು ಸ್ವ-ವಿವರದ ಮಾಹಿತಿಯೊಂದಿಗೆ ಆಧಾರ್/ವಿಳಾಸದ ದಾಖಲೆ, ವಿದ್ಯಾಭ್ಯಾಸ ಮತ್ತು ಶೈಕ್ಷಣಿಕ ವಿದ್ಯಾರ್ಹತೆಯ ಅಂಕಪಟ್ಟಿಗಳ ಮತ್ತು ಅನುಭವದ ದಾಖಲೆ ಪತ್ರಗಳ ನಕಲು ಪ್ರತಿಯನ್ನು ಲಗತ್ತಿಸುವುದು. ನೇರ ಸಂದರ್ಶನಕ್ಕೆ ಬರುವಾಗ ಮೂಲಪ್ರತಿಗಳನ್ನು ತರುವುದು.
* ಉದ್ಯೋಗದ ಆಯ್ಕೆ : ಲಿಖಿತ ಪರೀಕ್ಷೆ ಮತ್ತು ನೇರ ಸಂದರ್ಶನದ ಮೂಲಕ ನಡೆಸಲಾಗುವುದು.
ವಂದನೆಗಳೊಂದಿಗೆ.

ಸಹಿ/- ನಿರ್ದೇಶಕರು,
ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ,
ದಾವಣಗೆರೆ - 577 002, ದೂ.ಸಂಖ್ಯೆ: 94819 77076/9448565379

ಸೂಚನೆ: ಬಸ್ ವ್ಯವಸ್ಥೆ ಮಾಹಿತಿ: 1. ಹಳೇಬಸ್ ಸ್ಟಾಪ್/ ಹೊಸ ಬಸ್‌ಸ್ಟಾಪ್‌ನಿಂದ ಹೊರಡುವ ಯುನಿವರ್ಸಿಟಿಗೆ ಹೋಗುವ ಬಸ್ಸುಗಳು -ಬಸ್ ನಂಬರ್ 101, ಬಾಡ ಕ್ರಾಸ್/ಸಂತೇಬೆನ್ನೂರಿಗೆ ಹೋಗುವ ಬಸ್‌ಗಳು.
ಬಸ್ ಇಳಿಯುವ ಸ್ಥಳ : ಹಳೆ ತೋಳಹುಣಸೆ ಸ್ಟಾಪ್‌ನಲ್ಲಿ ಇಳಿಯುವುದು, ರೇಷ್ಮೆ ಇಲಾಖೆ ಆವರಣದಲ್ಲಿ ಬರುವುದು.



**ಯುಗಾದಿ ವಿಶೇಷ ಚಿಕಿತ್ಸೆ (ರಿಯಾಯಿತಿ ದರದಲ್ಲಿ)**

ವಸಂತ ಋತುವಿನ ಯುಗಾದಿ ಹಬ್ಬಕ್ಕೆ ದೇಹದ ಅಭ್ಯಂಗ (ಮಸಾಜ್) ಬಹು ಮುಖ್ಯ ಭಾಗ, ದೇಹದ ಮೂಳೆಗಳಿಗೆ, ಚರ್ಮದ ಕಾಂತಿಗೆ ಎಣ್ಣೆ ಅತ್ಯಾವಶ್ಯಕ ಅದರಂತೆ 01.04.2021 ರಿಂದ 11.04.2021 ರವರೆಗೆ ವಿಶೇಷ ರಿಯಾಯಿತಿಯಲ್ಲಿ ಅಭ್ಯಂಗ (ಮಸಾಜ್) ಕೇವಲ 1600 (4 ಜನರಿಗೆ) ನಿಮ್ಮ ಕುಟುಂಬಸ್ಥರು ಅಥವಾ ಆಯ್ದ 4 ಜನ ಸ್ನೇಹಿತರು ಸೇರಿ ಚಿಕಿತ್ಸೆ ಮಾಡಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.

**ಅನ್ವಯ ಆಯುರ್ವೇದ ಆಸ್ಪತ್ರೆ**
ಫೋ; 08192 252228, 86186 42929



**Tools and Tackles**
**ENGINEERING MATERIALS**
* Welding Rods, Drilling Machine
* Cutting Wheels Cutting Machine
Shop No. 6, Plot No. 726/41, yaragunte Village, Karur Industrial Area, Davangere-4.
Ph. : 78929 03435





ನೋಂದಣಿ ಸಂಖ್ಯೆ:-ಎ.ಆರ್.31/ಸೌಹಾರ್ದ/ಆರ್.ಜಿ.ಎನ್/601-2003-04 ಸ್ಥಾಪನೆ:- 23/11/2000

**ಕರಾವಳಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.**

#2688/2, ಶ್ಯಾಮಸುಂದರ ಶೆಟ್ಟಿ ಬಂಟರ ಭವನದ ಹತ್ತಿರ, ಸಪ್ತಗಿರಿ ಸ್ಕೂಲ್ ಹಾಸ್ಟೆಲ್ ಎದುರು, ಕುಂದುವಾಡ ರಸ್ತೆ, ದಾವಣಗೆರೆ.

**ವಾಹನ ಹರಾಜು ಅಂತಿಮ ನೋಟಿಸ್**

ನಮ್ಮ ಸಹಕಾರಿಯ ಗ್ರಾಹಕರಿಗೂ, ಸದಸ್ಯರಿಗೂ ಮತ್ತು ಸಮಸ್ತ ನಾಗರಿಕರಿಗೂ ತಿಳಿಯಪಡಿಸುವುದೇನೆಂದರೆ ನಮ್ಮ ಸಹಕಾರಿಯ ವಾಹನಾಧಾರಿತ [ಹೈಪಾಥಿಕೇಷನ್ ನಿಯಮಾನುಸಾರ ವಾಹನ (ನಾಲ್ಕು ಚಕ್ರ)] ಸಾಲ ಪಡೆದು ವಾಹನ ಸಾಲ ಬಾಕಿಯಾಗಿ ಸಹಕಾರಿಯ ಬೈಲಾ ಮತ್ತು ನಿಯಮಾನುಸಾರ ವಾಹನವನ್ನು ಸೀಜ್ ಮಾಡಿ ಸಹಕಾರಿಯು ಸದರಿ ವಾಹನವನ್ನು ವಶಕ್ಕೆ ಪಡೆದಿದ್ದು, ಅಂತಹ ವಾಹನವನ್ನು ಸಹಕಾರಿಯವರು ದಿನಾಂಕ: 22/04/2021ರ ಗುರುವಾರ ಬೆಳಗ್ಗೆ 11.30 ಸಮಯಕ್ಕೆ ಸರಿಯಾಗಿ ಸಹಕಾರಿಯ (ಕರಾವಳಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., # 2688/2, ಡಾ. ಶ್ಯಾಮಸುಂದರ ಶೆಟ್ಟಿ ಬಂಟರ ಭವನದ ಹತ್ತಿರ, ಸಪ್ತಗಿರಿ ಸ್ಕೂಲ್ ಹಾಸ್ಟೆಲ್ ಎದುರು, ಕುಂದವಾಡ ರಸ್ತೆ, ದಾವಣಗೆರೆ.)ಕಛೇರಿಯಲ್ಲಿ ಸಾರ್ವಜನಿಕ ಬಹಿರಂಗ ಹರಾಜು ಮಾಡಲಾಗುವುದು. ವಾಹನ ಬಾಕಿ ಸಾಲ, ವಾಯಿದೆ ಹಾಗೂ ಇತರೆ ವಿವರಗಳನ್ನು ಈ ಕೆಳಗೆ ನಮೂದಿಸಿದೆ.

| ಕ್ರಮ ಸಂಖ್ಯೆ | ಸಾಲದ ಖಾತೆ ನಂ | ಸಾಲಗಾರರ ಹೆಸರು ಮತ್ತು ವಿಳಾಸ, ಜಾಮೀನುದಾರರ ಹೆಸರು | ಮಂಜೂರಾದ ಸಾಲದ ಮೊಬಲಗು | ಬರಬೇಕಾದ ಬಾಕಿ ಮೊತ್ತ | ವಾಹನದ ವಿವರ ಮತ್ತು ಮಾಡೆಲ್ |
|---|---|---|---|---|---|
| 1. | MVL / 708 | ಸೈಯಿದಾ ಹಾಜಿರಾ ಸುಲ್ತಾನ ಕೋಂ ಶಫಿ ಅಹಮದ್ #3683/1ಎ, 46/48, 11ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ. **ಹಾಲಿ ವಾಸ :** ಫ್ಲಾಟ್ ನಂ:301, 'ಅಜೀಮ್ ರೆಸಿಡೆನ್ಸಿ', 8ನೇ ಮುಖ್ಯ ರಸ್ತೆ, 2ನೇ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು-560004 **ಜಾಮೀನುದಾರ :** ಶಫಿ ಅಹಮದ್.ಸಿ ಮತ್ತು ಬಕ್ಕೇಶ್.ಹೆಚ್.ಬಿ | 7,82,000/- | 9,65,275/- (Till 31-03-2021) | HONDA CARS INDIA LTD, JAZZ 1.5VX MT (I DTEC) BS4, MODEL 2016, KA17 P-8411, CHASSIS NO. MAKGH773DG40XXXXX ENGINE NO. N15A115XXXXX |

**ಸೂಚನೆ :** (1) ವಾಹನ ಹರಾಜಿನಲ್ಲಿ ಭಾಗವಹಿಸುವವರು ರೂ.10,000 ಸಾವಿರ ಮುಂಗಡ ಹಣವನ್ನು ಸಹಕಾರಿಗೆ ಜಮಾ ಮಾಡಿ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. (2) ವಾಹನವನ್ನು ಸೀಜ್ ಮಾಡಿ ಇಟ್ಟಿರುವ ಸ್ಥಳದಲ್ಲಿ ಸಹಕಾರಿಯ ಅನುಮತಿ ಪಡೆದು ವೀಕ್ಷಿಸಬಹುದು. ಅತ್ಯಧಿಕ ಬಿಡ್ ಮಾಡಿದವರಿಗೆ ವಾಹನವನ್ನು ಬಿಟ್ಟು ಕೊಡಲಾಗುವುದು. (3) ಅತ್ಯಧಿಕ ಬಿಡ್ ಮಾಡಿದವರು ಹರಾಜು ಆದ ಕ್ಷಣದಲ್ಲಿ ಬಿಡ್ ಮಾಡಿದ ಶೇ.50 ರಷ್ಟು ಹಣವನ್ನು ಸಹಕಾರಿಗೆ ಜಮಾ ಮಾಡಿ ಉಳಿದ ಹಣವನ್ನು ಒಂದು ವಾರದೊಳಗೆ ಪಾವತಿ ಮಾಡಿ ವಾಹನವನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳುವುದು. ಮೋಟಾರ್ ಕಾಯ್ದೆ ಅನ್ವಯ ವಾಹನವನ್ನು ತಮ್ಮ ವಶಕ್ಕೆ ಪಡೆಯಬಹುದಾಗಿದೆ. (4) ಹರಾಜು ಪ್ರಕ್ರಿಯೆಯನ್ನು ಒಪ್ಪುವುದು ಅಥವಾ ತಿರಸ್ಕರಿಸುವುದು ಸಹಕಾರಿಯ ಅಧಿಕಾರಕ್ಕೆ ಹಾಗೂ ಮಾರಾಟಾಧಿಕಾರಿಗಳಿಗೆ ಸೀಮಿತವಾಗಿರುತ್ತದೆ. (5) ಇನ್ನುಳಿದ ಷರತ್ತು ಕಾಯಿದೆ ನಿಯಮಾನುಸಾರಗಳಂತೆ ಒಳಪಟ್ಟಿರುತ್ತದೆ. (6) ಸಾಲದ ಮೊತ್ತಕ್ಕಿಂತ ಕಡಿಮೆ ಬಿಡ್ ಆಗಿದ್ದಲ್ಲಿ ಉಳಿದ ಮೊತ್ತಕ್ಕೆ ಸಹಕಾರಿಯ ವತಿಯಿಂದ ಸಾಲಗಾರರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು. (7) ವಾಹನ ವರ್ಗಾವಣೆಗೆ ತಗುಲುವ ಹಾಗೂ ಇನ್ನು ಯಾವುದೇ ಶುಲ್ಕಗಳನ್ನು ಯಶಸ್ವಿ ಹರಾಜುಗಾರರೇ ಭರಿಸತಕ್ಕದ್ದು.

ಸಹಿ/- (ಸಿ.ಎ. ಉಮೇಶ್ ಶೆಟ್ಟಿ) ಅಧ್ಯಕ್ಷರು

ಸಹಿ/- (ಖಲೀಲ್ ಅಹಮದ್) ಕಾರ್ಯದರ್ಶಿ

ಸಹಿ/- ಮಾರಾಟಾಧಿಕಾರಿಗಳು ಸ.ಸಂ.ಸ.ನಿ ಕಛೇರಿ, ದಾವಣಗೆರೆ.

# ಜಿಲ್ಲಾಸ್ಪತ್ರೆಗೆ ಜಿಲ್ಲಾಧಿಕಾರಿ ದಿಢೀರ್ ಭೇಟಿ



(1ನೇ ಪುಟದಿಂದ) ತಿಳಿಸಿದರು. ಚಿಕಿತ್ಸೆಗೆ ಬರುವ ರೋಗಿಗಳಿಗೆ ತೊಂದರೆಯಾಗದ ಹಾಗೆ ವ್ಯವಸ್ಥಿತವಾಗಿ ಎಲ್ಲಾ ಸೌಕರ್ಯಗಳು ಸಿಗುವಂತೆ ಕೂಡಲೇ ಕ್ರಮ ಕೈಗೊಳ್ಳುವಂತೆ ಸೂಚಿಸಿದ ಅವರು ಸರ್ಕಾರದ ಅನುದಾನವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲು ಹಾಗೂ ಸಾರ್ವಜನಿಕರಿಂದ ದೂರುಗಳು ಬಂದಲ್ಲಿ ಅವುಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚನೆ ನೀಡಿದರು. ಅಲ್ಲದೇ ಕೋವಿಡ್ 19 ಸಾಂಕ್ರಾಮಿಕ ರೋಗಕ್ಕೆ ಎದೆಗುಂದದೆ ಹಗಲು, ರಾತ್ರಿ ಕಾರ್ಯ ನಿರ್ವಹಿಸುವುದು ಅನಿವಾರ್ಯವಾಗಿದ್ದು, ಈ ಕುರಿತು ಯಾರೂ ಕೂಡ ನಿರ್ಲಕ್ಷ್ಯ ತೋರದೆ ಮಾನವೀಯತೆಯಿಂದ ಕಾರ್ಯ ನಿರ್ವಹಿಸುವಂತೆ ಅವರಲ್ಲಿ ಆತ್ಮಸ್ಥೈರ್ಯ ತುಂಬಿದರು.

ಆಸ್ಪತ್ರೆ ಭೇಟಿ ಮುಗಿದ ನಂತರ ನಗರ ಪ್ರದಕ್ಷಿಣೆ ಸಮಯದಲ್ಲಿ ಮೋತಿ ವೀರಪ್ಪ ಕಾಲೇಜಿನ ಮುಂಭಾಗ ಕೆಲ ವಿದ್ಯಾರ್ಥಿಗಳು ಮಾಸ್ಕ್ ಹಾಕದೇ ಇರುವುದನ್ನು ಗಮನಿಸಿ, ಅವರುಗಳಿಗೆ ಬುದ್ದಿ ಹೇಳಿ ಪುನಃ ತಪ್ಪಾಗದಂತೆ ಸರ್ಕಾರದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಚ್ಚರಿಕೆ ನೀಡಿದರು.

## ಜಿ.ಟಿ. ದೇವೇಗೌಡ ಸಹಕಾರ ಮಹಾಮಂಡಳ ಅಧ್ಯಕ್ಷ



ಬೆಂಗಳೂರು, ಏ. 6 - ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಮಾಜಿ ಸಚಿವ ಜಿ.ಟಿ.ದೇವೇಗೌಡ ಹಾಗೂ ಉಪಾಧ್ಯಕ್ಷರಾಗಿ ಜಗದೀಶ್ ಎಂ. ಕವಟಗಿಮಠ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮಹಾಮಂಡಳದ ನೂತನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಸ್ಥಾನಗಳಿಗೆ ಇಂದು ನಡೆದ ಚುನಾವಣೆಯಲ್ಲಿ ಈ ಇಬ್ಬರು ಮಾತ್ರ ಅಭ್ಯರ್ಥಿಗಳಾಗಿದ್ದರಿಂದ ಚುನಾವಣಾಧಿಕಾರಿ ಮನೋಜ್‌ಚಂದ್ರ ಇವರುಗಳ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

## ನಾಳೆ ಜನಸ್ಪಂದನ ಸಭೆ

ದಾವಣಗೆರೆ, ಏ. 6- ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಏ.8 ರಂದು ಬೆಳಿಗ್ಗೆ 10 ಗಂಟೆಗೆ ಜನಸ್ಪಂದನ ಸಭೆ ಏರ್ಪಡಿಸಲಾಗಿದ್ದು, ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಾ ಗುವುದು. ಸಾರ್ವಜನಿಕರು ತಮ್ಮ ಅಹವಾಲು ಗಳೊಂದಿಗೆ ಹಾಜರಾಗಿ ಜನಸ್ಪಂದನ ಸಭೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.


WALK IN INTERVIEW

TANISHQ a part of Titan Company Ltd., is India's No.1 Jewellery Brand with 350+ Showroom. TANISHQ is looking for dynamic, dedicated and hardworking professionals to be part of its growth phase in our franchisee showroom at Davanagere, Karnataka.

STORE MANAGER - 01

Minimum Education: MBA with English Medium, Good Computer Skill.

Date of Interview: 08-04-2021
Time: 11.00 AM to 1.00 PM

Tanishq Jewellery Showroom
# 371/271, P.B.Road, Avaragere, Davanagere.
Ph: 70220 01204

TANISHQ A TATA Product

Photo copies of Educational/ Documents along with passport size photograph are compulsory for above mentioned jobs. Those who can't attend interview on given dates send your profile to hr@kjhyundai.in



ಬಾಪೂಜಿ ವಿದ್ಯಾಸಂಸ್ಥೆ
ಪಿ.ಜೆ. ಬಡಾವಣೆ, ದಾವಣಗೆರೆ-577002
ದೂರವಾಣಿ : (08192) 251302, 250659, 253550, 230236
ಫ್ಯಾಕ್ಸ್-91-8192-231201

ವಾಹನಗಳ ಹರಾಜು ನೋಟೀಸ್

ಬಾಪೂಜಿ ವಿದ್ಯಾಸಂಸ್ಥೆಯ ಈ ಕೆಳಕಂಡ ಅಂಗ ಸಂಸ್ಥೆಗಳ ಹೆಸರಿನಲ್ಲಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ನೋಂದಾವಣೆ ರದ್ದುಪಡಿಸಲ್ಪಟ್ಟ ಈ ಕೆಳಕಂಡ ವಾಹನಗಳನ್ನು ಎಲ್ಲಿ ಹೇಗೆ ಇವೆಯೊ ಹಾಗೆ ಹರಾಜು ಮೂಲಕ ಕೆಳಕಂಡ ನಿಬಂಧನೆಗೊಳಪಟ್ಟು ದಿನಾಂಕ : 10.04.2021 ರಂದು ಶನಿವಾರ ಸಾಯಂಕಾಲ 6.00 ಗಂಟೆಗೆ ದಾವಣಗೆರೆ ಪಿ.ಜೆ. ಬಡಾವಣೆಯಲ್ಲಿರುವ ಬಾಪೂಜಿ ವಿದ್ಯಾಸಂಸ್ಥೆಯ ಒಳಾಂಗಣದಲ್ಲಿ ಮಾರಾಟ ಮಾಡಲಾಗುವುದು. ವಾಹನಗಳನ್ನು ಅದೇ ದಿನಾಂಕ ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 5-00 ಗಂಟೆಯವರೆಗೆ ಈ ಕೆಳಗೆ ಕೊಟ್ಟಿರುವ ಸ್ಥಳದಲ್ಲಿ ನೋಡಬಹುದು. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಬಾಪೂಜಿ ವಿದ್ಯಾಸಂಸ್ಥೆಯ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಹರಾಜು ವಾಹನಗಳನ್ನು ನೋಡುವ ಸ್ಥಳ

1) ಕಾಲೇಜ್ ಬಸ್ : ಪ್ರಿನ್ಸಿಪಾಲ್, ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್, ಎಸ್.ಎಸ್. ಜನರಲ್ ಆಸ್ಪತ್ರೆ, ಕೆ.ಆರ್. ರಸ್ತೆ, ದಾವಣಗೆರೆ. ಕಾಲೇಜ್ ಬಸ್ಸಿನ Registration No :KA-17 A-2659, Registration Year :2006, Tata Motors.

2) ಅಂಬುಲೆನ್ಸ್ ವಾಹನ : ಪ್ರಿನ್ಸಿಪಾಲ್.ಜೆ.ಜೆ.ಎಂ. ಮೆಡಿಕಲ್ ಕಾಲೇಜ್, ಪಿ.ಜೆ. ಬಡಾವಣೆ, ದಾವಣಗೆರೆ ಬಾಪೂಜಿ ಸಭಾಂಗಣದ ಆವರಣದಲ್ಲಿ ಅಂಬುಲೆನ್ಸ್ ವಾಹನದ Registration No :KA-17 A-0509, Registration Year :2004, Bajaj Tempo Limited.

ಹರಾಜಿನಲ್ಲಿ ಭಾಗವಹಿಸುವವರು ಕೆಳಕಂಡ ಷರತ್ತುಗಳಿಗೊಳಪಟ್ಟಿರುತ್ತಾರೆ.

1) ಹರಾಜಿನಲ್ಲಿ ಭಾಗವಹಿಸುವವರು ರೂ. 10,000/-(ಹತ್ತು ಸಾವಿರ ರೂಪಾಯಿ)ಗಳನ್ನು ಪ್ರತಿ ವಾಹನಕ್ಕೆ ನಗದಾಗಿ ಹರಾಜಿಗೆ ಮುನ್ನ ಠೇವಣಿ ಇಟ್ಟು ರಸೀದಿ ಪಡೆದವರಾಗಿರಬೇಕು.

2) ಹರಾಜು ಯಾರಿಗೆ ನಿಲ್ಲುತ್ತದೆಯೋ ಅವರು ಕೊಳ್ಳಲು ಒಪ್ಪಿದ ಪ್ರತಿ ವಾಹನದ ಮೊಬಲಗಿನ ಶೇಕಡಾ 25 ಭಾಗದ ಹಣವನ್ನು ಹರಾಜು ಮುಗಿದ ತಕ್ಷಣ ಕೊಡತಕ್ಕದ್ದು. ಹಾಗೆ ಮಾಡದಿದ್ದಲ್ಲಿ ಹರಾಜು ರದ್ದುಗೊಳಿಸಲಾಗುತ್ತದೆ ಮತ್ತು ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

3) ಶೇಕಡಾ 25 ಭಾಗವನ್ನು ಕಟ್ಟಿದ ನಂತರ ಕೊಳ್ಳಲು ಒಪ್ಪಿರುವವರು ಉಳಿದ ಹಣವನ್ನು ಒಂದು ವಾರದೊಳಗೆ ಪಾವತಿ ಮಾಡಿ ಸಂಬಂಧಿಸಿದ ವಾಹನವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳತಕ್ಕದ್ದು.

4) ಹಾಗೆ ಒಂದು ವಾರದಲ್ಲಿ ಉಳಿದ ಹಣವನ್ನು ಸಂಸ್ಥೆಗೆ ಕಟ್ಟಲು ತಪ್ಪಿದಲ್ಲಿ ಈ ವಿಷಯದ ಬಗ್ಗೆ ಯಾವ ನೋಟೀಸ್ ಕೊಡದೆ ಕಟ್ಟಿದ ಎಲ್ಲಾ ಹಣವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

5) ನಿಯಮಾನುಸಾರ ವಾಹನವನ್ನು ಸ್ವಾಧೀನಕ್ಕೆ ತೆಗೆದುಕೊಂಡವರು ಆ ವಾಹನಕ್ಕೆ ಸಂಬಂಧಪಟ್ಟಂತೆ ನೋಂದಣಿ ಪತ್ರ ಹಾಗೂ ದಾಖಲಾತಿಗಳನ್ನು ಅವರ ಹೆಸರಿಗೆ ಕೂಡಲೇ ವರ್ಗಾಯಿಸತಕ್ಕದ್ದು.

6) ಸವಾಲುಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ಕೆಳ ಸಹಿದಾರರು ಕಾದಿರಿಸಿಕೊಂಡಿದ್ದಾರೆ. ಈ ವಿಷಯದ ಬಗ್ಗೆ ಯಾವುದೇ ತಕರಾರುಗಳನ್ನು ಅಂಗೀಕರಿಸುವುದಿಲ್ಲ.

ಸಹಿ/- ಡಾ. ಶಾಮನೂರು ಶಿವಶಂಕರಪ್ಪ
ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ.





ದಾವಣಗೆರೆ ಹಾಗೂ ಚಿತ್ರದುರ್ಗ ತಾಲ್ಲೂಕುಗಳಿಗೆ ಡೀಲರ್ಸ್ ಬೇಕಾಗಿದ್ದಾರೆ

PEACE ENTERPRISES
SUPER STOCKIST : DAVANGERE, CHITRADURGA
Ganesh Temple Building, Opp. : Bakkeshwara High School, Nijalingappa Layout, Davangere. E-mailID : peacedvgmarketing@gmail.com
9880156667, 8310042490, 9901318277






ದಿನಾಂಕ 07.04.2021ರ ಇಂದು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಉದ್ಘಾಟನೆ/ ಭೂಮಿಪೂಜೆ

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಉದ್ಘಾಟನೆಯ ಸಮಯ | ಅನುಷ್ಠಾನ ಮಾಡಿದ ಇಲಾಖೆ ಮತ್ತು ಸಮಾರಂಭ ಏರ್ಪಡಿಸುವ ಇಲಾಖೆ |
|---|---|---|---|---|
| | ಹೊಸಬೆಳವನೂರು | | | |
| 1 | ಸೇವಾಲಾಲ್ ಸಮುದಾಯ ಭವನ | 12.00 | 12.00 ಗಂಟೆಗೆ | ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ |
| 2 | ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ. (ಭೂಮಿ ಪೂಜೆ) | 12.00 | 12.10 ಗಂಟೆಗೆ | ನಿರ್ಮಿತಿ ಕೇಂದ್ರ |
| 3 | ಪಶು ಸಂಗೋಪನಾ ಆಸ್ಪತ್ರೆ | 35.00 | 12.20 ಗಂಟೆಗೆ | ನಿರ್ಮಿತಿ ಕೇಂದ್ರ |
| 4 | ಡಾ|| ಬಿ.ಆರ್.ಅಂಬೇಡ್ಕರ್ ಭವನ | 10.00 | 12.30 ಗಂಟೆಗೆ | ನಿರ್ಮಿತಿ ಕೇಂದ್ರ |
| 5 | 500 ಮೆಟ್ರಿಕ್ ಟನ್ ಸಾಮರ್ಥ್ಯದ ಎ.ಪಿ.ಎಂ.ಸಿ. ಗೋಡೌನ್ | 50.00 | 12.45 ಗಂಟೆಗೆ | ಎ.ಪಿ.ಎಂ.ಸಿ./ ಗ್ರಾಮ ಪಂಚಾಯ್ತಿ |
| | ತುರ್ಚಘಟ್ಟ | | | |
| 6 | ಡಿಜಿಟಲ್ ಲೈಬ್ರರಿ ಮತ್ತು ವ್ಯಾಯಾಮಶಾಲೆ | 24.00 | 1.00 ಗಂಟೆಗೆ | ಜಿಲ್ಲಾ ಪಂಚಾಯ್ತಿ ಇಂಜನಿಯರಿಂಗ್ ವಿಭಾಗ |
| 7 | ಶ್ರೀ ಬಾಣದ ರಂಗನಾಥಸ್ವಾಮಿ ಸಮುದಾಯ ಭವನ | 25.00 | 1.10 ಗಂಟೆಗೆ | ತಾಲ್ಲೂಕು ಪಂಚಾಯತ್ |
| 8 | ಹೈಸ್ಕೂಲ್ ಕೊಠಡಿ | 31.50 | 1.30 ಗಂಟೆಗೆ | ಜಿಲ್ಲಾ ಪಂಚಾಯ್ತಿ ಇಂಜನಿಯರಿಂಗ್ ವಿಭಾಗ |
| 9 | 1000 ಮೆಟ್ರಿಕ್ ಟನ್ ಸಾಮರ್ಥ್ಯದ ಎ.ಪಿ.ಎಂ.ಸಿ. ಗೋಡೌನ್ | 100.00 | 2.00 ಗಂಟೆಗೆ | ಎ.ಪಿ.ಎಂ.ಸಿ./ಗ್ರಾಮ ಪಂಚಾಯ್ತಿ |
| | ಚಂದ್ರನಹಳ್ಳಿ | | | |
| 10 | ಸ.ಹಿ.ಪ್ರಾ, ಶಾಲೆಯ 2 ಹೆಚ್ಚುವರಿ ಕೊಠಡಿಗಳ ನಿರ್ಮಾಣ | 24.00 | 2.30 ಗಂಟೆಗೆ | ಲೋಕೋಪಯೋಗಿ ಇಲಾಖೆ |
| | ಹೊಸ ಜಿಸಲೇರಿ | | | |
| 11 | ಸ.ಹಿ.ಪ್ರಾ, ಶಾಲೆಯ 2 ಹೆಚ್ಚುವರಿ ಕೊಠಡಿಗಳ ನಿರ್ಮಾಣ | 21.20 | 2.45 ಗಂಟೆಗೆ | ಲೋಕೋಪಯೋಗಿ ಇಲಾಖೆ |

ಉದ್ಘಾಟನೆ ಮತ್ತು ಭೂಮಿಪೂಜೆ ಸಮಾರಂಭಕ್ಕೆ ಆಗಮಿಸುತ್ತಿರುವ ಸನ್ಮಾನ್ಯ ಮಾಜಿ ಸಚಿವರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ|| ಶಾಮನೂರು ಶಿವಶಂಕರಪ್ಪ ಅವರಿಗೂ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಎ.ಪಿ.ಎಂ.ಸಿ ಮತ್ತು ಗ್ರಾಮ ಪಂಚಾಯಿತಿಯ ಎಲ್ಲಾ ಕಾಂಗ್ರೆಸ್ ಸದಸ್ಯರುಗಳಿಗೂ, ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರುಗಳಿಗೂ ಹಾಗೂ ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ ಹೃದಯಪೂರ್ವಕ ಸ್ವಾಗತ ಸುಸ್ವಾಗತ

ಸ್ವಾಗತ ಕೋರುವವರು: ಹೊಸಬೆಳವನೂರು, ತುರ್ಚಘಟ್ಟ, ಚಂದ್ರನಹಳ್ಳಿ, ಹೊಸ ಜಿಸಲೇರಿ ಗ್ರಾಮದ ಮುಖಂಡರುಗಳು ಹಾಗೂ ಸಮಸ್ತ ಗ್ರಾಮಸ್ಥರು









ಹೃದಯಪೂರ್ವಕ ಅಭಿನಂದನೆಗಳು

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಇದರ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಮಾಜಿ ಸಚಿವರೂ, ಹಾಲಿ ಶಾಸಕರೂ ಆದ ಹಿರಿಯ ಸಹಕಾರಿ ಧುರೀಣ ಶ್ರೀ ಜಿ.ಟಿ. ದೇವೇಗೌಡ ಅವರಿಗೂ ಮತ್ತು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಬೆಳಗಾವಿಯ ಶ್ರೀ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ ಅವರಿಗೂ ಹೃದಯಪೂರ್ವಕ ಅಭಿನಂದನೆಗಳು.

ದಾವಣಗೆರೆ ಜಿಲ್ಲಾ ಯೂನಿಯನ್ ನಿಯಮಿತ
ಜನತಾ ಬಜಾರ್ ಕಾಂಪ್ಲೆಕ್ಸ್, ದಾವಣಗೆರೆ - 577 002.

ಎನ್.ಎ. ಮುರುಗೇಶ್ ಅಧ್ಯಕ್ಷರು

ಸಂಘದ ಆಡಳಿತ ಮಂಡಳಿ

ಹೆಚ್. ಬಸವರಾಜಪ್ಪ ಉಪಾಧ್ಯಕ್ಷರು



ಬಿ.ವಿ. ಚಂದ್ರಶೇಖರ್ ನಿರ್ದೇಶಕರು | ಡಾ. ಜಿ.ಆರ್. ಷಣ್ಮುಖಪ್ಪ ನಿರ್ದೇಶಕರು | ಗಿಡ್ಡಳ್ಳಿ ನಾಗರಾಜ್ ನಿರ್ದೇಶಕರು | ಎಸ್.ಬಿ. ಶಿವಕುಮಾರ್ ನಿರ್ದೇಶಕರು | ಸಿರಿಗೆರೆ ರಾಜಣ್ಣ ನಿರ್ದೇಶಕರು | ಟಿ. ರಾಜಣ್ಣ ನಿರ್ದೇಶಕರು | ಆರ್.ಎಂ. ಮಾಲತೇಶ್ ನಿರ್ದೇಶಕರು | ಡಿ.ಎಂ. ಮುರುಗೇಂದ್ರಯ್ಯ ನಿರ್ದೇಶಕರು | ಅನ್ನಪೂರ್ಣ ನಿರ್ದೇಶಕರು | ಡಿ. ಶಿವಗಂಗಮ್ಮ ನಿರ್ದೇಶಕರು | ಜಯಪ್ರಕಾಶ್ ಬಿ. ಪದನಿಮಿತ್ತ ನಿರ್ದೇಶಕರು ಹಾಗೂ ಸಹಕಾರ ಸಂಘಗಳ ಉಪನಿಬಂಧಕರು | ಕೆ.ಹೆಚ್. ಸಂತೋಷ್‌ಕುಮಾರ್ ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte